




ಮಂಡ್ಯ ಜಿಲ್ಲೆಯ

# ಜನಪದ ಕಲಾವಿದರು

ಡಾ. ಜಿ.ವಿ. ದಾಸೇಗೌಡ





ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

## ಮಂಡ್ಯ ಜಿಲ್ಲೆಯ

# ಜನಪದ ಕಲಾವಿದರು

ಡಾ. ಜಿ.ವಿ. ದಾಸೇಗೌಡ

ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

**MANDYA JILLEYA JANAPADA KALAVIDARU**
**Editor: Dr. G.V. Dasegowda**

| | | |
|---|---|---|
| Published by | : | **Dr. S. Prasadaswamy**<br>Registrar<br>Karnataka Janapada Academy<br>Kannada Bhavana, J.C. Road<br>Bangaluru-560 002, Ph : 080-22215509 |
| Pages | : | xiv+124=138 |
| First Impression | : | 2010 |
| Paper | : | N.S. 70 GSM |
| Price | : | Rs. 60/- |
| © | : | Karnataka Janapada Academy |
| Size | : | 1/8 Demy |
| Copies | : | 500 |
| ಪುಟಗಳು | : | xiv+124=138 |
| ಮೊದಲ ಮುದ್ರಣ | : | 2010 |
| ಕಾಗದ | : | ಎನ್.ಎಸ್. 70 ಜಿ.ಎಸ್.ಎಂ. |
| ಬೆಲೆ | : | ರೂ. ೬೦/- |
| © | : | ಕರ್ನಾಟಕ ಜಾನಪದ ಅಕಾಡೆಮಿ |
| ಸೈಜ್ | : | 1/8 ಡೆಮಿ |
| ಪ್ರತಿ | : | 500 |
| ಮುಖಪುಟ | : | ಮೋಹನ್ |
| ಪ್ರಕಾಶಕರು | : | **ಡಾ. ಎಸ್. ಪ್ರಸಾದಸ್ವಾಮಿ**<br>ರಿಜಿಸ್ಟ್ರಾರ್<br>ಕರ್ನಾಟಕ ಜಾನಪದ ಅಕಾಡೆಮಿ<br>ಕನ್ನಡ ಭವನ, ಜೆ.ಸಿ. ರಸ್ತೆ<br>ಬೆಂಗಳೂರು-೫೬೦ ೦೦೨. |
| ಮುದ್ರಕರು | : | **ಮೋಹನ್ ಗ್ರಾಫಿಕ್ಸ್**<br>ನಂ. ೪೦, ರಾಜಗೋಪಾಲನಗರ ಮುಖ್ಯರಸ್ತೆ<br>ಪೀಣ್ಯ ೨ನೇ ಹಂತ, ಬೆಂಗಳೂರು-೫೮.<br>ದೂ. : ೨೮೩೬೫೫೪೦, ៩೯೦೨೮೨೯೦೧៩ |

# ಅಧ್ಯಕ್ಷರ ನುಡಿ

ಅಕಾಡೆಮಿ ಈ ಅವಧಿಯಲ್ಲಿ ಮಹತ್ವದ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಜಾನಪದದ ಬೌದ್ಧಿಕ ಅಧ್ಯಯನ ಹಾಗೂ ಪ್ರದರ್ಶನ, ಸಂರಕ್ಷಣೆಗಳು ಈ ಯೋಜನೆಯ ಹಿನ್ನೆಲೆಯಾಗಿವೆ. ಪ್ರಕಟಣೆಗೆ ಒತ್ತು ನೀಡುವ ಅಗತ್ಯ-ಸಂದರ್ಭಗಳ ಕಾರಣದಿಂದ ತ್ರೈವಾಸಿಕ, ಮಹಾಪ್ರಬಂಧ, ಅಪ್ರಕಟಿತ ಲೇಖನ ಸಂಗ್ರಹಗಳ ಪ್ರಕಟಣೆಯ ಜೊತೆ ಜಾನಪದಕ್ಕಾಗಿ ದುಡಿದಿರುವ, ಬದುಕನ್ನು ಮುಡಿಪಾಗಿಟ್ಟಿರುವ ಕಲಾವಿದರ ಪರಿಚಯದ ಕೃತಿಗಳು ಈ ದಿಸೆಯಲ್ಲಿ ಮುಖ್ಯವಾದುವು.

'ಜಾನಪದ ತಲೆಮಾರು' ಮಾಲಿಕೆಯ ಐದನೆ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ. ಇದರೊಡನೆ ಕನ್ನಡ, ಇಂಗ್ಲಿಷ್‌ನಲ್ಲಿ ಜಾನಪದ ಕುರಿತ ಗ್ರಂಥವೊಂದರ ಪ್ರಕಟಣೆಯ ಯೋಜನೆಯಿದೆ.

ಮಂಡ್ಯ ಜಿಲ್ಲೆಯ ಕಲಾವಿದರ ಪರಿಚಯದ ಈ ಕೃತಿ ಮಾಹಿತಿಯುಕ್ತ. ಸರಳತೆ, ಸ್ಪಷ್ಟತೆ ಇದರ ಗುಣ. ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಈ ಪ್ರಯತ್ನ ಜನಪದರ ಅಸ್ತಿತ್ವದ ಗುರುತೂ ಹೌದು. 'ಬೆಳ್ಳಿ ಮಾಲಿಕೆ'ಯ ಈ ಕೃತಿಯನ್ನು ರೂಪಿಸಿದ ಡಾ. ಜಿ.ವಿ. ದಾಸೇಗೌಡ ಅವರಿಗೆ, ಸಹಕರಿಸುತ್ತಿರುವ ಅಕಾಡೆಮಿ ಸದಸ್ಯರಿಗೆ, ರಿಜಿಸ್ಟ್ರಾರ್ ಅವರಿಗೆ, ಕಛೇರಿ ಸಿಬ್ಬಂದಿಗೆ ಮತ್ತು ಓದುಗರಿಗೆ ಕೃತಜ್ಞತೆಗಳು.

**ಗೊ.ರು. ಚನ್ನಬಸಪ್ಪ**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

ಬೆಂಗಳೂರು
೧.೭.೨೦೧೦

# ಕೆಲಮಾತು

ಅಕಾಡೆಮಿಗೆ ೨೫ ವರ್ಷ ತುಂಬಿದ ನೆನಪಿನ 'ಬೆಳ್ಳಿ ಮಾಲಿಕೆ' ಯಲ್ಲಿ ಈಗಾಗಲೇ ಹನ್ನೆರಡು ಪುಸ್ತಕ ಹೊರಬಂದಿವೆ. ಇದು ಸೇರಿ ಹದಿಮೂರು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅಕಾಡೆಮಿ ಮಹತ್ವದ ಹೆಜ್ಜೆಗುರುತುಗಳನ್ನು ದಾಖಲಿಸಿದೆ. ಈ ಹಿಂದಿನ ಅಧ್ಯಕ್ಷರು ಒಂದೊಂದು ಆಯಾಮ ಜೋಡಿಸಿ ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಬಹುಮುಖಿ ಹಾಗೂ ಜನಮುಖಿತ್ವಗಳನ್ನು ಕಲ್ಪಿಸಿರುವುದು ವೇದ್ಯ.

ಮಾನ್ಯ ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಅಕಾಡೆಮಿ ಇನ್ನಷ್ಟು ಕ್ರಿಯಾಶೀಲವಾಗಿದೆ. 'ಜನಪದ ಜಗಲಿ', 'ಜಾನಪದ ಸಂಭ್ರಮ', 'ಗ್ರಾಮೀಣ ಚಿತ್ರಕಲಾ ಪ್ರದರ್ಶನ' ಮೊದಲಾದ ಹಲವು ಹತ್ತು ಯೋಜನೆಗಳು ಕಾರ್ಯಗತವಾಗುತ್ತಲಿವೆ. ಅಂತೆಯೇ 'ಜಾನಪದ ತಲೆಮಾರು' ಮಾಲಿಕೆಯ ಐದನೇ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲಾ 'ಕಲಾವಿದರ ಪರಿಚಯ ಮಾಲಿಕೆ' ಯೋಜನೆ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಗ್ರಾಮೀಣ ಪ್ರತಿಭೆಗಳ ಅನಾವರಣಕ್ಕೆ, ಪರಿಚಯಕ್ಕೆ ಉತ್ತಮ ವೇದಿಕೆಯಾಗಿರುವ ಈ ಯೋಜನೆಗೆ ಅಕಾಡೆಮಿ ಮರುಚಾಲನೆ ನೀಡಿದೆ.

'ಬೆಳ್ಳಿ ಮಾಲಿಕೆ'ಯ ಸರಣಿಗೆ ಈ ಕೃತಿ ಹೊಸ ಸೇರ್ಪಡೆ. ಮಂಡ್ಯ ಜಿಲ್ಲೆಯ ಜಾನಪದ ಕಲಾವಿದರನ್ನು ಕುರಿತ ಈ ಕೃತಿ ಮಾಹಿತಿಗಳ ತೌರಾಗಿದೆ. ಕನ್ನಡ ಸಂಸ್ಕೃತಿಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುತ್ತಿರುವ ಈ ಅಪೂರ್ವ ಕಲಾವಿದರ ಮಾಹಿತಿ ನೀಡುವ ಈ ಕೃತಿ ಅಕಾಡೆಮಿಯ ಹೆಮ್ಮೆಯ ಪ್ರಕಟಣೆಯಾಗಿದೆ.

ಈ ಕಲಾವಿದರ ಮಾಹಿತಿಯನ್ನು ಕಲೆಹಾಕಿ, ಸಂಗ್ರಹಗೊಳಿಸಿ, ಸೂಕ್ತ ಪ್ರಸ್ತಾವನೆ ನೀಡಿರುವ ಡಾ. ಜಿ.ವಿ. ದಾಸೇಗೌಡ ಅವರಿಗೆ, ಅಂತೆಯೇ ಅಕಾಡಮಿ ಸದಸ್ಯರಿಗೆ ಮತ್ತು ಸ್ಥಾಯಿಸಮಿತಿ ನೀಡಿದ ಸಹಕಾರಕ್ಕಾಗಿ ವಿಶೇಷ ನೆನೆಕೆಗಳು.

ಅಕಾಡೆಮಿಯ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಜಯರಾಮರಾಜೇ ಅರಸು ಅವರಿಗೆ, ಆಗಾಗ ಸೂಕ್ತ ಸಲಹೆಗಳ ಮೂಲಕ ಅಕಾಡೆಮಿಯ ಕಾರ್ಯಗಳಿಗೆ ನಿರ್ದಿಷ್ಟತೆಯನ್ನು ಒದಗಿಸಿರುವ ಕನ್ನಡ ಮತ್ತು ಸಂಸ್ಕತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೆ ವಂದನೆಗಳು.

ಅಕಾಡೆಮಿಯ ಸಿಬ್ಬಂದಿಗಳಾದ ಪ್ರಕಾಶ್, ನಾಗರತ್ನ, ಶಿವಲಿಂಗಯ್ಯ, ಕಲ್ಪನಾ ಅವರ ಸಹಕಾರ ಅಪೂರ್ವವಾದುದು.

ಈ ಕೃತಿಯ ಕರಡು ತಿದ್ದಿ, ಪುಸ್ತಕದ ಸೊಗಸಿಗೆ ಕಾರಣರಾಗಿರುವ ಡಾ. ಜಿ.ವಿ. ದಾಸೇಗೌಡ ಅವರಿಗೆ, ಸುಂದರವಾಗಿ ಮುದ್ರಿಸಿರುವ ಮೋಹನ್ ಗ್ರಾಫಿಕ್ಸ್ ಅವರಿಗೆ, ಓದುವ ಸಹೃದಯರಿಗೆ ಅನಂತ ನಮನಗಳು.

ಡಾ. ಎಸ್. ಪ್ರಸಾದಸ್ವಾಮಿ
ರಿಜಿಸ್ಟ್ರಾರ್

# ಕ್ಷೇತ್ರ ಕಾರ್ಯದ ಹಾದಿಯಲ್ಲಿ....

ಮಂಡ್ಯ ಜಿಲ್ಲೆಯ ಜನಪದ ಕಲಾವಿದರ ವ್ಯಕ್ತಿ ಪರಿಚಯವನ್ನು ಅವರಿಂದಲೇ ಕೇಳಿ ಪಡೆಯಬೇಕೆಂಬ ಉದ್ದೇಶದಿಂದ ಕನ್ನಡದ ಪ್ರಸಿದ್ಧ ದಿನಪತ್ರಿಕೆಗಳಿಗೆ ನನ್ನನ್ನು ಭೇಟಿಯಾಗಲು ಪ್ರಕಟಣಾ ವಿನಂತಿ ನೀಡಿದೆ; ಕಾಲಾವಕಾಶವನ್ನು ನೀಡಿದೆ. ಆದರೆ ನಿರೀಕ್ಷಿತ ಫಲಿತಾಂಶ ಬರಲಿಲ್ಲ. ನಮ್ಮ ಕಲಾವಿದರಲ್ಲಿ ಬಹಳಷ್ಟು ಜನ ಅನಕ್ಷರಸ್ಥರು.

ತತ್ತ್ವಪದ ಗಾಯಕ ಗೊರವಾಲೆ ಶ್ರೀ ರುದ್ರಪ್ಪನವರು ಪತ್ರದ ಮೂಲಕ ಪರಿಚಯ ನೀಡಿದ್ದರೂ ನನಗೆ ಅಗತ್ಯವೆನಿಸುವ ಮಾಹಿತಿಗಳಿರಲಿಲ್ಲ, ಅವರನ್ನೇ ಭೇಟಿಯಾಗಿ ಸಾಕಷ್ಟು ಮಾಹಿತಿ ಪಡೆದೆ. ಗೊರವಾಲೆ ರುದ್ರಪ್ಪನವರು ತತ್ತ್ವಪದ ಗಾಯಕರ ಸಮಾವೇಶವನ್ನು ಮಂಡ್ಯದ ಗಾಂಧಿ ಭವನದಲ್ಲಿ ಏರ್ಪಡಿಸಿದಾಗ-ಅಲ್ಲಿಗೆ ಬಂದಿದ್ದ ತತ್ವಪದ ಗಾಯಕರಿಂದ ಮಾಹಿತಿ ಪಡೆದು ನಿರೂಪಿಸಿದ್ದೇನೆ.

ಕೀಲಾರದ ಕೃಷ್ಣಗೌಡರಿಗೆ ನಾಲ್ಕಾರು ಸಲ ದೂರವಾಣಿ ಮೂಲಕ ಸಂಪರ್ಕಿಸಿದಾಗ– 'ಮಂಡ್ಯ ರೈತ ಸಭಾಂಗಣದಲ್ಲಿ ತತ್ತ್ವಪದ ಗಾಯನ ಸ್ಪರ್ಧೆ ಏರ್ಪಡಿಸುತ್ತಿದ್ದೇನೆ. ನೀವು ಬಂದರೆ ಅಲ್ಲಿಯೇ ಕಲಾವಿದರಿಂದ ಮಾಹಿತಿ ಪಡೆಯಬಹುದು' ಎಂದರು. ನಾನೇ ದಿನಾಂಕ ತಿಳಿದು ಕಲಾವಿದರನ್ನು ಭೇಟಿಯಾಗಿ ಅವರ ಭಾವಚಿತ್ರಗಳನ್ನು, ಮಾಹಿತಿಯನ್ನು ಪಡೆದುಕೊಂಡೆ.

'ಆಂದೋಲನ' ಪತ್ರಿಕೆಯನ್ನು ಹಿಡಿದು ತಂಬೂರಿ ಜವರಯ್ಯನವರು ನಮ್ಮ ಮನೆಗೆ ಬಂದರು. ಇವರ ಪರಿಚಯ ನನಗೆ ಮೊದಲೇ ಇತ್ತು. ಜವರಯ್ಯನವರನ್ನು ಉಪಚರಿಸಿ, ಅವರ ಮತ್ತು ಅವರ ಪತ್ನಿಯ ಮಾಹಿತಿಯನ್ನು ಪಡೆದುಕೊಂಡೆ– ಅವರು ನೊಂದು ಆಡಿದ ಮಾತುಗಳು ಹಲವು.

ಜನಪದ ಕಲಾವಿದರ ಬಗೆಗೆ ತಿಳಿಯಲು ನೇರವಾಗಿ ಸಂಪರ್ಕಿಸಬೇಕೆನಿಸಿದಾಗ ನನ್ನ ನೆರವಿಗೆ ಬಂದವರು– ಪೂಜಾಕುಣಿತದ ಶ್ರೀ ಕೆ.ಪಿ ದೇವರಾಜು. ಇವರು ಕಲಾವಿದರ ಮೊಬೈಲ್ ನಂಬರ್ ನೀಡಿದರು. ಇದರಿಂದ ಕಲಾವಿದರಿಗೆ ನಾನು

ಬರುವ ದಿನಾಂಕ ತಿಳಿಸಿ ಹೋದರೂ ಅವರು ಹೊಲ ಗದ್ದೆಗಳಿಂದ ಬರುವವರೆಗೆ ಕಾಯಬೇಕಾಯಿತು. ಅನಂತರ ಅವರಿಂದ ಮಾಹಿತಿ ಪಡೆಯುತ್ತಿದ್ದೆ. ದೇವರಾಜು ಅವರು ತಮಗೆ ಚಿರಪರಿಚಿತರಾದ ಕಲಾವಿದರನ್ನು ಕಲಾಮಂದಿರಕ್ಕೆ ಬಂದು ನನ್ನನ್ನು ಭೇಟಿಯಾಗಲು ವಿನಂತಿಸಿದುದು ಫಲಕಾರಿಯಾಯಿತು.

ಪಾಂಡವಪುರ ತಾಲೂಕಿನ ಹೆಗ್ಗಡಹಳ್ಳಿ ಕೃಷ್ಣೇಗೌಡರು ಸೋಬಾನೆ ಹಾಡುಗಾರರ ಸಮಾವೇಶ ನಡೆಸಿದಾಗ, ನೇರವಾಗಿ ಕಲಾವಿದರ ಮಾಹಿತಿ ಪಡೆಯಲು ಸಾಧ್ಯವಾಯಿತು, ಕೃಷ್ಣೇಗೌಡರೇ ಕೆಲವರ ಮಾಹಿತಿಯನ್ನು ತಂದುಕೊಟ್ಟರು.

ಡೊಳ್ಳು ಕುಣಿತದ ಕಲಾವಿದ ಶ್ರೀ ಚಂದ್ರು ಅವರು ಶ್ರೀಮತಿ ನಾಗಮ್ಮ, ಕೆಂಚಮ್ಮ ಅವರನ್ನು ಕಳುಹಿಸಿಕೊಟ್ಟು ಅವರ ಮಾಹಿತಿ ಸಂಗ್ರಹಿಸಲು ಸಹಕರಿಸಿದರು. ಸುಂಕಾತೊಣ್ಣೂರಿನ ಸೋಬಾನೆ ಸ್ವಾಮಿಗೌಡರು ತಮ್ಮ ತಂಡವನ್ನು ನನಗೆ ಪರಿಚಯಿಸಿದ್ದರಿಂದ ಸೋಬಾನೆ ಹಾಡುಗಾರ್ತಿಯವರಿಂದ ಮಾಹಿತಿ ಸಂಗ್ರಹಿಸಲು ಸಾಧ್ಯವಾಯಿತು.

ಮದ್ದೂರು ತಾಲ್ಲೂಕಿನ ಅಣ್ಣೂರಿನ ಪ್ರೌಢಶಾಲೆ ನಿವೃತ್ತ ಮುಖ್ಯೋಪಾಧ್ಯಾಯರೂ ನನ್ನ ಆತ್ಮೀಯರೂ ಆದ ಶ್ರೀ ಮಾಕಯ್ಯನವರು ನಾನಾ ಕಲಾವಿದರ ಮಾಹಿತಿಯನ್ನು ಸಂಗ್ರಹಿಸಲು ನೆರವಾಗಿದ್ದಾರೆ.

ಶ್ರೀರಂಗಪಟ್ಟಣದ ಕಲಾವಿದರ ಮಾಹಿತಿಯನ್ನು ಸಂಗ್ರಹಿಸುವಾಗ–ನನ್ನ ಮೆಚ್ಚಿನ ಶಿಷ್ಯ ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಎ.ಎಚ್ ಚನ್ನೇಗೌಡರು ನನಗೆ ಕೆಲವು ವಯಸ್ಕರ ಮಾಹಿತಿ ನೀಡಿದ್ದಾರೆ.

ಮಳವಳ್ಳಿ ತಾಲ್ಲೂಕಿನ ತಡಗವಾಡಿಯ ಪೂಜಾಕುಣಿತದ ಕಲಾವಿದರಾದ ಶ್ರೀ ಚೇರ್ಕುಣಿ ಅವರು ತಮ್ಮ ಸಹ ಕಲಾವಿದರ ಮಾಹಿತಿ ನೀಡಿದ್ದಾರೆ.

ಕೆ.ಆರ್ ಪೇಟೆಯಲ್ಲಿ ಜನಪದ ಕಲಾವಿದರ ಸಂಖ್ಯೆ ತೀರಾ ಕಡಿಮೆ ಎನ್ನಿಸಿತು.

ನಾಗಮಂಗಲದಲ್ಲಿ ಗಮನಾರ್ಹ ಕಲಾವಿದರಿದ್ದಾರೆ. ಮಂಡ್ಯ ತಾಲ್ಲೂಕಿನಲ್ಲಿ ವೈವಿಧ್ಯಮಯ ಕಲಾವಿದರ ಸಂಖ್ಯೆ ಹೆಚ್ಚಾಗಿ ಇದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರೂ, ಸಹೃದಯರೂ ಆದ ಶ್ರೀ ಬಸವರಾಜ ಹೂಗಾರ ಅವರು ತಮ್ಮ ಇಲಾಖೆಯಲ್ಲಿದ್ದ ಕಲಾವಿದರ ಪಟ್ಟಿಯನ್ನು ನೀಡಿ ನನ್ನ ಕ್ಷೇತ್ರ ಕಾರ್ಯಕ್ಕೆ ಸಹಕರಿಸಿದ್ದಾರೆ.

ಜನಪದ ಕಲಾವಿದರ ಬದುಕು–ಬವಣೆಯನ್ನು ಅವರ ಸ್ಥಳಗಳಲ್ಲೇ ಭೇಟಿಯಾಗಿ ಅವರು ಹೇಳಿಕೊಂಡ ನೋವನ್ನು ತನ್ಮಯತೆಯಿಂದ ಕೇಳಿದ್ದೇನೆ, ಅವರ ಮುಗ್ಧತೆಗೆ ಪ್ರೀತಿಗೆ ಮಾರು ಹೋಗಿದ್ದೇನೆ, ಅವರ ಪ್ರೀತಿ ವಿಶ್ವಾಸಕ್ಕೆ ಪಾತ್ರನಾಗಿದ್ದೇನೆ.

ಕರ್ನಾಟಕ ಜಾನಪದ ಅಕಾಡೆಮಿಯವರು 'ಮಂಡ್ಯ ಜಿಲ್ಲೆಯ ಜನಪದ ಕಲಾವಿದರು' ಕೃತಿಯನ್ನು ಸಂಪಾದಿಸಿಕೊಡಲು ಆದೇಶಿಸಿ, ನಾನು ಕಾರ್ಯಶೀಲನಾಗಲು ಪ್ರೇರೇಪಿಸಿದ್ದಕ್ಕಾಗಿ ಅಕಾಡೆಮಿಗೆ ಕೃತಜ್ಞನಾಗಿದ್ದೇನೆ.

ನನ್ನ ಕ್ಷೇತ್ರಕಾರ್ಯಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವಾದ ಸ್ನೇಹಿತರಿಗೆ ಶಿಷ್ಯಂದಿರಿಗೆ, ಕಲಾವಿದರಿಗೆ ನಾನು ಸದಾ ಕೃತಜ್ಞನಾಗಿದ್ದೇನೆ.

– ಡಾ. ಜಿ. ವಿ. ದಾಸೇಗೌಡ

10.5.2010.
ಮಂಡ್ಯ

# ಪರಿವಿಡಿ


ಅಧ್ಯಕ್ಷರ ನುಡಿ iii

ಕೆಲಮಾತು v

ಪ್ರಸ್ತಾವನೆ vii

1. ಶ್ರೀ ಪುಟ್ಟೇಗೌಡ 1
2. ಶ್ರೀ ಸಿದ್ದಪ್ಪ ಉರುಫ್ ಧ್ವಂಸಣ್ಣ 5
3. ಶ್ರೀ ಎಚ್. ಎನ್. ಪರಶಿವಮೂರ್ತಿ 11
4. ಶ್ರೀ ನಿಂಗಣ್ಣ 14
5. ಶ್ರೀ ಎಲ್. ಶಂಕರ್ 16
6. ಅರ್ಚಕ ಶ್ರೀ ಗಂಗಾಧರ 19
7. ಶ್ರೀ ರಾಮಯ್ಯ 23
8. ಶ್ರೀ ಜಿ.ಸಿ.ದೊಡ್ಡಹನುಮೇಗೌಡ 24
9. ಶ್ರೀ ಶೀನಪ್ಪ 25
10. ಶ್ರೀ ಎಚ್.ಎಸ್. ಕೆಂಪಯ್ಯ 27
11. ಶ್ರೀ ಚಂದ್ರಶೇಖರ ಆರಾಧ್ಯ 29
12. ಶ್ರೀ ಬೆಟ್ಟಯ್ಯ 31
13. ಶ್ರೀ ಪುಟ್ಟಸ್ವಾಮಿ 33
14. ಶ್ರೀ ಹೆಮ್ಮಿಗೆ ಬಸವರಾಜು 35
15. ಶ್ರೀಮತಿ ದೊಡ್ಡ ತಾಯಮ್ಮ 39
16. ಶ್ರೀಮತಿ ಚಿಕ್ಕತಾಯಮ 41
17. ಶ್ರೀಮತಿ ಲಕ್ಷ್ಮಮ್ಮ 43
18. ಶ್ರೀಮತಿ ವೆಂಕಟಮ್ಮ 45

| | |
|---|---|
| 19. ಶ್ರೀ ರುದ್ರಪ್ಪ ಗೊರವಾಲೆ | 47 |
| 20. ಶ್ರೀ ಜವರಯ್ಯ | 49 |
| 21. ಶ್ರೀಮತಿ ಬೋರಮ್ಮ | 51 |
| 22. ಶ್ರೀ ಕೆ.ಎಂ. ಕೃಷ್ಣೇಗೌಡ | 53 |
| 23. ಶ್ರೀಮತಿ ಗೌರಮ್ಮ | 54 |
| 24. ಶ್ರೀ ಕೃಷ್ಣೇಗೌಡ | 55 |
| 25. ಶ್ರೀ ನರಸಿಂಹಶೆಟ್ಟಿ | 58 |
| 26. ಶ್ರೀ ಆರ್. ಶಿವಣ್ಣಗೌಡ | 59 |
| 27. ಶ್ರೀಮತಿ ನಾಗಮ್ಮ | 62 |
| 28. ಶ್ರೀ ಸ್ವಾಮಿಗೌಡ | 67 |
| 29. ಶ್ರೀಮತಿ ತಿಮ್ಮಮ್ಮ | 71 |
| 30. ಶ್ರೀಮತಿ ಹನುಮಮ್ಮ | 73 |
| 31. ಶ್ರೀ ಶಿವಣ್ಣ | 74 |
| 32. ಶ್ರೀಮತಿ ತಾಯಮ್ಮ | 75 |
| 33. ಶ್ರೀಮತಿ ಜಯಮ್ಮ | 76 |
| 34. ಶ್ರೀಮತಿ ಸಾಕಮ್ಮ | 78 |
| 35. ಶ್ರೀ ಅಂಗಡಿ ಜಯರಾಮ್ | 80 |
| 36. ಶ್ರೀನಿವಾಸಪ್ಪ ಸ್ವಾಮೀಜಿ | 81 |
| 37. ಶ್ರೀಮತಿ ಗಿರಿಯಮ್ಮ | 82 |
| 38. ಶ್ರೀಮತಿ ಮರಿಅರಸಮ್ಮ | 83 |
| 39. ಶ್ರೀ ಸ್ವಾಮಿ | 85 |
| 40. ಶ್ರೀಮತಿ ಪುಟ್ಟಸಿದ್ದಮ್ಮ | 87 |
| 41. ಶ್ರೀಮತಿ ವೆಂಕಟಮ್ಮ | 88 |
| 42. ಶ್ರೀ ಮಹದೇವಯ್ಯ | 89 |
| 43. ಶ್ರೀ ಎಲ್. ಮಾದಯ್ಯ | 91 |
| 44. ಶ್ರೀ ಚೀರ್ಕುಣಿ | 92 |
| 45. ಶ್ರೀ ಕರಿಯಪ್ಪ | 95 |
| 46. ಚಿಕ್ಕಾಡೆ ಹೊನ್ನಮ್ಮ | 96 |
| 47. ಶ್ರೀಮತಿ ಚನ್ನಮ್ಮ | 98 |

48. ಶ್ರೀ ಸಿ. ಅಂಕಯ್ಯ 100
49. ಶ್ರೀ ಲಿಂಗದ ವೀರಪ್ಪನವರು 101
50. ಶ್ರೀ ಡಿ.ಎಂ. ಮಹೇಶ್ 103
51. ಶ್ರೀ ಚಿಕ್ಕೇಗೌಡ 104
52. ಕನ್ನಲಿ ಶ್ರೀಮಂಚಯ್ಯ (ಮರಯ್ಯ) 104
53. ಶ್ರೀ ಸಿದ್ದಯ್ಯ 105
54. ಶ್ರೀ ಬಸವೇಗೌಡ 105
55. ಶ್ರೀ ಬಿ.ಕೆ ರಾಮಣ್ಣ 106
56. ಶ್ರೀ ಚಿಕ್ಕೀರಯ್ಯ 107
57. ಶ್ರೀ ಗಂಗಣ್ಣ 107
58. ಶ್ರೀ ಎಂ. ಮಹದೇವ ಸ್ವಾಮಿ 108
59. ಶ್ರೀ ಕಾಳೀರಯ್ಯ ತಳಗವಾದಿ 109
60. ಶ್ರೀಮತಿ ನರಸಮ್ಮ 110
61. ಶ್ರೀಮತಿ ಬೋರಮ್ಮ 111
62. ಶ್ರೀಮತಿ ಸರೋಜಮ್ಮ 111
63. ಶ್ರೀಮತಿ ಪುಟ್ಟಲಿಂಗಮ್ಮ 112
64. ಶ್ರೀಮತಿ ದೊಡ್ಡತಾಯಮ್ಮ 113
65. ಹಿಂದಲ ಹಟ್ಟಿ ಶ್ರೀ ಚನ್ನೇಗೌಡ 114
66. ಶ್ರೀ ಮೂಗಣ್ಣ (ಕೃಷ್ಣ)– 115
67. ಶ್ರೀ ಭೂಮಿಗೌಡ 116

*ಕಲಾವಿದರ ವಿಳಾಸ* 119
*ಪರಾಮರ್ಶನ ಗ್ರಂಥಗಳು* 124



## ಶ್ರೀ ಪುಟ್ಟೇಗೌಡ (ಪೂಜಾಕುಣಿತ)

ಮಂಡ್ಯದಿಂದ ದಕ್ಷಿಣಕ್ಕೆ ನಾಲ್ಕು ಕಿ.ಮೀಟರ್ ಹೊಸಹಳ್ಳಿ ಮಾರ್ಗವಾಗಿ ಹೊರಟರೆ ಮೈಕ್ರೋವೇವ್ ಕಛೇರಿಯಿಂದ ಅನತಿ ದೂರದಲ್ಲಿ ಕಾರಸವಾಡಿ ಗ್ರಾಮ ಸಿಗುತ್ತದೆ. ರಸ್ತೆ ಬದಿಯ ಯಾವುದಾದರೂ ಅಂಗಡಿಯಲ್ಲಾಗಲಿ, ಊರಿನ ಯಾರನ್ನಾದರೂ ಪೂಜೆ ಕುಣಿತದ ಶ್ರೀ ಪುಟ್ಟೇಗೌಡರ ಮನೆ ಯಾವುದೆಂದು ಕೇಳಿದರೆ ಮನೆಯನ್ನು ತೋರಿಸುತ್ತಾರೆ.

ಮನೆ ಮುಂದೆ ನಿಂತು ಪುಟ್ಟೇಗೌಡರೆ ಎಂದು ಕರೆದರೆ – 'ಯಾರು? ಬನ್ನಿ' ಎಂದು ಕರೆಯುತ್ತಾರೆ. ಪುಟ್ಟೇಗೌಡರಿಗೆ ಈಗ ಎಪ್ಪತ್ತೈದು ವರ್ಷ ವಯಸ್ಸಾಗಿದೆ, ಕಣ್ಣುಗಳು ಸರಿಯಾಗಿ ಕಾಣಿಸುವುದಿಲ್ಲ. ಪ್ರೀತಿಯಿಂದ ಬಂದವರನ್ನು ವಿಚಾರಿಸುತ್ತಾರೆ.

ಪುಟ್ಟೇಗೌಡರು ಮಂಡಿಯಿಂದ ಸ್ವಲ್ಪ ಕೆಳಗಿರುವಷ್ಟು ಉದ್ದದ, ಮಂಡ್ಯ ಗ್ರಾಮೀಣ ಜನತೆಗೆ ಸಹಜವಾದ ಲಾಡಿ ಚೆಡ್ಡಿಯನ್ನು ಹಾಕಿರುತ್ತಾರೆ; ಮೂರು ಗುಂಡಿಯ ತುಂಬುದೋಳಿನ ಸಾಮಾನ್ಯವಾಗಿ ಬಿಳಿ ಬಣ್ಣದ ಅಂಗಿಯನ್ನು ಹಾಕಿಕೊಂಡು ಹೆಗಲ ಮೇಲೆ ಚೌಕಳಿಯ ಬಣ್ಣದ ಟವಲನ್ನು ಹಾಕಿರುತ್ತಾರೆ. ತಲೆಗೂದಲು ಮತ್ತು ಮೀಸೆಯು ನರೆಕೂದಲಿನಿಂದ ಹೊಳೆಯುತ್ತದೆ. ಹುಟ್ಟಿದಂದಿನಿಂದ ಇಂದಿನವರೆಗೆ ಅಂಧಕಾರದ ಬಾಳಿಗೆ ಜೀವನಾನುಭವದ ಬೆಳಕು ಹರಿದು ಕಪ್ಪು

ಕೂದಲಾಗಿದೆ ಬೆಳ್ಳಗೆ. ಪುಟ್ಟೇಗೌಡರು ಮಂಡ್ಯ ಗ್ರಾಮೀಣ ಸಂಸ್ಕೃತಿಯ ಪ್ರತೀಕವಾಗಿ ಕಾಣುತ್ತಾರೆ. ಬದುಕಿನಲ್ಲಿ ಏಳು-ಬೀಳನ್ನು ಕಂಡುದರ ಪ್ರತೀಕವಾಗಿ ಮುಖದ ಚರ್ಮ ಸುಕ್ಕುಗಟ್ಟಿದೆ. ಜೀವನದಲ್ಲಿ ಅನುಭವಿಸಿದ ನೋವು ಮುಖದಲ್ಲಿ ಹೆಪ್ಪುಗಟ್ಟಿರುವುದನ್ನು ಮನಗಾಣಬಹುದು.

ಪುಟ್ಟೇಗೌಡರು ದೊಡ್ಡೈದೇಗೌಡ ಮತ್ತು ದೇವಮ್ಮ ಅವರ ಸುಪುತ್ರರು. ದಿನಾಂಕ 10-02-1936ರಲ್ಲಿ ಜನಿಸಿದ ಇವರು ಮೂರನೇ ತರಗತಿಯವರೆಗೆ ಮಾತ್ರ ವ್ಯಾಸಂಗ ಮಾಡಲು ಸಾಧ್ಯವಾಯಿತು.

ಪುಟ್ಟೇಗೌಡರೆ, ಯಾಕೆ ನೀವು ಮುಂದೆ ಓದಲಿಲ್ಲ; ಓದಬೇಕೆಂಬ ಮನಸ್ಸು ನಿಮಗಿರಲಿಲ್ಲವೇ?' ಎಂದು ಕೇಳಿದ್ದಕ್ಕೆ ಅವರು ಖಿನ್ನರಾಗಿ ಹೀಗೆ ಹೇಳಿದರು:

'ಆರ್ಥಿಕ ಸಮಸ್ಯೆಗಳು ಮುಂದೆ ಬಂದುದರಿಂದ ಓದನ್ನು ಮುಂದು ವರೆಸಲಾಗಲಿಲ್ಲಕಣಪ್ಪ. ನಮ್ಮ ತಂದೆಯವರು ತುಂಬಾ ಬಡವರು ತಿನ್ನೊ ಅನ್ನಕ್ಕೂ ತೊಂದರೆ ಇದ್ದ ಕಾಲ ಅದು. ಎಷ್ಟೋ ದಿನ ಕಡ್ಲೆಪುರಿ ತಿಂದು ನೀರು ಕುಡಿದು ಮಲಗುತ್ತಿದ್ದೊ; ಕಿತ್ತು ತಿನ್ನೊ ಬಡತನದ ಬಾಳು ನಡೆಸುತ್ತಿದ್ದೊ-ಹಿಂಗಿದ್ದಾಗ ಓದುಕ್ಕಾಗನಿಲ್ಲ.'

ಶ್ರೀ ಪುಟ್ಟೇಗೌಡರು ಆಡಿದ ಮಾತುಗಳು ಬಡಜನತೆಯ ಪ್ರತಿನಿಧಿ ಆಡಿದ ಮಾತುಗಳಾಗಿದ್ದವು. ಈ ಮಾತುಗಳಿಗೆ ನನ್ನಲ್ಲಿ ಉತ್ತರವಿರಲಿಲ್ಲ, ಮೌನವಾದೆ. ಮಂಡ್ಯ ಜಿಲ್ಲೆಯ ಸಣ್ಣ ಹಿಡುವಳಿಯ ಒಕ್ಕಲಿಗನ ಸ್ಥಿತಿ ಎಷ್ಟು ಚಿಂತಾಜನಕವಾದುದು ಎಂಬುದು ಇವರ ಮಾತುಗಳಿಂದ ತಿಳಿಯುತ್ತದೆ.

ದೊಡ್ಡೈದೇಗೌಡರಿಗೆ ಪುಟ್ಟೇಗೌಡರು ಒಬ್ಬನೇ ಮಗ, ಪುಟ್ಟೇಗೌಡರಿಗೆ ಮೂರು ಜನ ತಂಗಿಯರು (ಸಾವಿತ್ರಮ್ಮ, ದೊಡ್ಡತಾಯಮ್ಮ, ಬೋರಮ್ಮ) ಪುಟ್ಟೇಗೌಡರ ಮಡದಿ ದೇವಮ್ಮ-ಇವರಿಗೆ ಒಬ್ಬ ಮಗಳು ಪದ್ಮಳನ್ನು ಕೊಡಿಯಾಲದ ಮಂಚೇಗೌಡರಿಗೆ ಕೊಟ್ಟು ವಿವಾಹ ಮಾಡಿದ್ದಾರೆ. ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು-ಎಂಬ ಗಾದೆಯಂತೆ ಪ್ರತಿಭಾವಂತ ಯುವ ಪೂಜೆಕುಣಿತದ ಕಲಾವಿದ ಕೆ.ಪಿ ದೇವರಾಜು ಒಬ್ಬನೇ ಇವರಿಗೆ ಮಗ.

ಪುಟ್ಟೇಗೌಡರ ತಂದೆ ದೊಡ್ಡೈದೇಗೌಡರೂ ಪೂಜೆ ಕುಣಿತದ ಕಲಾವಿದರಾಗಿದ್ದರು. ತಂದೆಯೇ ಪುಟ್ಟೇಗೌಡರ ಮೊದಲ ಗುರು. ಪೂಜೆ ಹೊತ್ತ ತಂದೆ ಹೆಜ್ಜೆ ಹಾಕುವುದನ್ನು ಗಮನಿಸುತ್ತಾ ತಾವೂ ಅವರನ್ನು ಅನುಕರಿಸುತ್ತಿರುವುದನ್ನು ಕಂಡ ತಂದೆಯೇ ಕ್ರಮಬದ್ಧವಾಗಿ ತಮಟೆಯ ಏಟಿಗೆ ಹೆಜ್ಜೆ ಹಾಕುವುದನ್ನು ಕಲಿಸಿದರು.

ಶ್ರೀ ಪುಟ್ಟೇಗೌಡರು ಸತತ ಅಭ್ಯಾಸದಿಂದ ಶ್ರಮಪಟ್ಟು ಜನಪದ ಕಲೆಗಳನ್ನು ಮೈಗೂಡಿಸಿಕೊಂಡರು. ಇವರು ಪ್ರಮುಖವಾಗಿ ಪೂಜಾ ಕುಣಿತ, ರಂಗದ ಕುಣಿತ,

ರಂಗದಗೀತೆ, ದೊಣ್ಣೆವರಸೆ, ಕೋಲಾಟ ಮೊದಲಾದ ಕಲೆಗಳನ್ನು ಕರಗತಮಾಡಿಕೊಂಡರು.

ಜನಪದ ಕಲೆಗಳೊಡನೆ ಭಜನೆ ಮಾಡುವುದು, ಶನಿದೇವರ ಕತೆಯನ್ನು ಹೇಳುವುದು, ತತ್ತ್ವಪದಗಳನ್ನು ಹಾಡುವುದು ಇವರ ಹವ್ಯಾಸವಾಯಿತು.

ಜನಪದ ಕಲೆಗಳಾದ ಪೂಜಾಕುಣಿತ, ರಂಗದ ಕುಣಿತ, ಕೋಲಾಟ, ದೊಣ್ಣೆವರಸೆಯಲ್ಲಿ ಐವತ್ತು ವರ್ಷಗಳ ಪ್ರದರ್ಶನದ ಅನುಭವವಿದೆ. ಇವರು ಈ ಕಲೆಗಳಲ್ಲಿ ಹಲವಾರು ಶಿಷ್ಯಂದಿರಿಗೆ ತರಬೇತಿಯನ್ನೂ ನೀಡಿ 'ಗುರುವಿನ ಯೋಗ್ಯತೆಯ ಶಿಷ್ಯನಲ್ಲಿ ನೋಡು' ಎಂಬ ಗಾದೆಯ ನೈಜತೆಯನ್ನು ತಿಳಿಯಲು ಇವರ ಶಿಷ್ಯಂದಿರಲ್ಲಿ ಮಗ ದೇವರಾಜರ ಮಾಡಿರುವ ಸಾಧನೆ ಸಾಕ್ಷಿಯಾಗುತ್ತದೆ.

ಇವರು ಹಲವು ಕಲಾಪ್ರಕಾರಗಳನ್ನು ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಗ್ರಾಮದ ಹಿಂದ್ಲಹಟ್ಟಿ ಶ್ರೀ ಚನ್ನಯ್ಯನವರಿಂದ ಕಲಿತಿದ್ದಾರೆ. ತಂದೆ ದೊಡ್ಡೈದೇಗೌಡರ ಅನಂತರದ ಗುರು ಚನ್ನಯ್ಯನವರು.

ಶನಿದೇವರ ಕಥೆಗಳನ್ನು ಕಾರಸವಾಡಿಯ ನಾಟಕದ ಮಾಸ್ತರಾದ ಮಾದೇಗೌಡ ಮತ್ತು ರಾಜಣ್ಣನವರಿಂದ ಕಲಿತರು.

ತತ್ತ್ವಪದ ಮತ್ತು ಭಜನೆಗಳನ್ನು ಹಾಡುವವರ ನಡುವೆ ಹಾಡು ಹಾಡುತ್ತಲೇ ಸ್ವಯಂ ಕಲಿತು ಗ್ರಾಮೀಣ ಪ್ರದೇಶದ ಯುವಕರಿಗೆ ತರಬೇತಿ ನೀಡಿದ್ದಾರೆ.

ಶ್ರೀ ಪುಟ್ಟೇಗೌಡರು ಅಂದು ಹಳ್ಳಿಗಳಲ್ಲಿ ಹಬ್ಬ-ಹರಿದಿನಗಳಲ್ಲಿ ನಡೆಯುತ್ತಿದ್ದ ಜನಪದ ಕಲಾಪ್ರದರ್ಶನಗಳನ್ನು ನಿಂತು ಸೂಕ್ಷ್ಮವಾಗಿ ಗಮನಿಸುತ್ತಾ ಏಕಾಂಗಿಯಾಗಿ ಅನುಕರಿಸುತ್ತಾ ಕಲಿತು ತಾವೇ ಪ್ರದರ್ಶನ ನೀಡುವ ಸಾಮರ್ಥ್ಯವನ್ನು ತಂದೆ ಮತ್ತಿತರ ಗುರುಗಳ ಸಹಕಾರದಿಂದ ಪಡೆದು ಜನಪದ ಕಲೆಯೇ ಜೀವನ ಎಂದು ನಂಬಿದರು; ಕೃಷಿಯಿನ್ನೂ ಮಾಡುತ್ತಾ ಮನೆಯ ಸಂಸಾರಕ್ಕೆ ಸಹಾಯಕರಾಗಿ ನಿಂತರು.

ಕಲಾಪ್ರದರ್ಶನ ನೀಡಿರುವ ಸ್ಥಳಗಳಾವುವು-ಎಂದು ಕೇಳಿದಾಗ ನೆನಪಿಸಿಕೊಳ್ಳುತ್ತಾ ಹೇಳಿದರು;

ವಿ.ಸಿ ಫಾರಂ-ಮಂಡ್ಯ, ರಾಜ್ಯೋತ್ಸವ ಕಾರ್ಯಕ್ರಮ ಮಂಡ್ಯ, ಹನುಮಂತನಗರ, ಸುತ್ತೂರು ಜಾತ್ರೆ, ಸ್ವತಂತ್ರ ದಿನಾಚರಣೆ-ಮಂಡ್ಯ, ಮೈಸೂರು ದಸರಾ ಉತ್ಸವದಲ್ಲಿ, ರಾಮನಗರದ ಜಾನಪದ ಲೋಕದಲ್ಲಿ, ಆದಿ ಚುಂಚನಗಿರಿಯಲ್ಲಿ, ಇನ್ನೂ ಹಲವಾರು ಕಡೆ ಪ್ರದರ್ಶನ ನೀಡಿರುವುದಾಗಿ ಹೇಳುತ್ತಾರೆ. ವಯೋಧರ್ಮಾನುಸಾರವಾದ ಮರೆವು ಒಮ್ಮೊಮ್ಮೆ ಇವರನ್ನು ಕಾಡುತ್ತದೆ.

ಶ್ರೀ ಪುಟ್ಟೇಗೌಡರಿಗೆ ಹತ್ತು ಗುಂಟೆ ಖುಷ್ಕಿ ಜಮೀನು, ಮೂವತ್ತು ಗುಂಟೆ ತರಿ ಜಮೀನಿದೆ. ಕೈಗೆ ಬರುವ ಬೆಳೆ ಜೀವನಕ್ಕೆ ಸಾಲದು ಎನ್ನುತ್ತಾರೆ.

ಪುಟ್ಟೇಗೌಡರು ಪೂಜಾಕುಣಿತ ಮೊದಲಾದ ಕಲೆಗಳಲ್ಲಿ ಪಡೆದಿರುವ ನೈಪುಣ್ಯತೆಯನ್ನು ಮೆಚ್ಚಿ ಕೆಲವು ಸಂಘ-ಸಂಸ್ಥೆಗಳು ಪ್ರಶಸ್ತಿ ಪತ್ರಗಳನ್ನು ನೀಡಿವೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಾನಪದ ಲೋಕ, ಮೈಸೂರು ದಸರಾ ಉತ್ಸವದ ಪ್ರಶಸ್ತಿ ಪತ್ರಗಳು ದೊರೆತಿವೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪೂಜಾಕುಣಿತದ ಉತ್ತಮ ಕಲಾವಿದನೆಂದು ಗುರ್ತಿಸಿ ಸನ್ಮಾನ ಪ್ರಶಸ್ತಿ, ನಗದು ಹಣ ನೀಡಿ ಗೌರವಿಸಿರುವುದು ಜಿಲ್ಲೆಯ ಜನತೆ ಮತ್ತು ಕಲಾವಿದರು ಹೆಮ್ಮೆ ಪಡುವ ವಿಷಯವಾಗಿದೆ.

ಪೂಜಾಕುಣಿತ ಮತ್ತು ಕೋಲಾಟದ ಕಲೆಯನ್ನು ಗ್ರಾಮೀಣ ಪ್ರದೇಶದ ಯುವಕರಿಗೆ ತರಬೇತಿ ನೀಡಿ ನೂರಾರು ಜನ ಶಿಷ್ಯವೃಂದವನ್ನು ಪಡೆದಿದ್ದಾರೆ.

ಪುಟ್ಟೇಗೌಡರಿಗೆ ಈಗ ಎಪ್ಪತ್ತನಾಲ್ಕು ವರ್ಷಗಳು ಕಳೆದಿವೆ. ಈಗ ಅವರಿಗೆ ಕಿವಿಗಳು ಚುರುಕಾಗಿಲ್ಲ, ಕಣ್ಣುಗಳು ಸರಿಯಾಗಿ ಕಾಣುತ್ತಿಲ್ಲ; ಮನೆಯಲ್ಲಿಯೇ ಕಾಲ ಕಳೆಯುತ್ತಿದ್ದಾರೆ.

'ಇಂದಿನ ಯುವಕರಿಗೆ. ಜನಪದ ಕಲಾವಿದರಿಗೆ ಏನನ್ನಾದರೂ ಹೇಳಬೇಕೆನ್ನಿಸುತ್ತಿದೆಯೇ?' ಎಂದು ಕೇಳಿದಾಗ ಅವರು ಕೊಟ್ಟ ಉತ್ತರ ಗಮನಾರ್ಹವಾದುದು.

'ನಾನು ಚಿಕ್ಕವನಿದ್ದಾಗ ಕಲಿಯುವವರ ಬಳಿ ನಿಂತು ಕಲಿಯುವ ಆಸೆಯಿಂದ ಗಮನವಿಟ್ಟು ನೋಡುತ್ತಿದ್ದೆ. ಕಲಿಯಬೇಕೆಂಬ ಆಸಕ್ತಿಯೇ ನನ್ನಲ್ಲಿ ಕಲೆಯ ಅಭಿರುಚಿಯನ್ನು ಬೆಳೆಸಿತು. ಯುವಕರೇ ಕಲೆಯಲ್ಲಿ ಅಭಿರುಚಿ ಬೆಳೆಸಿಕೊಂಡು ಕಲಿರಿ. ನನಗೆ ಇನ್ನಾದರೂ ಸರಕಾರದಿಂದ ಕಲಾ ಪೋಷಕರಿಂದ, ಸರಕಾರಿ ಅಧಿಕಾರಿಗಳಿಂದ, ಜಾನಪದ ಕಲಾಪೋಷಕರಿಂದ ನಾಡಿನ ಸಾಹಿತಿಗಳಿಂದ ನಮ್ಮಂಥ ಕಲಾವಿದರನ್ನು ಗುರುತಿಸುವಂತಾಗಲಿ - ಇವರೆಲ್ಲಾ ಪ್ರೋತ್ಸಾಹ ನೀಡಿದರೆ ನಮ್ಮಂಥ ಕಲಾವಿದರು ಬದುಕುವ ಜೊತೆಗೆ ನಾಡಿನ ಯುವಕ-ಯುವತಿಯರೆಗೆ ತರಬೇತಿ ನೀಡಿ ಕಲೆಯನ್ನು ಉಳಿಸಲು ಕೈಲಾಗುವಷ್ಟು ಪ್ರಯತ್ನಿಸುತ್ತೇನ ಎಂದು ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ' ಎಂದು ಕಳಕಳಿಯಿಂದ ನುಡಿದರು.

❖



## ಶ್ರೀ ಸಿದ್ದಪ್ಪ ಉರುಫ್ ಧ್ವಂಸಣ್ಣ (ಕೋಲಾಟ)

ಕಾರಸವಾಡಿಯಿಂದ ಮೂರು ಕಿ.ಮೀ. ದಕ್ಷಿಣಕ್ಕೆ ಹೋದರೆ ಸಂತೆಕಸಲಗೆರೆ ಸಿಗುತ್ತದೆ. ಈ ಲೇಖಕರಿಗೆ ಇವರು ಚಿಕ್ಕಂದಿನಿಂದಲೂ ಪರಿಚಿತರು. ಬಾಲ್ಯದಲ್ಲಿ ಇವರನ್ನು ಸಿದ್ದು ಎಂದು ಕರೆಯುತ್ತಿದ್ದರು.

ಬಿಳಿ ಷರಟು, ಬಿಳಿ ಪಂಚೆ, ಹೆಗಲಮೇಲೆ ಹಸಿರು ಟವಲ್– ರೈತ ಸಂಕೇತವಾಗಿ ಹಾಕುತ್ತಿದ್ದಾರೆ. ಇವರು ಜನಿಸಿದ್ದು 15.1.1946 ರಲ್ಲಿ, ತಂದೆ ದೊಡ್ಡ ಬೊಕಳಯ್ಯ, ತಾಯಿ–ಮರಿಸಿದ್ದಮ್ಮ ಅವರಿಗೆ ಒಬ್ಬನೇ ಮಗ. ಇವರಿಗೆ ಈಗ ಅವರತ್ತನಾಲ್ಕು ವರ್ಷ ವಯಸ್ಸಾಗಿದೆ. ಇವರ ಮನೆದೇವರು ಮಸಣಕಮ್ಮ ಈ ದೇವಾಲಯದ ಸಮೀಪದಲ್ಲೇ ಇವರ ಮನೆ ಇದೆ; ಇವರು ಬೆಸ್ತರು.

ಮಸಣಕಮ್ಮನ ದೇವಾಲಯದಲ್ಲಿ ವಾರದ ಪೂಜೆಗಳಲ್ಲಿ ಗುಡ್ಡಪ್ಪ ರಾತ್ರಿ ಕಣಿ ಹೇಳುವಾಗ ದೇವರನ್ನು ಪ್ರಾರ್ಥಿಸುವಾಗ ಚಕ್ರಾದಿಬಳೆಯನ್ನು ನುಡಿಸುತ್ತಿದ್ದುದು ಈಗಲೂ ನೆನಪಿದೆ. ವಯೋಧರ್ಮಾನುಸಾರವಾಗಿ ಕೆನ್ನೆಯ ಚರ್ಮ ಸುಕ್ಕುಗಟ್ಟಿದೆ. ಕೆಂಪು ವರ್ಣದ ಸೌಮ್ಯಮುಖದಲ್ಲಿ ಗಾಂಭೀರ್ಯ ಎದ್ದು ಕಾಣುತ್ತದಾದರೂ ಹಾಸ್ಯಭಾವ ಮುಖದಲ್ಲಿ ಆಗಾಗ್ಗೆ ಇಣುಕುತ್ತದೆ.

ಸಿದ್ದಪ್ಪನವರನ್ನು ಕಂಡಾಗ– 'ಏನಣ್ಣಾ, ಚೆನ್ನಾಗಿದ್ದೀರಾ' ಎಂದೆ. 'ನನಗಿಂತ ನೀವೇ ದೊಡ್ಡವರು ಕಣಪ್ಪ, ನನಗಿಂತ ಎರಡು ಮೂರು ವರ್ಷ ನೀವೆ ಹಿರಿಯರು, ಸಿದ್ದು ಅನ್ನಿ ಸಾಕು. ಎಷ್ಟು ವರ್ಷಗಳಾಯ್ತಪ್ಪ ನೋಡಿ, ಏನು ಬಂದಿರಿ?' ಎಂದಾಗ ನನ್ನ ಭೇಟಿಯ ಉದ್ದೇಶವನ್ನು ತಿಳಿಸಿದೆ. ;ಇಲ್ಲಿಗಂಟ ನನ್ನ ಯಾರೂ ಕೇಳ್‌ಕಂಡು ಬಂದಿನ್ರಿಲ್ಲ, ನೀವು ಬಂದದ್ದು ಸಂತೋಷ ಆಯ್ತು. ಅದೇನ್ ಕೇಳರಿ ಕೇಳಿ, ನಾನು ತಿಳಿದಷ್ಟು ಹೇಳ್ತಿನಿ' ಎಂದರು.

'ಜನ ನಿಮ್ಮ ಧ್ವಂಸಣ್ಣ ಅಂತ ಯಾಕೆ ಕರಿತರೆ?'

'ದಿವಂಗತ ಮಾಸ್ತರ್ ಚಲುವಯ್ಯ ಅವರು 'ಕೃಷ್ಣಲೀಲೆ' ನಾಟಕದಲ್ಲಿ ನನಗೆ ಕಂಸನ ಪಾರ್ಟ್ ಕೊಟ್ಟಿದ್ರು. ಚೆನ್ನಾಗಿ ನಿಭಾಯಿಸಿದೆ. ಅವೊತ್ತಿನಿಂದ ಜನ ಕಂಸಣ್ಣ ಅನ್ನಕೆ ಶುರುವಾದ್ರು, ಆಮೇಲೆ ಕಂಸಣ್ಣ ಹೋಗಿ ಧ್ವಂಸಣ್ಣ ಆದೆ. ಈಗ ಜನ ಸಿದ್ದಪ್ಪ ಅನ್ನದೆ ಮರ್ತು  ಧ್ವಂಸಣ್ಣ ಅಂತ ಕರಿತರೆ' ಎಂದು ಸ್ವಾರಸ್ಯವಾಗಿ ನಗುತ್ತಲೇ ಹೇಳಿದರು. ನಾನು ಮಡದಿ ಮಕ್ಕಳ ಆತನ ಹೆಸರಿನ ಬಗೆಗೆ ವಿಚಾರಿಸಿದೆ.

'ನನ್ನ ಯಾಕೆ ಸಿದ್ದಪ್ಪ ಅಂತರೆ ಅಂದರೆ ಅಪ್ಪ–ಅಮ್ಮ ಇಟ್ಟ ಹೆಸರು. ನಾವು ಭೂಮಿಸಿದ್ದೇಶ್ವರನ ಒಕ್ಕಲು, ಅದಕ್ಕೆ ಸಿದ್ದಪ್ಪ  ಅಂತ ಹೆಸರಿಟ್ಟರು. ಹೆಂಡ್ತಿ ಹೆಸರು ಪುಟ್ಟ ನಂಜಮ್ಮ ಐವತ್ತು ವರ್ಷ ಆಗಿದೆ. ಸಿದ್ದಪ್ಪ, ಮಂಜ ಇಬ್ಬರು ಗಂಡು ಮಕ್ಕಳು; ಮೂರು ಹೆಣ್ಣು ಮಕ್ಕಳು. ಒಬ್ಬಳ ಅರಕೆರೆಗೆ, ಇನ್ನೊಬ್ಬಳ ರಮ್ಮನಹಳ್ಳಿಗೆ, ಮತ್ತೊಬ್ಬಳ ಅಪ್ಪಾಜಿ ದೊಡ್ಡಿಗೆ ಕೊಟ್ಟು ಮದ್ವೆ ಮಾಡಿವ್ನಿ.

'ಗಂಡು ಮಕ್ಕಳ ವಿಷಯ ಏನೂ ಹೇಳಲಿಲ್ಲವಲ್ಲಾ!' ಎಂದೆ.

'ಹಿರಿಮಗನಿಗೆ ಮೂವತ್ತ ಮೂರು ವರ್ಷ ಆಗಿದೆ. ಅವನ ಹೆಸರು ಸಿದ್ದಪ್ಪ, ಇವನ ಹೆಡ್ತಿ ನಾಗರತ್ನ, ಇವರಿಗೆ ಜ್ಯೋತಿ ಮಗಳು, ಕಿರಣ ಮಗ, ನನ್ನ ಇನ್ನೊಬ್ಬ ಮಗನ ಹೆಸರು ಮಂಜ, ಇಪ್ಪತ್ತೆರಡು ವರ್ಷ ಆಗದೆ ಇನ್ನೂ ಮದುವೆ ಮಾಡಿಲ್ಲ'

ಶ್ರೀ ಸಿದ್ದಪ್ಪನವರು ಹಲವಾರು ಜನಪದ ಕಲೆಗಳನ್ನು ಕರಗತಮಾಡಿಕೊಂಡಿದ್ದಾರೆ. 1.ಕೋಲಾಟ 2.ಚಕ್ರಾದಿ ಬಳೆ ನುಡಿಸುವುದು 3.ಪೂಜೆಕುಣಿತ 4.ನಂದಿಕುಣಿತ 5.ರಂಗದ ಕುಣಿತ 6.ದೊಣ್ಣೆವರಸೆ 7.ಹುಲಿವೇಷ– ಈ ಸಪ್ತ ಕಲೆಗಳಲ್ಲಿ ತಜ್ಞರಾಗಿ, ಪ್ರದರ್ಶಕರಾಗಿ, ಗುರುವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

1. ಕೋಲಾಟದ ವೈವಿಧ್ಯತೆಯನ್ನು ಇವರಿಂದಲೇ ಕೇಳಿ ತಿಳಿಯಬೇಕು. ಇಪ್ಪತ್ತನಾಲ್ಕು ವರಸೆ ಕೋಲಾಟವಿದೆ. ಇಪ್ಪತ್ತನಾಲ್ಕು ವಿಧಧ ವಿವಿಧ ಜನಪದ ಕೋಲು ಪದಗಳಿವೆ. ಒಂದು ಜನಪದ ಗೀತೆ ಮುಕ್ತಾಯವಾಗಿ ಮತ್ತೊಂದು ಜನಪದ ಗೀತೆಯನ್ನು ಆರಂಭಿಸಿದರೆ ಕೋಲಿನ ವರಸೆ ವಿಭಿನ್ನವಾಗುತ್ತದೆ.

| ವರಸೆ | ಜನಪದ ಗೀತೆ |
|---|---|
| 1. ಒಂಟುಕೋಲು | ಚಲುವಯ್ಯ ಚಲುವೋ ತಾನಿ ತಂದಾನ |
| 2. ಜೋಡಿಕೋಲು | ಅಲ್ಲವನ್ ಇಲ್ಲವನ್ ಎಲ್ಲವನೋ ಗುರು |
| 3. ತೂಗುಗೋಲು | ಕಿನ್ನುಡಿ ಕಿರುಗೆಜ್ಜೆ (ಶಿವಗೀತೆ) |
| 4. ಜಡೆಕೋಲು | ರಂಭೆ ಮೆರದಾವ್ವೋ (ಕೃಷ್ಣ ಸಂಬಂಧಿ ಹಾಡು) |
| 5. ಮೇಟಿಕೋಲು | ಓ! ನಾಮದಯ್ಯ ಹಾಡು |
| 6. ಕತ್ತರಿಗೋಲು | ಚೆಲ್ಲು ಚೆಲ್ಲೊ ಮಲ್ಲಿಗೆ |
| 7. ಐದು ಚಿಟಕಿ ಕೋಲು | ಆಲು ಮಲೆ ಅಧಿಕಾರ |
| 8. ಸುತ್ತುಗೋಲು | ಚಂದ್ರಗೌರಿ ಸೀರೆ ಉಟ್ಟುಕೊಂಡು |
| | ಸಂದೇಲಿ ನೀರಿಗೆ ಹೋಗವಳೆ |
| 9. ಹಿಂದಕ್ಕೆ, ಮುಂದಕ್ಕೆ ಒಂಟಿ ಕೋಲು | ರಂಗಯ್ಯ ರಂಗೋ |
| 10. ಕುಕ್ಕರಗೋಲು | ನೋಡುವಳಂದಾವ |
| | (ಚೌಡೇಶ್ವರಿ ಹಾಡು) |
| 11. ಬಾಗುಕೋಲು | ಚಪ್ಪರದ ಹಟ್ಟಲಿ ಸೊಪ್ಪು ಸೋಸೋಳೆ |
| 12. ಮಲ್ಲಿಗೆಕೋಲು | ಉದುರೋ ಉದುರೋ ಮಲ್ಲಿಗೆ |
| 13. ನೆತ್ತಿಯ ಮೇಲೆ ಹೊಡಿಯೋ ಕೋಲು | ಹನುಮಾನೋ ಗರುಡಾನೋ ಕೋಲು |
| 14. ಚಿತ್ತಲಾ ಕೋಲು | ಚಿತ್ತಲಾದ ಗೊಂಬೆ |
| 15. ಜಡೆಕೋಲು | ಅ) ಪ್ಪರಂಗಿ ಮರದ ರೀತಿ |
| | ಆ)ಸರಪಣಿ |
| | ಇ) ಜಡೆರೀತಿ ಅ)ಶಿವ ಶಿವ ಮಲ್ಲಿಗೆ |
| | ಆ) ತಂದಾನಿ ತಾನೊಂದು ಹರಳೋ |
| | ಇ) ನಿಲ್ಲೊ ನಿಲ್ಲಯ್ಯ ರಾಜ |
| 16. ಕೊರವಂಜಿ ಕೋಲು | ಬಾರಲಮ್ಮ ಕೊರವಂಜಿ |
| | ಬಾರಲೋ ಅಮ್ಮ ಮನೆಗೆ |
| 17. ಗಾಳಿಬಿಡಿಸೋ ಕೋಲು | ಜಯತು ಜಯವಾಗಲಿ ಗುರುವೆ |
| (ಕೊರವಂಜಿಗೆ ಬಂದ ಗಾಳಿ) | (ಬುಡುಬುಡುಕೆ ವೇಷಧಾರಿ ಹಾಡುವುದು) |
| 18. ಗಾಳಿ ಗಂಗಪ್ಪನ ಕೋಲು | ಮಗಳೇ ದುಂಡಿ ಎಲ್ಲಿಗೆ ಹೋದೆಯವ್ವ |

| | |
|---|---|
| **(ಕೊರವಂಜಿ ಅಪ್ಪನ ಕೋಲು)** | |
| **19. ಕೊರವನ ಕೋಲಾಟ** | **ತಿಂದವಳೆ ತಿಂಗಳ ಬೆಳಕಲ್ಲಿ ಗಂಗಳವ ಚೆಲ್ಲುವಳೆ** |
| **20. ಬಾ ನನ್ನ ನಾದುನಿಯೇ ಕೋಲು** | **ಚಿಕ್ಕ ಚಿಕ್ಕೋ ಶನಿವಾರ** |
| **21. ಬಂದಿಗೆ ಕೋಲು** | **ಹಾಕೋರಿಗೆಲ್ಲಾ ಜನಿವಾರ** |
| **(ತಲೆ ಮೇಲೆ ಬಿಂದಿಗೆ ಹೊತ್ತು ಕೋಲಾಟ ವಾಡುವುದು)** | **ಮಾತಾಡ್ ಮಾತಾಡ್ ಮಲ್ಲಿಗೆ** |
| **22. ಹಾಲರಬಿ ಕೋಲು** | **ಹಾಲರಬಿ ಬಂದೋ** |
| **23. ಚಾಮುಂಡೇಶ್ವರಿ ಕೋಲು** | **ಬೆಟ್ಟದ ಮೇಲವಳೆ ಬುಟ್ಟ ಮಂಡೆ ಚಾಮುಂಡಿ** |
| **24. ದಿಬ್ಬದ ಮೇಗಳ ಕೋಲು** | **ಅಬ್ಬಾರ್ ದಿಬ್ಬಾದ ಮೇಲೆ** |
| | **ಕಟ್ಟಿಕೋ ಮೂರು ಕಟ್ಟೆಯ** |

ಕೋಲಾಟದ ಪದಗಳು ಶ್ರೀ ಕೃಷ್ಣ–ರುಕ್ಮಿಣಿ, ಕೊರವಂಜಿ ಕಥೆಯ ಮೂಲವನ್ನು ಆಧಾರವಾಗಿರಿಸಿಕೊಂಡು ಆಡುವ ಆಟ, ಇಲ್ಲಿ ಬುಡುಬುಡಿಕೆಯವನು ಅವನ ಮಗಳ ಪಾತ್ರಗಳೂ ಪ್ರವೇಶ ಪಡೆಯುತ್ತವೆ.

ಶ್ರೀ ಸಿದ್ದಯ್ಯನವರ ನೆನಪಿನ ಬುತ್ತಿಯಿಂದ ನಿರರ್ಗಳವಾಗಿ ಕೋಲಾಟದ ಪದಗಳು ಬಿಚ್ಚಿಕೊಂಡು ಬರುತ್ತವೆ. ಜಾನಪದ ಸಿರಿಕಂಠ ಸಿದ್ದಯ್ಯನವರು ಹಾಡುತ್ತಿದ್ದರೆ ಕೇಳುಗಳಿಗೆ ಬೇಸರವಾಗದು, ಅವರ ಕಂಠಮಾಧುರ್ಯ ಕಿವಿ ಮತ್ತು ಮನಸ್ಸನ್ನು ತುಂಬುತ್ತದೆ.

'ಈಗಿನವರು ಕೈಗೆ ಸಿಕ್ಕಿದ ಕೋಲುಗಳ ತಕ್ಕಂದು ಕೋಲಾಟ ಆಡಿದರೆ ಏನು ಮಜಾ ಇದ್ದೀತು. ಒಂದು ಊರಲ್ಲಿ ಕೋಲು ಹುಯ್ಯುತ್ತಿದ್ದರೆ ಖಣಿಖಣಿ ಅಂತಾ ಇನ್ನೊಂದು ಊರಿಗೆ ಕೇಳಿಸ್ಬೇಕು ಅವು ಕೋಲು'

'ಅಂಥ ಕೋಲುಗಳ ಯಾವುದರಿಂದ ಮಾಡ್ತರೆ ಸಿದ್ದಪ್ಪ' ಎಂದುದಕ್ಕೆ ಕೋಲುಗಳ ತಯಾರಿಕೆ ಕುರಿತು ಹೀಗೆ ಹೇಳಿದರು:

ಕಾರೆ ಕಡ್ಡಿಯಿಂದ ಕೋಲುಗಳ ತಯಾರಿಸಬೇಕು. ಮೂರು ಬಗೆ ಕಾರೆ ಇವೆ.

1. ಹೆಣ್ಣುಕಾರೆ– ಒಂದು ಕವಡು ಎರಡು ಮುಳ್ಳು ಇರುತ್ತೆ.

2. ಗಂಟುಕಾರೆ– ಇದರ ಗಂಟುಗಳನ್ನು ನಯವಾಗಿ ಸವರಿ ಕೋಲು ತಯಾರಿಸುತ್ತಾರೆ.

3. ಒನಕೆ ಕಾರೆ– ಇದನ್ನು ಗಂಡು ಕಾರೆ ಅಂತರೆ, ಇದರಿಂದ ಒನಕೆ ತಯಾರಿಸುತ್ತಾರೆ.

ಕಾರೆಯಿಂದ ತಯಾರಿಸಿದ ಕೋಲುಗಳ ಶಬ್ದವೇ ಇಂಪಾಗಿರುತ್ತದೆ.

'ನಿಮಗೆ ಗುರು ಯಾರು ಸಿದ್ದಪ್ಪ?'

'ಯಾರು ಗುರು ಅಂತ ಹೇಳ್ಲಿ, ಹಿಂದಿನಿಂದಲೂ ಊರಲ್ಲಿ ಕೋಲಾಟ ಸಂದೆ ಹೊತ್ತಲಿ ಗುಡಿ ಮುಂದೆ, ಚಾವಡಿ ಮುಂದೆ ನಡಿತಿತ್ತು. ನೋಡ್ತಾ ನೋಡ್ತಾ ಆಡ್ತಾ ಆಡ್ತಾ ಕಲಿತೆ' ಎಂದರು.

'ನಂದಿ ಕಂಭ ಯಾವುದರಿಂದ ತಯಾರಿಸುತ್ತಾರೆ?'

'ಬಿದಿರು ಮರದಿಂದ ತಯಾರಿಸಿ, ಮೇಲೆ ಕೆಳಗೆ ಕಂಬಿನ ಕೊಳಾಯಿ ಹಾಕ್ತಾರೆ'

'ರಂಗದ ಕುಣಿತದ ಬಗ್ಗೆ ಏನಾದರೂ ಹೇಳ್ತೀರಾ?'

'ರಂಗದ ಕುಣಿತದಲ್ಲಿ ಹನ್ನೆರಡು ಬಗೆ ಅದೆ. ತಮಟೆ ಏಟಿಗೆ ತಕ್ಕ ಹಾಗೆ ಕುಣಿಯುವುದು, ಹಾಡುವುದು'

ಚಕ್ರಾದಿ ಬಳೆ ಕಲೆ: ಈ ಕಲೆಯಲ್ಲೂ ಸಿದ್ದಪ್ಪ ನಿಪುಣರು. ಮಸಣಕಮ್ಮನ ದೇವಾಲಯದಲ್ಲಿ ಕಣಿ ಹೇಳುವಾಗ ಬಾರಿಸುವ ಚರ್ಮದ ಜನಪದ ವಾದ್ಯ, ಬಳೆ ಮಣ್ಣಿನದ್ದು, ರಾಗಿ ಹಿಟ್ಟು ಬಳಿದು ಕಾಯಿಸಿ ಆಡಿನ ಚರ್ಮ ಕತ್ತರಿಸಿ ಅಂಟಿಸುವುದು. ಚಕ್ರಾದಿ ಬಳೆಯನ್ನು ಕಾಯಿಸಿ ಬಡಿದಾಗ 'ದಿಬ್ಬಂ ದಿಬ್ಬಂ' ಶಬ್ದ ಹೊರಡುತ್ತದೆ. (ಬಾಲ್ಯದಲ್ಲಿ ನಾವು ಇದನ್ನು 'ದುಬ್ಬಣ' ಅಂತಾ ಇದ್ದೋ) ಈ ವಾದ್ಯವನ್ನು ಬಡಿಯುತ್ತಾ –

'ತಾಯಿ ಮಸಣಮ್ಮ ನೀವು ಕಾಣಿರಾ
ನುಗ್ಗ ಹಳ್ಳಿ ತ್ವಾಟದಲ್ಲಿ ಹೂವ ಕುಯ್ಯೋಳ' ಎಂದು ಹಾಡುತ್ತಾರೆ.

ಸಿದ್ದಪ್ಪನವರು ಜನಪದ ಗೀತೆಗಳನ್ನು ಇಂಪಾಗಿ ಹಾಡುತ್ತಾರೆ. ಉಜ್ಜನಿಚೌಡಮ್ಮ, ಪಟ್ಟಲದಮ್ಮ, ಹೊಂಬಾಳಮ್ಮ, ಮಸಣಮ್ಮ, ಭೂಮಿಸಿದ್ದಪ್ಪ, ಎಡಹೊಳೆ ಚೆನ್ನಮ್ಮ, ಬೋರಪ್ಪ ಈ ದೇವರುಗಳ ಮೇಲಿನ ಗೀತೆಗಳನ್ನು ಇವರಿಂದ ಕೇಳಬಹುದು.

ಗುರುವಾಗಿ ಸಿದ್ದಪ್ಪನವರು : 1. ರಾಮನಗರದ ಜಾನಪದ ಪರಿಷತ್ತಿನ ವತಿಯಿಂದ ಗುಲಬರ್ಗಾ ಕಲಾವಿದರಿಗೆ ಕೋಲಾಟದ ಕುಣಿತವನ್ನು ಕಲಿಸಿದ್ದಾರೆ.

2. ಜಾನಪದ ಲೋಕದಲ್ಲಿ ಬಿಜಾಪುರದ ಆಸಕ್ತ ಯುವಕರಿಗೆ ಕೋಲಾಟ ಕಲಿಸಿದ್ದಾರೆ.

3. ಮೈಸೂರು ರಂಗಾಯಣದಲ್ಲಿ ಧಾರವಾಡದ ಕಲಾವಿದರಿಗೆ ಕೋಲಾಟ ಕಲಿಸಿದ್ದಾರೆ.

4. ತುಮಕೂರಿನ ಮಹಿಳಾ ಸಂಘದಲ್ಲಿ ಮಹಿಳೆಯರಿಗೆ ಐದು ದಿನ ಕೋಲಾಟ ತರಬೇತಿ ನೀಡಿದ್ದಾರೆ. ಇಲ್ಲೆಲ್ಲಾ ಕೋಲಾಟದ ಪದಗಳನ್ನು ಕಲಿಸಿದ್ದಾರೆ.

ಗ್ರಾಮೀಣ ಪ್ರದೇಶಗಳಾದ ಬನ್ನಹಳ್ಳಿ, ದೊಡ್ಡಮುಲುಗೂಡು, ಮಳವಳ್ಳಿ, ಗಾಮನಹಳ್ಳಿ, ಮಾದರಹಳ್ಳಿ, ಹನಿಯಂಬಾಡಿ, ಸಾತನೂರು, ತೊರೆಶೆಟ್ಟಹಳ್ಳಿ, ಕಾರಸವಾಡಿ, ಗೋಪಾಲಪುರ, ಕೊಮ್ಮೇರಹಳ್ಳಿ, ಕೊತ್ತತ್ತಿ, ಹುಲ್ಲುಕೆರೆ ಮೊದಲಾದ ಊರುಗಳಲ್ಲಿ ಹನ್ನೆರಡರಿಂದ ಹದಿನೈದು ಜನರಿಗೆ ಕೋಲಾಟವನ್ನು, ತಮ್ಮ ಕಲೆಗಳಾದ ಪೂಜಾಕುಣಿತ, ರಂಗದಕುಣಿತ, ಕೋಲಾಟ, ನಂದಿಕುಣಿತ ದೊಣ್ಣೆವರಸೆ, ಹುಲಿವೇಷವನ್ನು ಹಲವರಿಗೆ ಕಲಿಸಿದ್ದಾರೆ.

ಇವರಿಗೆ ಐದುನೂರು ಶಿಷ್ಯಂದಿರಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ತರಬೇತಿ ನೀಡಿದಾಗ ಗೌರವಧನ ನೀಡಿ ಗೌರವಿಸಿದ್ದಾರೆ. ಜಾನಪದ ಲೋಕ, ರಂಗಾಯಣದಲ್ಲೂ ಗೌರವಧನ ನೀಡಿದ್ದಾರೆ. ತರಬೇತಿ ನೀಡಿದ ಕಡೆ ಸ್ವಲ್ಪ ಸಂಭಾವನೆ ನೀಡಿದ್ದಾರೆ.

ಯಾವುದೇ ಅಕಾಡೆಮಿಯಾಗಲಿ, ಸಂಘ ಸಂಸ್ಥೆಗಳಾಗಲಿ ಇವರ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸಲಿಲ್ಲ. ಯಾವ ಪ್ರಶಸ್ತಿಯೂ ಬಂದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಒಂದು ಸಾವಿರ ರೂ, ಮಾಸಾಶನ ನೀಡುತ್ತಿದೆ.

ಮೈಸೂರು ಆಕಾಶವಾಣಿಯಲ್ಲಿ ವರ್ಷದಲ್ಲಿ ಆರೇಳು ಸಾರಿಯಂತೆ ಇಲ್ಲಿಯವರೆಗೆ ಇಪ್ಪತ್ತು ಸಾರಿ ರಾಗಿ ಕಲ್ಲಿನ ಪದ, ಮದುವೆಪದ, ಮಾದಪ್ಪನ ಗೀತೆಯನ್ನು ನಾಲ್ವಾರು ಮಹಿಳೆಯರ ತಂಡದೊಡನೆ ಹದಿನೈದು ನಿಮಿಷ ಕಾರ್ಯಕ್ರಮದಲ್ಲಿ ಹಾಡಿ ಮೂರು ಸಾವಿರ ಸಂಭಾವನೆ ಪಡೆದಿದ್ದಾರೆ.

ಇವರು ಅವಿದ್ಯಾವಂತರಾದರೂ 2009ರ ಗಗನ ಚುಕ್ಕಿ ಉತ್ಸವ, ದಸರಾ ಉತ್ಸವ, ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಪ್ರದರ್ಶನ ನೀಡಿದ್ದಾರೆ.

ಜೋಗಿ, ಗಜ, ತಾಕತ್ತು, ಪ್ರೀತಿ ಏಕೆ ಭೂಮಿ ಮೇಲಿದೆ, ಭಾಗ್ಯಾದ ಬಳೆಗಾರ, ಕಲ್ಲು ಅರಳಿ ಹೂವಾಯ್ತು, ಸೇವಂತಿ ಸೇವಂತಿ ಮೊದಲಾದ ಚಲನಚಿತ್ರಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ.

❖



## ಶ್ರೀ ಎಚ್. ಎನ್. ಪರಶಿವಮೂರ್ತಿ (ವೀರಭದ್ರನ ಕುಣಿತ)

ಶ್ರೀ ಎಚ್. ಎನ್.ಪರಶಿವಮೂರ್ತಿಯವರು ಮಂಡ್ಯ-ಬೆಂಗಳೂರು ಹೆದ್ದಾರಿಯಲ್ಲಿರುವ ಹಳೆ ಬೂದನೂರು ಗ್ರಾಮದ ವೀರಭದ್ರನ ಕುಣಿತದ ಹಿರಿಯ ಕಲಾವಿದರು. ಈ ಕಲೆಯು ಇವರಿಗೆ ವಂಶಪಾರಂಪಾರಿಕವಾಗಿ ಬಂದಿದೆ. ಇವರು ಶಿವಾರ್ಚಕ (ತಮ್ಮಡಿ)ರು, ಅವಿದ್ಯಾವಂತರು. ಇವರ ತಂದೆ ಶಿವಾರ್ಚಕ ನಂಜಪ್ಪ, ತಾಯಿ ಪುಟ್ಟಮ್ಮಣ್ಣಮ್ಮನವರು. ಇವರಿಗೆ ಈಗ ಸುಮಾರು ಅರವತ್ತು ವರ್ಷಗಳ ಮೇಲಾಗಿವೆ. ಶ್ರೀಮತಿ ಲಲಿತ ಇವರ ಮಡದಿ. ಇವರಿಗೆ ನಾಲ್ಕು ಹೆಣ್ಣು ಮಕ್ಕಳು ಒಬ್ಬ ಮಗನೂ ಇದ್ದಾನೆ. ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದಾರೆ.

ವೀರಭದ್ರನ ಕಲೆಯನ್ನು ಕಲಿಸಿದ ಗುರು, ಇವರ ತಾತನವರಾದ ತಮ್ಮಯ್ಯಪ್ಪನವರು. ಶಿವನ ಆಜ್ಞೆಯಿಂದ ದಕ್ಷ ಬ್ರಹ್ಮನ ಯಜ್ಞವನ್ನು ಭಗ್ನ ಮಾಡಿ ಆತನ ಶಿರಸ್ಸನ್ನು ಕಡಿದು ಬಂದ ವೀರಭದ್ರನ ಪುರಾಣದ ಕಥೆಯನ್ನು ಹೇಳುತ್ತಾ ಕುಣಿಯುವುದೇ ವೀರಭದ್ರನ ಕುಣಿತ.

ವೀರಭದ್ರನ ವೇಷ ಕಾಸಾಯ ವಸ್ತ್ರ, ಕಾಲಿಗೆ ಗೆಜ್ಜೆಯಸರ, ಮೊಣಕಾಲಿಗೆ ಜಂಗು, ಕಾಲಿಗೆ ಗಗ್ಗರ, ಸೊಂಟಕ್ಕೆ ರಕ್ಕಸರ ತಲೆಗಳ ಪ್ರತಿಮೆ, ತಲೆಗೆ ಮಣಿಯುಕ್ತವಾದ ಕಿರೀಟ, ಹಿಂದಲೆಗೆ ಚಮರೀ ಮೃಗದ ಕೆಂಜಡೆ, ತೋಳುಗಳಿಗೆ ನಾಗರಬಂದಿ,

ಹಣೆಗೆ ವಿಭೂತಿ, ಮುಖಕ್ಕೆ ಶ್ರೀಗಂಧ, ದಟ್ಟವಾದ ಮೀಸೆ, ಕಿವಿಗೆ ರುದ್ರಾಕ್ಷಿ ಕುಂಡಲಿ, ಬಲಗೈಲಿ ಖಡ್ಗ ಹಿಡಿದು ತಮಟೆ, ನಗಾರಿಯ ಶಬ್ದಕ್ಕೆ ಲಯಬದ್ಧವಾಗಿ ಹೆಜ್ಜೆ ಇಡುತ್ತಾ ವೀರಭದ್ರ ದೇವರ ಒಡಪುಗಳನ್ನು ಹೇಳುತ್ತಾ ವೀರಾವೇಷದಿಂದ ಹೆಜ್ಜೆಯಿಡುತ್ತಿದ್ದರೆ ನೋಟಕರ ಎದೆ ಝಲ್ಲೆನ್ನುತ್ತದೆ.

'ವೀರಭದ್ರನ ವೇಷ ಧರಿಸಿ ನಿಂತರೆ ನನಗೆ ನಾನೇ ಸಾಟಿ' ಎನ್ನುತ್ತಾರೆ ಪರಶಿವಮೂರ್ತಿಯವರು. ಈ ಕಲೆಯ ಬಗೆಗೆ ಅಪಾರ ಗೌರವವಿದೆ; ಕಲಾಪ್ರದರ್ಶನದಲ್ಲಿ ಇವರಿಗೆ ಆತ್ಮವಿಶ್ವಾಸವಿದೆ. ಈ ಕಲೆಯನ್ನು ದೇವರ ಕೊಂಡೋತ್ಸವ, ಗೃಹಪ್ರವೇಶ, ದೇವತಾಕಾರ್ಯಗಳಾದ ಹೋಮ-ಯಜ್ಞ ಸಂದರ್ಭಗಳಲ್ಲಿ; ಗ್ರಾಮ, ರಾಜ್ಯ, ರಾಷ್ಟ್ರದ ಒಳಿತಿನ ಕಾರ್ಯಕ್ರಮಗಳಲ್ಲಿ ಕೆಲವು ದಶಕಗಳಿಂದ ಪ್ರದರ್ಶಿಸುತ್ತಾ ಬಂದಿರುವುದಾಗಿಯೂ, ಈ ಕಲಾ ಸೇವೆಯಲ್ಲಿ ಹಿಂದಿರುಗಿ ನೋಡಿಲ್ಲವೆಂದೂ ತಾವು ನಂಬಿರುವ ಕಲೆಯ ಬಗೆಗೆ ಹೆಮ್ಮೆಯಿಂದ ಹೇಳುತ್ತಾರೆ.

ಪರಂಪರಾಗತವಾಗಿ ಕಲಿತ ವಿದ್ಯೆಯನ್ನು ಇತರರಿಗೂ ಕಲಿಸಿರುವುದಾಗಿ ಹೇಳುತ್ತಾರೆ: 1. ಹಳೆಬೂದನೂರಿನ ಸರ್ವೋದಯ ಯುವಕ ಸಂಘದವರಿಗೆ ಕಲಿಸಿದ ಮೇಲೆ, ಕೇರಳ ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಪ್ರದರ್ಶನ ನೀಡಿ ಅಲ್ಲಿಯ ಜನರ ಮೆಚ್ಚುಗೆಗೆ ಸರ್ವೋದಯ ಯುವಕ ಸಂಘದವರು ಪಾತ್ರರಾಗಿದ್ದಾರೆ.

2. ಮೈಸೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಈ ಗಂಡುಕಲೆಯನ್ನು ಕಲಿಸಿದ್ದಾರೆ. ಈ ವಿದ್ಯಾರ್ಥಿನಿಯರು ಗುಲ್ಬರ್ಗದಲ್ಲಿ ನಡೆದ ಯುವಜನ ಮೇಳದಲ್ಲಿ ಪ್ರದರ್ಶನ ನೀಡಿ ಪ್ರಶಸ್ತಿಯನ್ನು ಪಡೆದಿದ್ದಾರೆ.

3. ಮಂಡ್ಯದ ಮಹಿಳಾ ಸರಕಾರಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಮೊದಲ ಬಾರಿಗೆ ಈ ಕಲೆಯ ತರಬೇತಿ ನೀಡಿದ ಹಿರಿಮೆಗೆ ಪಾತ್ರರಾಗಿದ್ದಾರೆ.

ಶ್ರೀ ಎಚ್.ಎನ್. ಪರಶಿವಮೂರ್ತಿ ಅವರು ಅನೇಕ ಪ್ರದರ್ಶನಗಳನ್ನು ನೀಡಿ ಕೆಲವು ಬಿರುದುಗಳನ್ನೂ ಪಡೆದಿದ್ದಾರೆ.

ಪ್ರದರ್ಶನಗಳು : 1. 1993 ರಲ್ಲಿ ಮಂಡ್ಯ ಜಿಲ್ಲೆಯ ಕೊಪ್ಪದ ಜಾನಪದ ಮೇಳ, 2. 1994 ರಲ್ಲಿ ಮೈಸೂರು ದಸರಾ ಉತ್ಸವ, 3. 1992 ರಲ್ಲಿ ಮಂಡ್ಯ ಜಿಲ್ಲೆಯ ಗುತ್ತಲು ಗ್ರಾಮದ ಜಂಗಮ ಮಠದ ಬಸವ ಸಮಿತಿಯವರಿಂದ ಶ್ರೀ ತೋಂಟದ ಶಿವಾಚಾರ್ಯ ಸ್ವಾಮಿಗಳ ಸಮ್ಮುಖದಲ್ಲಿ ವೀರಭದ್ರ ಕುಣಿತದ ಪ್ರದರ್ಶನ, 3. 1993ರಲ್ಲಿ ಮೈಸೂರು ದಸರಾ ಉತ್ಸವ, 4. 1994ರಲ್ಲಿ ಮಂಡ್ಯದಲ್ಲಿ ನಡೆದ

ರಾಜ್ಯೋತ್ಸವ, 5. 1993ರಲ್ಲಿ ಮಂಡ್ಯ ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ, 6. 1995ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ, 7. 1996ರಲ್ಲಿ ಹಂಪಿ ಉತ್ಸವದ ಕನ್ನಡ ರಾಜ್ಯೋತ್ಸವದಲ್ಲಿ ಭಾಗವಹಿಸಿದ್ದಾರೆ, 8. 1996ರಲ್ಲಿ ಕನ್ನಡ ರಾಜ್ಯೋತ್ಸವ, 9. 1997ರಲ್ಲಿ ಮೈಸೂರಿನಲ್ಲಿ ರೇಣುಕಾದೇವಿಯ ಉತ್ಸವ, 10. 1997ರಲ್ಲಿ ಮೇಲು ಕೋಟೆಯ ಜಾನಪದ ಕಲಾಮೇಳ, 11. 1997 ಮದ್ದೂರಿನಲ್ಲಿ ಜಾನಪದ ಕಲಾ ಮೇಳ, 12. 1997ರಲ್ಲಿ ಕೊಡಗು ಉತ್ಸವ, 13. 1997 ಮಂಡ್ಯ ಜಾನಪದ ಕಲಾ ಮೇಳ, 14. 1998ರಲ್ಲಿ ಮಂಡ್ಯ ಜಿಲ್ಲಾ ರಾಷ್ಟ್ರೀಯ ಉತ್ಸವ, 15. 1998ರಲ್ಲಿ ವಾರ್ತಾ ಮತ್ತು ಪ್ರಸಾರ ಇಲಾಖೆಯ ಕಾರ್ಯಕ್ರಮಗಳು, 16. 2000ರಲ್ಲಿ ಮಂಡ್ಯ ಜಾನಪದ ಕಲಾ ಜಾಥ, 17. 2000 ರಾಜ್ಯೋತ್ಸವ ಕಾರ್ಯಕ್ರಮ, 18. 2000 ಹನಕೆರೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ, 19. 2001 ಮಂಡ್ಯ ಜಿಲ್ಲಾ ರಾಷ್ಟ್ರೀಯ ಉತ್ಸವ, 20. 2002 ಮೈಸೂರು ದಸರಾ ಉತ್ಸವ 21. 2003 ಗಡಿನಾಡ ಕನ್ನಡಿಗರ ಉತ್ಸವ, ಕಾಸರಗೋಡು, 22. 2004 ರಾಜ್ಯೋತ್ಸವ ಕಾರ್ಯಕ್ರಮ 23. 2007ರಲ್ಲಿ ಸುವರ್ಣ ಸಂಸ್ಕೃತಿಯ ಉತ್ಸವ, 24. 2007 ಜಾನಪದ ಜಾತ್ರೆ, 25. 2007ರಲ್ಲಿ ಮೈಸೂರಿನ ರಂಗಾಯಣ ಕಾರ್ಯಕ್ರಮ– ಇಲ್ಲೆಲ್ಲಾ ಪ್ರದರ್ಶನ ನೀಡಿ ಅರ್ಹತಾ ಪತ್ರಗಳನ್ನು ಪಡೆದಿದ್ದಾರೆ.

**ಪ್ರಶಸ್ತಿಗಳು : ಬಿರುದುಗಳು :** 1. ತೋಂಟದ ಶ್ರೀ ಶಿವಾಚಾರ್ಯ ಮಹಾಸ್ವಾಮಿಗಳಿಂದ 'ಕಲಾರತ್ನ' ಬಿರುದು ಮತ್ತು ಸನ್ಮಾನ, 2. 1996ರಲ್ಲಿ ಮದ್ದೂರಿನ ವೈದ್ಯನಾಥಪುರದ ಗ್ರಾಮಸ್ಥರಿಂದ 'ಕಲಾವಿಶಾರದ' ಬಿರುದು ಮತ್ತು ಸನ್ಮಾನ, 3. ಮಂಡ್ಯ ತಾಲ್ಲೂಕು ತಹಶೀಲ್ದಾರರಿಂದ, 1996ರಲ್ಲಿ 'ನಾಟ್ಯ ಭೈರವ' ಬಿರುದು ಸನ್ಮಾನ, 4. 1997ರಲ್ಲಿ ಮೈಸೂರಿನ ಸಂದೇಶ್ ನಾಗರಾಜು ಅವರಿಂದ 'ಕಲಾ ವಿಭೂಷಣ' ಬಿರುದು, 5. 1998ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, 9. 2007ರಲ್ಲಿ ಮೈಸೂರಿನ ರಂಗಾಯಣ ಕಾರ್ಯಕ್ರಮದಲ್ಲಿ 'ಅಖಿಲ ಭಾರತ ಸರ್ವಜ್ಞ' ಪ್ರಶಸ್ತಿ ಪ್ರಾಪ್ತಿಸಿದೆ. ಇವರಿಗೆ ಅನೇಕ ನೆನಪಿನ ಕಾಣಿಕೆಗಳು ಸಂದಿವೆ. ಕಲಾವಿದರಿಗೆ ನೀಡುವ ಮಾಸಾಶನಕ್ಕೆ ಮನವಿ ಸಲ್ಲಿಸಿದ್ದಾರೆ.

❖



## ಶ್ರೀ ನಿಂಗಣ್ಣ (ನಂದಿಧ್ವಜ, ಮರಗಾಲಿನ ಪೂಜಾ ಕುಣಿತ)

ಶ್ರೀ ನಿಂಗಣ್ಣನವರು ಮೂಲತಃ ಮಂಡ್ಯ ತಾಲ್ಲೂಕಿನ ತೂಬಿನ ಕೆರೆಯವರು. ಕಾರಸವಾಡಿಯ ದಿವಂಗತ ಗಣಿಗೌಡ ಮತ್ತು ಚಾಮಮ್ಮ ಅವರ ಮೊದಲ ದತ್ತು ಪುತ್ರ, ಇವರು ಈಗ ಮಂಡ್ಯಕ್ಕೆ ಹೊಂದಿಕೊಂಡಂತಿರುವ ಹೊಸಹಳ್ಳಿಯಲ್ಲಿ ವಾಸವಾಗಿದ್ದಾರೆ.

ಜನಪದದ ಅಸಾಮಾನ್ಯ ಕಲಾವಿದ ಶ್ರೀ ನಿಂಗಣ್ಣ ಅವರು ಅನಕ್ಷರಸ್ಥರು. ಓದು ದಕ್ಕದ ಇವರು ಹಲವಾರು ಜನಪದ ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ. ಶ್ರೀಮತಿ ಇಂದಿರಾ ಮಡದಿ, ನಾಲ್ಕನೇ ತರಗತಿವರೆಗೆ ಓದಿದ್ದಾರೆ; ಹತ್ತು ವರ್ಷದ ರೋಜಾ, ಎಂಟು ವರ್ಷದ ಪೂಜಾ ನಿಂಗಣ್ಣನವರ ಪುತ್ರಿಯರು.

ಪೂಜಾ ಕುಣಿತ, ನಂದಿಧ್ವಜ ಕುಣಿತ, ತಮಟೆ, ಮರಗಾಲು, ದೊಣ್ಣೆ ವರಸೆ ಮೊದಲಾದ ಕಲೆಗಳನ್ನು ಚೆನ್ನಾಗಿ ಬಲ್ಲ ನಿಂಗಣ್ಣನವರು ಹೆಸರುಗಳಿಸಿದ್ದು- ಮರಗಾಲಿನ ಪೂಜಾ ಕುಣಿತ ಮತ್ತು ನಂದಿಧ್ವಜ ಕುಣಿತದಲ್ಲಿ. ಕಾಲಿಗೆ ಮರಗಾಲು ಕಟ್ಟಿಕೊಂಡು ನಡೆಯುವುದು ಬಹಳ ಕಷ್ಟ; ಇವರು ಮರಗಾಲು ಕಟ್ಟಿಕೊಂಡು ಪೂಜೆಯನ್ನು ತಲೆಯ ಮೇಲೆ ಹೊತ್ತು ಕುಣಿಯುವುದು ಅದ್ಭುತ ಹಾಗೂ ರೋಮಾಂಚಕ. ದೊಣ್ಣೆವರಸೆ ಮತ್ತು ತಮಟೆಯಲ್ಲೂ ನಿಪುಣರು. ಗ್ರಾಮೀಣ ಪ್ರದೇಶಗಳಲ್ಲಿ ಇಂದು ದೊಣ್ಣೆವರಸೆ ವಿರಳವಾಗುತ್ತಿದೆ. ಹರಿಜನರು ಹೊಡೆಯುತ್ತಿದ್ದ

ತಮಟೆಯನ್ನು ಒಕ್ಕಲಿಗರಾದ ಇವರು ಆಸಕ್ತಿಯಿಂದ ತಮಟೆ ಬಾರಿಸುವುದನ್ನು ಕಲಿತು ಮೈನಿಮಿರೇಳುವಂತೆ ತಮಟೆಯನ್ನು ಬಾರಿಸುತ್ತಾರೆ.

ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ತಮ್ಮ ಕಲೆಗಳನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

1. ದೆಹಲಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ, 2. ಕಲ್ಕತ್ತದಲ್ಲಿ ನಡೆದ ಪ್ರವಾಸೋದ್ಯಮ ದಿನ, 3. ಚೆನ್ನೈನಲ್ಲಿ ನಡೆದ ದಕ್ಷಿಣ ಚಿತ್ರೋತ್ಸವ, 4. ಜಯಲಲಿತ ಅವರ ಮನೆಯಲ್ಲಿ ನಡೆದ ವಿವಾಹ ಮಹೋತ್ಸವದಲ್ಲಿ ಪೂಜಾ ಕುಣಿತವನ್ನು ಪ್ರದರ್ಶಿಸಿದ್ದಾರೆ, 5. ಕನ್ಯಾಕುಮಾರಿಯ ಭಾರತೋತ್ಸವಂ, 6. ಕೇರಳದ ಪಟ್ಟನಂ ತಿಟ್ಟದಲ್ಲಿ ನಡೆದ ಭಾವೈಕ್ಯತಾ ಶಿಬಿರ, 7. ರಾಜಾಸ್ಥಾನದ ಕೋಟಾದಲ್ಲಿ ನವರಾತ್ರಿ ಉತ್ಸವ, 8. ಮಂಡ್ಯದಲ್ಲಿ ನಡೆದ 63ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, 9. ಬೆಂಳೂರಿನ ವಿಧಾನಸೌಧದ ಎದುರು ನಡೆದ ಜಾನಪದ ಜಾತ್ರೆಯಲ್ಲಿ ನಂದಿಧ್ವಜ ಕುಣಿತ, 10. ಕೊಲ್ಲೂರು ಕಾರ್ಯಕ್ರಮದಲ್ಲಿ ನಂದಿಧ್ವಜ ಕುಣಿತ, 11. ಬೆಳಗಾಂನ ಜಾನಪದ ಜಾತ್ರೆಯಲ್ಲಿ ಪೂಜಾ ಕುಣಿತ, 12. ಗುಲ್ಬರ್ಗದ ದೇಸಿ ಉತ್ಸವದಲ್ಲಿ ಪೂಜಾ ಕುಣಿತ – ಮರಗಾಲಿನಲ್ಲೇ ಪೂಜಾಕುಣಿತ ಮಾಡಿ ಪ್ರೇಕ್ಷಕರಿಂದ ಮೆಚ್ಚುಗೆ ಪಡೆದಿದ್ದಾರೆ.

ಐವತ್ತು ವರ್ಷಗಳಾಗಿರುವ ನಿಂಗಣ್ಣನವರು ಇಂದೂ ಕಲಾ ಪ್ರದರ್ಶನ ನೀಡುವುದರಲ್ಲಿ ಉತ್ಸಾಹವುಳ್ಳವರಾಗಿದ್ದಾರೆ.

**ಸನ್ಮಾನ :** ಶ್ರೀ ನಿಂಗಣ್ಣನವರ ಕಲಾ ನೈಪುಣ್ಯವನ್ನು ಗುರುತಿಸಿದ ಕಲಾಭಿಮಾನಿಗಳು ಇವರನ್ನು ಸನ್ಮಾನಿಸಿದ್ದಾರೆ. 1. ಮಂಡ್ಯ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತು ಶಾಲು ಹೊದಿಸಿ ಸನ್ಮಾನಿಸಿದೆ, 2. ಮೇಲುಕೋಟೆಯಲ್ಲಿ ನಡೆಯುವ ಚಲುವರಾಯಸ್ವಾಮಿ ಉತ್ಸವದಲ್ಲಿ ಸನ್ಮಾನಿತರಾಗಿದ್ದಾರೆ.

**ಗುರು :** ಸುಮಾರು ನೂರು ಜನರಿಗೆ ತಮ್ಮ ವಿವಿಧ ಕಲೆಗಳನ್ನು ಧಾರೆ ಎರೆದಿದ್ದಾರೆ. ಉದಯೋನ್ಮುಖ ಪ್ರತಿಭಾವಂತ ಪೂಜಾಕುಣಿತದ ಯುವ ಕಲಾವಿದ ಇವರ ಶಿಷ್ಯ.

'ಸರಕಾರದಿಂದ ಯಾವ ಧನ ಸಹಾಯವೂ ಇದುವರೆವಿಗೂ ಬಂದಿಲ್ಲ. ಕನ್ನಡ ಸಂಸ್ಕೃತಿ ಇಲಾಖೆಯ ಗುರು-ಶಿಷ್ಯ ಪರಂಪರೆಯ ಯೋಜನೆಯಲ್ಲಿ ಸರಕಾರ ನೆರವು ನೀಡಿದ್ದರೆ. ಒಂದು ಪರಂಪರೆಯನ್ನು ಬೆಳೆಸುತ್ತಿದ್ದೆ' ಎಂದು ನೊಂದು ನುಡಿಯುತ್ತಾರೆ ನಿಂಗಣ್ಣ.

ಹಿಂದೆ ಕೃಷಿಕರಾಗಿದ್ದ ಇವರು ವಯಸ್ಸಾದುದರಿಂದ ದುಡಿಯುವ ಶಕ್ತಿ ಕುಂದಿದೆ. ಜೀವನೋಪಾಯಕ್ಕಾಗಿ ಇಂದು ಇವರು ಆಟೋಚಾಲಕರಾಗಿದ್ದಾರೆ. ❖



## ಶ್ರೀ ಎಲ್. ಶಂಕರ್ (ಒನಕೆ ಕುಣಿತ)

ಮಂಡ್ಯ–ಮೈಸೂರು ಹೆದ್ದಾರಿಯ ಪಕ್ಕದಲ್ಲಿ 4.ಕಿ.ಮೀ. ದೂರದಲ್ಲಿ ಇಂಡುವಾಳು ಗ್ರಾಮವಿದೆ. ಶಂಕರ್ ಅವರ ತಂದೆ ದಿವಂಗತ ಲಿಂಗಯ್ಯ, ತಾಯಿ ದೇವಮ್ಮ; ಒಕ್ಕಲಿಗರು 1954ರಲ್ಲಿ (56ವರ್ಷ) ಶಂಕರ್ ಜನಿಸಿದರು. ಅವಿದ್ಯಾವಂತರು.

ಕೊತ್ತತ್ತಿಯ ಅಕ್ಕನ ಮಗಳಾದ ಶ್ರೀಮತಿ ಎಸ್.ಪ್ರೇಮ ಶಂಕರ್ ಅವರ ಮಡದಿ. ಇವರ ಮಗ ಕಿರಣ್ ಬಿ.ಎ. ವ್ಯಾಸಂಗ ಮಾಡುತ್ತಿದ್ದಾರೆ. ಮಗಳು ಎಸ್. ಅರುಣ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಶಂಕರ್ ಅವರಿಗೆ ಮಂಗಳೂರು ಹೆಂಚಿನ ಮನೆ ಇದೆ, 4ಚದರ ಆರ್.ಸಿ.ಸಿ ಇದೆ.

1986ರಕ್ಕಿಂತ ಹಿಂದೆ ಇಂಡುವಾಳಿನಲ್ಲಿ ಪೂಜಾಕುಣಿತವಲ್ಲದೆ ಅನ್ಯ ಜನಪದ ಕಲೆಗಳಿರಲಿಲ್ಲ. ಆಗ ಜನಪದ ಕಲಾಮೇಳವನ್ನು ನೋಡಿ ಉತ್ಸಾಹಗೊಂಡ ಶಂಕರ್, ಕರಟೆಗೆರೆ ಶೆಟ್ಟಿ ಹಳ್ಳಿಯ ವೆಂಕಟೇಶ್ ಎಂಬುವವರಿಂದ ಒನಕೆ ಕುಣಿತವನ್ನು ಕಲಿತು ಎರಡು ಮೂರು ವರ್ಷಗಳಲ್ಲಿಯೇ ಪ್ರದರ್ಶನ ನೀಡುವ ಸಾಮರ್ಥ್ಯವನ್ನು ಪಡೆದರು. ತಮಟೆ ನಗಾರಿಯ ಶಬ್ದಕ್ಕೆ ಅನುಗುಣವಾಗಿ ಒನಕೆಯನ್ನು ತಲೆಯ ಮೇಲಿಟ್ಟುಕೊಂಡು ಕೈಬಿಟ್ಟು ಗತ್ತಿನಿಂದ ಕುಣಿಯುತ್ತಾರೆ. ಎರಡು, ಮೂರು, ಹದಿನಾಲ್ಕು

ಹೆಜ್ಜೆಯ ಕುಣಿತವನ್ನು ಮಾಡುತ್ತಾರೆ. ಒನಕೆಯ ಮೇಲೆ ದೀಪಹತ್ತಿಸಿ ತಲೆಯ ಮೇಲಿರಿಸಿಕೊಂಡು ಎರಡು ಕೈಗಳನ್ನು ನೆಲದ ಮೇಲೆ ಇಳಿಬಿಟ್ಟು, ಕಾಲುಗಳನ್ನು ಹಿಂದಕ್ಕೆ ಚಾಚಿ, ಇಳಿಬಿಟ್ಟ ಹಸ್ತದಿಂದ ಸುತ್ತಿಬರುವುದು, ನೆಲದ ಮೇಲಿರಿಸಿದ ರೂಪಾಯಿ ನೋಟನ್ನು ಬಾಗಿ ಬಾಯಲ್ಲಿ ಕಚ್ಚಿ ಮೇಲೆತ್ತುವುದು, ನೆಲಕ್ಕೆ ಚುಚ್ಚಿದ ಸೂಜಿಯನ್ನು ಕಣ್ಣಿನ ರೆಪ್ಪೆಯಿಂದ ಹಿಡಿದು ಎತ್ತಿ ತೋರಿಸುವುದು ಮೊದಲಾದ ಚಮತ್ಕಾರವನ್ನು ಮಾಡಿ ಜನರಿಂದ ಮೆಚ್ಚುಗೆ ಪಡೆದಿದ್ದಾರೆ.

ಶ್ರೀ ಶಂಕರ್ ಅವರು ಪೂಜಾಕುಣಿತ, ಕೋಲಾಟವನ್ನು ಬಲ್ಲವರು. ಇಂಡುವಾಳಿನ ಹಿರಿಯಮ್ಮ ದೇವರ ಪೂಜೆಯನ್ನು ಹೊತ್ತು ಮೆರೆಸುತ್ತಾರೆ. ಪೂಜೆಯ ಶಿಖರ ಭಾಗದಲ್ಲಿ ಏಳು ಕಳಶಗಳಿವೆ. ಮಧ್ಯೆ ಮೂರು ಕುದುರೆಗಳಿರುತ್ತವೆ. ಮಧ್ಯದ ಕುದುರೆಯ ಮೇಲೆ ಹಿರಿಯಮ್ಮನ ವಿಗ್ರಹವಿರುತ್ತದೆ. ದೇವಿಗೆ ನಾಲ್ಕು ಕೈಗಳಿರುತ್ತವೆ. ಎಡಗೈಲಿ ಬಟ್ಟಲು, ಬಲಗೈಲಿ ಕತ್ತಿ–ಗುರಾಣಿ ಇರುತ್ತೆ. ತಳಿಗೆ ವಿವಿಧ ಬಣ್ಣದ ಸೀರೆಗಳನ್ನು ಕಟ್ಟಿ ಹೂವಿನಿಂದ ಅಲಂಕರಿಸುತ್ತಾರೆ. ಪೂಜೆಯನ್ನು ತಮ್ಮ ಊರಿನಲ್ಲಷ್ಟೇ ಅಲ್ಲ ಇತರ ಊರುಗಳಲ್ಲೂ ಮೆರೆಸುತ್ತಾರೆ.

ಶ್ರೀ ರಾಮು ಕಲಾ ತಂಡವನ್ನು ಕಟ್ಟಿದ್ದಾರೆ. ಪೂಜಾಕುಣಿತ, ಕೋಲಾಟ, ಒನಕೆ ಕುಣಿತದಲ್ಲಿ ತರಬೇತಿ ನೀಡುತ್ತಿದ್ದಾರೆ. ಗುರುವಾಗಿ ಹನ್ನೆರಡು ಜನ ಶಿಷ್ಯರಿಗೆ ತರಬೇತಿ ನೀಡಿದ್ದಾರೆ.

ಪ್ರದರ್ಶನಗಳು: 1. ಆತ್ಮಲಿಂಗೇಶ್ವರ ಕ್ಷೇತ್ರ 2. ಮೈಸೂರು ದಸರಾದಲ್ಲಿ ಮೂರು ಸಾರಿ ಭಾಗವಹಿಸಿ ಪ್ರದರ್ಶಿಸಿದ್ದಾರೆ. 3. ವಸ್ತುಪ್ರದರ್ಶನ ಮೈಸೂರು 4. ಬನ್ನಿ ಮಂಟಪ ಮೈಸೂರು 5. ಕನ್ನಡ ರಾಜ್ಯೋತ್ಸವ ದೆಹಲಿ 6. ದಂಡಿಯಾತ್ರೆ ಕಾರ್ಯಕ್ರಮ–ಸೂರತ್ 7. ರಾಜ್ಯ ಮಟ್ಟದ ಯುವ ಮೇಳ ಶಿವಮೊಗ್ಗ 8. 2004ರಲ್ಲಿ ರಾಷ್ಟ್ರೀಯ ಯುವ ಮೇಳ ಜೆಮ್‌ಷೆಡ್‌ಪುರ 9. ಕೃಷಿಮೇಳ–ಜಿ.ಕೆ.ವಿ.ಕೆ. ಬೆಂಗಳೂರು.

ಇಂಡುವಾಳದ ಎಸ್.ಎಸ್. ಸಿದ್ದೇಗೌಡರಿಂದ ಕೋಲಾಟವನ್ನು ಕಲಿತಿದ್ದಾರೆ. ಶಂಕರ್ ಅವರು ತಮಟೆಯನ್ನು ಬಾರಿಸಬಲ್ಲರು. ತಮಟೆಯನ್ನು ಕನ್ನಲಿಯ ಹರಿಜನರ ಚನ್ನಯ್ಯನವರಿಂದ ಕಲಿತಿದ್ದಾರೆ. ಇಪ್ಪತ್ತೈದನೆಯ ವಯಸ್ಸಿನಲ್ಲಿ ಆರಂಭಿಸಿದ ಕಲಾಸೇವೆಯನ್ನು ಮೂವತ್ತು ವರ್ಷಗಳಿಂದ ನಿರಂತರವಾಗಿ ಸಲ್ಲಿಸುತ್ತಿದ್ದಾರೆ.

**ಪ್ರಶಸ್ತಿಗಳು :** 1. ಮಾಜಿ ಶಾಸಕಿ ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡರಿಂದ ಇಂಡುವಾಳಿನಲ್ಲಿ ಜಿಲ್ಲಾ ಪ್ರಶಸ್ತಿ 2. ಇಂಡುವಾಳಿನಲ್ಲಿ ಸನ್ಮಾನ

3. 24.9.2009ರ ರೈತ ದಸರಾ ಕಾರ್ಯಕ್ರಮದಲ್ಲಿ ಮೈಸೂರಿನಲ್ಲಿ ಇವರ ತಂಡದ ಹನ್ನೆರಡು ಮಂದಿ ಪೂಜೆಕುಣಿತ ನಡೆಸಿಕೊಟ್ಟಿದ್ದಾರೆ.

ಕೃಷಿಕರಾಗಿ ಶಂಕರ್ ಅವರ ಸಾಧನೆ ಗಮನಾರ್ಹವಾದುದು. ಒಂದೂವರೆ ಎಕರೆ ಜಮೀನಿದೆ. ಒಂದು ಕಣ್ಣಿನ ಕಬ್ಬು ನಾಟಿ ಮಾಡಿ ಉತ್ತಮ ಇಳುವರಿ ಪಡೆದು ಕೃಷಿ ವಿಶ್ವವಿದ್ಯಾಲಯದಿಂದ ಪ್ರಶಸ್ತಿ ಪಡೆದಿದ್ದಾರೆ.

ವಿನಯ ಶೀಲರಾದ ಶ್ರೀ ಶಂಕರ್ ಅವರು ತಮ್ಮ ಕಲಾಸೇವೆಯನ್ನು ಮುಂದುವರೆಸಿ ಉತ್ತಮ ಸಾಧನೆಯನ್ನು ತಕ್ಕಫಲವನ್ನು ಪಡೆಯಲಿ.

❖



## ಅರ್ಚಕ ಶ್ರೀ ಗಂಗಾಧರ (ವೀರಭದ್ರನ ಕುಣಿತ)

ಮಂಡ್ಯ ತಾಲ್ಲೂಕು ದುದ್ದ ಹೋಬಳಿಯ ಹುಳ್ಳೇನಹಳ್ಳಿಯಿಂದ ಮುಂದೆ ಹೋದರೆ ಹೊನ್ನೆಮಡು ಊರು ಸಿಗುತ್ತದೆ. ಅರ್ಚಕ ಶ್ರೀ ಗಂಗಾಧರ ಅವರು ಹುಳ್ಳೇನಹಳ್ಳಿ ಮತ್ತು ಹೊನ್ನೆಮಡುವಿನಲ್ಲಿರುವ ವೀರಭದ್ರನ ದೇವಾಲಯದ ಅರ್ಚಕರು. ಎರಡು ಊರುಗಳಲ್ಲಿಯೂ ಇವರಿಗೆ ಮನೆ ಇದೆ.

ಮಂಡ್ಯದಿಂದ ಹೊಳಲು-ಶಿವಳ್ಳಿ-ಆಡ್ಯ ಅನಂತರ ಹುಳ್ಳೇನಹಳ್ಳಿಗೆ ಹದಿನೈದು ಕಿ.ಮೀ ಆಗುತ್ತದೆ. ಹುಳ್ಳೇನಹಳ್ಳಿಯ ಅನಂತರ ಹೊನ್ನೆಮಡು.

'ಹೊನ್ನೆಮಡು' ಎಂಬ ಹೆಸರಿನ ಬಗೆಗೆ ಕುತೂಹಲಗೊಂಡು "ನಿಮ್ಮ ಊರಿಗೆ ಹೊನ್ನೆಮಡು' ಅಂಥ ಯಾಕೆ ಕರಿತರೆ?" ಎಂದುದಕ್ಕೆ ಗಂಗಣ್ಣನವರು ಹೇಳಿದರು: 'ಮೈಸೂರು ಅರಸು ಕಡೆಯ ಜನ ಇಲ್ಲಿಗೆ ಬಂದು ತಂಗಿದ ಸ್ಥಳ ಇದು. ಭುಜಂಗರಾಯ ಎಂಬ ಪಾಳೆಯಗಾರ ಪಾಂಡವಪುರ ತಾಲ್ಲೂಕಿನ ಹೊಸಕೋಟೆ ಮತ್ತು ಹೊನ್ನೆಮಡು ಇವೆರಡಕ್ಕೂ ಪಾಳೆಗಾರನಾಗಿದ್ದ. ಆ ಕಾಲದಲ್ಲಿ ಲೋಕಪಾವನಿಯಲ್ಲಿ ಮಡು ಇತ್ತು, ಇಲ್ಲಿ ಚಿನ್ನದ ಕಾಸು ಸಿಗುತ್ತಿತ್ತಂತೆ, ಹೊನ್ನು ಸಿಗುತ್ತಿದ್ದುದರಿಂದ ಆ ಸ್ಥಳವನ್ನು ಹೊನ್ನಿನ ಮಡು ಹೊನ್ನೆಮಡು ಎಂದು ಕರೆದರು. ಈ ಹೆಸರಿನಿಂದಲೇ ಇಂದು ಊರು ಪ್ರಸಿದ್ಧವಾಗಿದೆ.

1949ರಲ್ಲಿ (61 ವರ್ಷಗಳಾಗಿವೆ) ದಿವಂಗತ ನಂಜಪ್ಪ ಮತ್ತು ಪುಟ್ಟಮ್ಮಣ್ಣಮ್ಮ ದಂಪತಿಗಳಿಗೆ ಅರ್ಚಕ ಗಂಗಾಧರ ಜನಿಸಿದರು. ಶ್ರೀಮತಿ ವೀಣಾ ಇವರ ಮಡದಿ, ಇವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ, 25 ವರ್ಷದ ಮಗ ರುದ್ರೇಶ್ವರಯ್ಯ ಅರ್ಚಕ ವೃತ್ತಿಯೊಡನೆ ವೀರಭದ್ರನ ಕುಣಿತವನ್ನು ಮಾಡುತ್ತಾನೆ. ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಂಗ ಮಾಡಿದ್ದಾನೆ. 18 ವರ್ಷದ ಮಗ ಪಿ.ಯು.ಸಿ ವ್ಯಾಸಂಗ ಮಾಡುತ್ತಿದ್ದಾನೆ.

ಗಂಗಾಧರ ಅವರ ಅಣ್ಣನಿಗೆ ಎರಡು ಗಂಡು, ಎರಡು ಹೆಣ್ಣು ಮಕ್ಕಳಿದ್ದಾರೆ. ಒಬ್ಬಳನ್ನು ಟಿ.ನರಸಿಪುರ ತಾಲ್ಲೂಕಿನ ಆಲದೂರಿಗೆ ಮತ್ತೊಬ್ಬಳನ್ನು ಮಳವಳ್ಳಿ ತಾಲ್ಲೂಕಿನ ಚಿಕ್ಕಬಾಗಿಲಿಗೆ ಕೊಟ್ಟು ಗಂಗಾಧರ ಅವರೇ ವಿವಾಹ ಮಾಡಿದ್ದಾರೆ.

ಗಂಗಾಧರ ಅವರು ಹಳೆಬೂದನೂರಿನ ಅಜ್ಜಿ ಮನೆಯಲ್ಲಿ ಪ್ರಾಥಮಿಕ ಶಿಕ್ಷಣ ಮಾಡಿ, ಹುಳ್ಳೇನಹಳ್ಳಿಯಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ ಮಂಡ್ಯದಲ್ಲಿ ಪಿ.ಯು.ಸಿ.ಗೆ ಸೇರಿ ವ್ಯಾಸಂಗವನ್ನು ಪೂರ್ಣಗೊಳಿಸಲಿಲ್ಲ.

ನಾಟಕ ಕಲೆಯಲ್ಲೂ ಗಂಗಾಧರ ಪಳಗಿದ್ದಾರೆ. ದಕ್ಷಯಜ್ಞ ನಾಟಕದಲ್ಲಿ ಬ್ರಹ್ಮ, ಭೃಗುಮಹರ್ಷಿ ಪಾತ್ರವನ್ನು ಶ್ರೀ ಲಕ್ಷ್ಮೀಜನಾರ್ಧನ ಸ್ವಾಮಿ ಥಿಯೇಟರಿನಲ್ಲಿ ಮಾಡಿದ್ದಾರೆ. ಶನಿದೇವರ ನಾಟಕದಲ್ಲಿ ಸೂತ್ರಧಾರಿ, ದಾನಶೂರ ಕರ್ಣ ನಾಟಕದಲ್ಲಿ ಪರಶುರಾಮನ ಪಾತ್ರ ಮಾಡಿದ್ದಾರೆ.

ಹದಿನಾರನೇ ವಯಸ್ಸಿನಲ್ಲಿಯೇ ವೀರಭದ್ರನ ವೇಷ ಹಾಕಿದರು. ವೀರಭದ್ರನ ಕುಣಿತವನ್ನು ತಂದೆಯವರು ಮಾಡುತ್ತಿದ್ದರು. ಮದುವೆ, ಗೃಹಪ್ರವೇಶ, ದೇವರ ಉತ್ಸವಗಳಲ್ಲಿ.

ಕಬ್ಬಡಿ ಟೂರ್ನಿಮೆಂಟ್ ಹುಳ್ಳೇನಹಳ್ಳಿಯಲ್ಲಿ ನಡೆಯುತ್ತಿರುವಾಗ ಛೇರ್ಮನ್ ಎಚ್.ಎನ್. ನಾಗರಾಜು ಅಧ್ಯಕ್ಷತೆ ವಹಿಸಿದ್ದರು. ತಮ್ಮಡಿಯಾದ ಗಂಗಾಧರ ಒಬ್ಬ ಗೌಡನ ಹುಡುಗನ ಕಾಲು ಹಿಡಿದು ಸೋಲಿಸಿದರು. ಆಗ ಛೇರ್ಮನ್ 'ನೀನು ಈ ಆಟ ಆಡಬಾರದು. ನಿಮ್ಮ ತಂದೆ ವೀರಭದ್ರನ ವೇಷ ಹಾಕಿದಾಗ ನಾವು ಅವರು ದೇವರೆಂದು ತಿಳಿದು ಅವರ ಪದಕ್ಕೆ ನಮಸ್ಕಾರ ಮಾಡುತ್ತೇವೆ. ನೀನು ಮತ್ತೊಬ್ಬರ ಕಾಲು ಹಿಡಿಯುವುದೆ, ಬೇಡ' ಎಂದು ನೊಂದು ನುಡಿದರಲ್ಲದೆ ತಮಟೆಯವರಿಗೆ ಹೇಳಿ ವೀರಭದ್ರನ ಕುಣಿತವನ್ನು ತಂದೆ ನಂಜಪ್ಪನವರಿಂದಲೇ ಕಲಿಸಿದರು. ಆಗ ನನಗೆ 16ವರ್ಷ' ಎಂದರು.

ಗಂಗಾಧರ ಅವರು ವೀರಭದ್ರನ ವೇಷ ಹಾಕಿ ಮದುವೆಗಳಲ್ಲಿ ಕುಣಿದಾಗ ವಧು-ವರನ ಕಡೆಯವರು ತಲಾ ಐದು ರೂ ಕೊಡಲಾರಂಭಿಸಿದರು. ಗ್ರಾಮೀಣ

ಪ್ರದೇಶಗಳಲ್ಲಿ ಪ್ರದರ್ಶನ ನೀಡುತ್ತಾ ಒಮ್ಮೆ ಹಳವಾಡಿ, ತಗ್ಗಹಳ್ಳಿಗಳಲ್ಲೂ ಪ್ರದರ್ಶನ ನೀಡಿದಾಗ ಅಲ್ಲಿಗೆ ಆಗಮಿಸಿದ ಕೆ.ವಿ.ಶಂಕರಗೌಡರು ಇವರ ಕುಣಿತವನ್ನು ನೋಡಿ ಮೆಚ್ಚಿ 25ರೂ ಬಹುಮಾನ ನೀಡಿ 'ಮಂಡ್ಯಜಿಲ್ಲೆಗೆ ಒಳ್ಳೆಯ ಕಲಾವಿದನಾಗುತ್ತೀಯಾ' ಎಂದುದನ್ನು ಇಂದು ಹೆಮ್ಮೆಯಿಂದ ಹೇಳುತ್ತಾರೆ. ಪಾಂಡವಪುರದಲ್ಲಿ ಜೀಶಂಪ ಅವರು ಇವರ ಕುಣಿತವನ್ನು ನೋಡಿ ಮೆಚ್ಚಿದರಂತೆ.

**ಗುರುವಾಗಿ ತರಬೇತಿ:** 1. ಮಂಡ್ಯ ಪಿ.ಇ.ಎಸ್. ಕಾಲೇಜು ವಿದ್ಯಾರ್ಥಿಗಳಿಗೆ 2. ಕನಕಪುರ ಕರಿಯಪ್ಪನವರ ಕಾಲೇಜು 3. ಹಾಸನದ ವಿಜಯ ಇಂಗ್ಲಿಷ್ ಸ್ಕೂಲ್ 4. ರಾಮನಗರದ ಜಾನಪದ ಲೋಕ 5. ವಿ.ಸಿ ಫಾರಂ ಕೃಷಿ ವಿಶ್ವವಿದ್ಯಾಲಯ 6. ಮಂಡ್ಯ, ಕೋಲಾರ, ಬೂದನೂರು, ಕರಟೆಗೆರೆ ಮೊದಲಾದ ಕಡೆ ವಿದ್ಯಾರ್ಥಿಗಳಿಗೂ ಯುವ ಸಂಘದ ಯುವಕರಿಗೂ ತರಬೇತಿ ನೀಡಿರುವುದಾಗಿ ಹೇಳುತ್ತಾರೆ.

**ಪ್ರದರ್ಶನ:** 1. ಮಂಡ್ಯ ಕನ್ನಡ ರಾಜ್ಯೋತ್ಸವ 2. ಮಂಡ್ಯದಲ್ಲಿ ನಡೆಯುವ ಬಹುಪಾಲು ಕಾರ್ಯಕ್ರಮಗಳಲ್ಲಿ 3. ಹಾಸನ 4. ಅರಸೀಕೆರೆ 5. ತಿಪಟೂರು 6. ಚನ್ನರಾಯಪಟ್ಟಣ 7. ಚಿಕ್ಕಮಗಳೂರು 8. ಮೈಸೂರು 9. ಚಾಮರಾಜನಗರ 10. ಸಾಗರ 11. ಬೆಂಗಳೂರು ಮೊದಲಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರದರ್ಶನ ನೀಡಿ ಜನರಿಂದ ಮೆಚ್ಚುಗೆ ಗಳಿಸಿದ್ದಾರೆ.

**ಹೊರರಾಜ್ಯದಲ್ಲಿ ಪ್ರದರ್ಶನ:** ಗುಜರಾತಿನ ದಂಡಿಯಾತ್ರೆ, ಅಮೃತಸರ ಪಂಜಾಬ್, ತಂಜಾವೂರ್, ಕೇರಳ, ತಮಿಳುನಾಡು ಇಲ್ಲಿ ಪ್ರದರ್ಶನ ನೀಡಿದ್ದಾರೆ.

4ನೇ ರಾಷ್ಟ್ರೀಯ ಕ್ರೀಡಾ ಕೂಟ ಬೆಂಗಳೂರು, ಮಡಿಕೇರಿ, ಅರಕುಲಗೂಡು, ಚಿತ್ರದುರ್ಗ, ರಾಯಚೂರುಗಳಲ್ಲಿ ದಸರಾ ಕಾರ್ಯಕ್ರಮದಲ್ಲಿ, ಬಸವ ಜಯಂತಿಯಂದು ಕೆಲವು ಜಿಲ್ಲೆಗಳಲ್ಲಿ, ಮಡಿವಾಳ ಮಾಚಿದೇವರ ಜಯಂತಿಯಲ್ಲೂ ಪ್ರದರ್ಶನ ನೀಡಿದ್ದಾರಂತೆ.

ಮುದಗಂದೂರಿನಲ್ಲಿ ವೀರಮಕ್ಕಳ ಕುಣಿತ ಕಲಿಸಿರುವುದಾಗಿ ಹೇಳುತ್ತಾರೆ.

**ಸನ್ಮಾನ:** 1996 ಮಂಡ್ಯ ಜಿಲ್ಲಾ ಸನ್ಮಾನ, ಮೈಸೂರಿನ ಸಂದೇಶ ನಾಗರಾಜು ಅವರಿಂದ 'ಕಲಾರತ್ನ'ಪ್ರಶಸ್ತಿ, ರೇಣುಕಾದೇವಿ ಕರಗೋತ್ಸವದಲ್ಲಿ 5000ರೂ ನಗದು 'ಕಲಾರತ್ನ' ಬಿರುದುನೀಡಿದ್ದಾರೆ. 2500ರೂಗಳೊಡನೆ ಜಾನಪದ ಲೋಕದಲ್ಲಿ ಎಚ್.ಎಲ್.ನಾಗೇಗೌಡರು ಸನ್ಮಾನಿಸಿದ್ದಾರೆ. ಮೂಡ ಬಿದಿರೆಯಲ್ಲಿ 10000ರೂಗಳೊಡನೆ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿದೆ. ಮಂಡ್ಯ ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನಿಸಿದೆ.

**ಜಮೀನು :** ದೇವಸ್ಥಾನದ ಇನಾಮು ಎರಡು ಎಕರೆ ತರಿ ಜಮೀನಿದೆ, 60ವರ್ಷಗಳಾಗಿರುವುದರಿಂದ ದುಡಿಯಲಾಗದು.

**ಜನಪದ ಕಲಾವಸ್ತುಗಳು :** ಶ್ರೀ ಗಂಗಾಧರ ಅವರ ಬಳಿ ಪೂಜೆ 2, ತಮಟೆ, ನಗಾರಿ 10, ಪಟ 10, ಗಾರುಡಿಗೊಂಬೆ 10, ವೀರಭದ್ರನ ಕುಣಿತಕ್ಕೆ 5 ಜನರಿಗೆ ಬೇಕಾಗುವಷ್ಟು ವಸ್ತ್ರಾಭರಣಗಳನ್ನು ಇವೆಯಂತೆ.

ವೀರಭದ್ರನ ಕುಣಿತದಲ್ಲಿ ಮಂಡ್ಯಜಿಲ್ಲೆಯ ಗಮನಾರ್ಹ ಕಲಾವಿದ ಶ್ರೀ ಗಂಗಾಧರ ಅವರು.

❖



## ಶ್ರೀ ರಾಮಯ್ಯ (ರಂಗದ ಕುಣಿತ, ನಂದಿಧ್ವಜ ಕುಣಿತ)

ಮಂಡ್ಯ ತಾಲ್ಲೂಕು ಕೀಲಾರದ ದಿವಂಗತ ಕುಂಡು ಬೋರೇಗೌಡರ ಮಗನಾದ ಶ್ರೀ ರಾಮಯ್ಯನವರಿಗೆ ಈಗ ಅರವತ್ತ ಏಳು ವರ್ಷ ವಯಸ್ಸಾಗಿದೆ. ನಾಲ್ಕನೆಯ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ.

ರಾಮಯ್ಯನವರ ಮಡದಿ ಶ್ರೀಮತಿ ಗೌರಮ್ಮ, ಇವರಿಗೆ ಅರವತ್ತ ನಾಲ್ಕು ವರ್ಷಗಳಾಗಿವೆ. ಇವರು ಒಕ್ಕಲಿಗರು. ಇವರಿಗೆ ನಾಲ್ಕು ಹೆಣ್ಣು, ಒಂದು ಗಂಡು ಇದೆ. ಇವರೆಲ್ಲರಿಗೂ ವಿವಾಹವಾಗಿದೆ. ಶ್ರೀ ರಾಮಯ್ಯನವರಿಗೆ ಎಂಟು ಜನ ಮೊಮ್ಮಕ್ಕಳಿದ್ದಾರೆ.

**ಕಲೆ :** ರಂಗದ ಕುಣಿತ, ನಂದಿಧ್ವಜದ ಕುಣಿತದಲ್ಲಿ ನೈಪುಣ್ಯ ಪಡೆದಿದ್ದಾರೆ. ರಾಮಯ್ಯನವರು ರಂಗಗೀತೆ, ಜನಪದ ಗೀತೆ, ರಂಗದ ಕುಣಿತದ ಹಾಡುಗಳನ್ನು ಹಾಡುತ್ತಾರೆ. ಗ್ರಾಮ ದೇವತೆಗಳಾದ ಮಾರಮ್ಮ, ವೀರಭದ್ರಸ್ವಾಮಿ, ಮದ್ದೂರಮ್ಮನ ಜನಪದ ಗೀತೆಗಳನ್ನು ಹಾಡುತ್ತಾರೆ.

ಮಾರಮ್ಮನ ಪೂಜೆಯನ್ನು ಹೊತ್ತು ಮೆರೆಸುತ್ತಾರೆ. ಇವರಿಗೆ ಮಾಸಾಶನ ಬರುತ್ತಿದೆ.

❖



## ಶ್ರೀ ಜಿ.ಸಿ.ದೊಡ್ಡಹನುಮೇಗೌಡ (ಭಾಗವಂತಿಕೆ ಮೇಳ)

ಮಂಡ್ಯ ತಾಲ್ಲೂಕು ಗೊರವಾಲೆಯ ಒಕ್ಕಲಿಗರ ಚಿಕ್ಕಹನುಮೇಗೌಡರ ಮಗ ಶ್ರೀ ಜಿ.ಸಿ. ದೊಡ್ಡಹನುಮೇಗೌಡರಿಗೆ ಅರವತ್ತ ನಾಲ್ಕು ವರ್ಷಗಳಾಗಿವೆ. ಶ್ರೀಮತಿ ಜಯಮ್ಮ ಇವರ ಮಡದಿ, ಇವರಿಗೆ ಒಂದು ಗಂಡು, ಒಬ್ಬ ಮಗಳಿದ್ದಾಳೆ. ಮಗ 7ನೇ ತರಗತಿ, ಮಗಳು 6ನೇ ತರಗತಿ ಓದಿದ್ದು, ಇಬ್ಬರೂ ವಿವಾಹಿತರು.

ಹದಿನೈದು ಹದಿನಾರು ಜನ ಸೇರಿ ಭಾಗವಂತಿಕೆ ಮೇಳ ನಡೆಸುತ್ತಾರೆ. ಗೊರವಾಲೆಯಲ್ಲಿ ದೇವರ ಉತ್ಸವಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಭಾಗವಂತಿಕೆಯಲ್ಲಿ ಮುಮ್ಮೇಳ ಹಾಡುತ್ತಾರೆ.

ಆಂಜನೇಯ ಉತ್ಸವದಲ್ಲಿ ಭಾಗವಂತಿಕೆ ಮೇಳ ನಡೆಸಿದ್ದಾರಂತೆ. ತತ್ತ್ವಪದಗಳನ್ನೂ ಹಾಡುತ್ತೇನೆ ಎನ್ನುತ್ತಾರೆ.

❖



## ಶ್ರೀ ಶೀನಪ್ಪ (ವೀರಮಕ್ಕಳ ಕುಣಿತ)

ಮಂಡ್ಯ ತಾಲ್ಲೂಕು ದುದ್ದ ಹೋಬಳಿಯ ಮುದಗಂದೂರು ಶ್ರೀ ಪುಟ್ಟವೀರ ಶೆಟ್ಟಿ ಮತ್ತು ನಿಂಗಮ್ಮ ದಂಪತಿಗಳ ಪ್ರೀತಿಯ ಪುತ್ರ. ಶೀನಪ್ಪನವರು ಈಗ ಎಪ್ಪತ್ತರ ಗಡಿಯಲ್ಲಿದ್ದಾರೆ. ವಯೋವೃದ್ಧರಾದ ಶೀನಪ್ಪನವರಿಗೆ ಜನಪದ ಕಲೆಗಳ ಬಗೆಗೆ ಹೆಚ್ಚು ಅಭಿಮಾನವಿದೆ. ಮುದಗಂದೂರು ಗ್ರಾಮ ದೇವತೆ ಹುಚ್ಚಮ್ಮ ಇವರ ಮನೆದೇವತೆ. ಇವರ ಪೂರ್ವಿಕರಿಂದ ಬಂದ ವೀರಮಕ್ಕಳ ಕುಣಿತ, ಸೋಮನ ಕುಣಿತ, ಗಾರುಡಿಗೊಂಬೆ, ತೆಂಗಿನಕಾಯಿ ಪವಾಡ ಮೊದಲಾದ ಜನಪದ ಕಲೆಗಳನ್ನು ಕರಗತಮಾಡಿಕೊಂಡಿದ್ದಾರೆ. ಶ್ರೀ ಶೀನಪ್ಪನವರು ತಮ್ಮ ಬಾಲ್ಯದಲ್ಲಿಯೇ ಈ ಕಲೆಗಳ ಬಗೆಗೆ ಕುತೂಹಲಗೊಂಡರು. 15-16ನೇ ವಯಸ್ಸಿನಲ್ಲಿ ಕಲೆಗಳನ್ನು ಕಲಿಯುವ ಹಂಬಲ ವ್ಯಕ್ತಪಡಿಸಿದರು.

ಶೀನಪ್ಪನವರ ತಂದೆ ಶ್ರೀ ಪುಟ್ಟವೀರ ಶೆಟ್ಟರೇ ಮಗನಿಗೆ ಗುರುವಾದರು. ವೀರಮಕ್ಕಳ ಕುಣಿತ, ಸೋಮನ ಕುಣಿತ, ತೆಂಗಿನಕಾಯಿ ಪವಾಡಗಳನ್ನು ಒಂದೊಂದಾಗಿ ಕಲಿಸಿದರು. ಮಗನಿಗೆ ಮಾರ್ಗದರ್ಶಿಯೂ ಹಿತೈಷಿಯೂ ಆಗಿ ಪ್ರೋತ್ಸಾಹಿಸಿದರು.

ಶೀನಪನವರು ಗ್ರಾಮೀಣ ಪ್ರದೇಶದ ಹಬ್ಬ ಹರಿದಿನಗಳಲ್ಲಿ ಕರೆದ ಕಡೆ ಹೋಗಿ ಪ್ರದರ್ಶನ ನೀಡಿದರು.

ಈ ಜನಪದ ಕಲೆಗಳು ನಾಶವಾಗಬಾರದೆಂದು ಮುದಗಂದೂರು ಮತ್ತು ಸುತ್ತಮುತ್ತಲ ಹಳ್ಳಿಯ ಮಕ್ಕಳಿಗೆ, ಯುವಕರಿಗೆ ತಮ್ಮ ಕಲೆಗಳನ್ನು ಕಲಿಸುತ್ತಿದ್ದಾರೆ. ಸೀನಪ್ಪನವರು ಕಟ್ಟಿದ ವೀರಮಕ್ಕಳ ಕುಣಿತದ ತಂಡ ಪ್ರಸಿದ್ಧಿ ಪಡೆದಿದೆ. 20 ಮಂದಿಯ ತಂಡದ ನಿರ್ದೇಶಕರಾಗಿ ಇಂದೂ ಕಲಾಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಪ್ರದರ್ಶನ: 1975ರಲ್ಲಿ ಮತ್ತು 1986ರಲ್ಲಿ ದಸರಾ ಕಾರ್ಯಕ್ರಮ, 1985 ಮಂಡ್ಯ ಜನಪದ ಕಲಾಮೇಳ ಪುರಭವನ, 20–3–1979, ಬೆಂಗಳೂರು ರವೀಂದ್ರ ಕಲಾ ಕ್ಷೇತ್ರ, 1979ರಲ್ಲಿ ಕಂಠೀರವ ಕ್ರೀಡಾಂಗಣ, ಮೇಲುಕೋಟೆ ವೈರಮುಡಿ ಉತ್ಸವ, ಹಲಸಹಳ್ಳಿ ಗವಿ ಮಠ, ಗಣೇಶಉತ್ಸವ, ದೇವರ ಉತ್ಸವ, 1981ರಲ್ಲಿ ಬೆಂಗಳೂರು ಆಕಾಶವಾಣಿ, ನವರಾತ್ರಿ ಸಂದರ್ಭಗಳಲ್ಲಿ 1971 ಕರ್ನಾಟಕ ಜನಪದ ಕಲಾಮೇಳ ಬೆಂಗಳೂರು 1971 ಪ್ರದರ್ಶನ ನೀಡುತ್ತಿದ್ದಾರೆ.

ಸನ್ಮಾನ: ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶ ಮತ್ತು ಕಲಾ ಪ್ರದರ್ಶನ 1999ರಲ್ಲಿ ಹಿರಿಯ ಜನಪದ ಕಲಾವಿದರಾದ ಶ್ರೀ ಶೀನಪ್ಪನವರನ್ನು ಕ.ಜಾ.ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಸನ್ಮಾನಿಸಿದೆ.

ಶೀನ ಶೆಟ್ಟಿಯವರು ಮಡಿವಾಳ ಜನಾಂಗಕ್ಕೆ ಸೇರಿದವರು. ಕುಲಕಸುಬಿನ ಜತೆಗೆ ಜನಪದ ಕಲೆಗಳನ್ನು ಕರಗತಮಾಡಿಕೊಂಡಿದ್ದಾರೆ. ಒಂದೂವರೆ ಎಕರೆ ಖುಷ್ಕಿ ಜಮೀನಿದ್ದು, ಕೃಷಿಕರೂ ಆಗಿದ್ದಾರೆ. ಇವರಿಗೆ ಇದ್ದ ಇಬ್ಬರು ಗಂಡು ಮಕ್ಕಳಲ್ಲಿ ಹಿರಿಯ ಮಗ ತೀರಿಕೊಂಡಿದ್ದಾರೆ. ಕಿರಿಯ ಮಗ ತಂದೆಯ ಜನಪದ ಕಲೆಗಳನ್ನು ತಂದೆಯಿಂದಲೆ ಕಲಿತು ತಂದೆಯೊಡನೆ ಪ್ರದರ್ಶನ ಮಾಡುತ್ತಾ, ಕೃಷಿಯಲ್ಲೂ ಸಹಕರಿಸುತ್ತಾನೆ. ಶ್ರೀ ಶೀನ ಶೆಟ್ಟರಿಗೆ 2008ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ದೊರಕಿದೆ.

❖



## ಶ್ರೀ ಎಚ್.ಎಸ್. ಕೆಂಪಯ್ಯ (ರಂಗದ ಕುಣಿತ)

ಮಂಡ್ಯ ತಾಲ್ಲೂಕು ಕೆರಗೋಡು ಹೋಬಳಿಯ ಬಿ.ಹೊಸೂರು ಗ್ರಾಮದ ದಿವಂಗತ ಶಂಭೂವಯ್ಯನವರ ಮಗ ಎಚ್.ಎಸ್.ಕೆಂಪಯ್ಯ ಅರವತ್ತೆಂಟು ವರ್ಷಗಳಾಗಿರುವ ರಂಗದ ಕುಣಿತದ ಹಿರಿಯ ಕಲಾವಿದರು. ಮಡಿವಾಳ ಜನಾಂಗದವರು.

ಎಚ್.ಎಸ್.ಕೆಂಪಯ್ಯನವರಿಗೆ ನಾಲ್ಕು ಗಂಡು, ಎರಡು ಹೆಣ್ಣು ಮಕ್ಕಳಿದ್ದಾರೆ. ಕೆಂಪಯ್ಯನವರು ಎಲ್.ಎಸ್. ಓದಿದ್ದಾರೆ. ವಿದ್ಯೆಯ ಮಹತ್ವವನ್ನರಿತ ಇವರು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ್ದಾರೆ. 1.ಶಂಭು, ಎಸ್.ಎಸ್.ಎಲ್.ಸಿ; ಟಿಸಿಎಚ್ ಮಾಡಿಕೊಂಡು ಮಾಸ್ಟರಾಗಿದ್ದಾರೆ. 2. ಕೆಂಪಯ್ಯ ಐದನೇ ತರಗತಿ, ನಿಂಗಯ್ಯ ಮೂರನೇ ತರಗತಿ 4. ಕೃಷ್ಣಯ್ಯ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿದ್ದಾರೆ. ಮೂವರು ಸಹೋದರರೂ ಕೃಷಿ ಕಾರ್ಮಿಕರಾಗಿದ್ದಾರೆ.

ಶ್ರೀಮತಿ ಭಾಗ್ಯಮ್ಮ ಮೂರನೇ ತರಗತಿ; ಮಂಡ್ಯ ತಾಲ್ಲೂಕಿನ ಹುಳ್ಳೇನಹಳ್ಳಿಗೆ ಮತ್ತು ಶ್ರೀಮತಿ ಚಂದ್ರಕಲಾ ಎರಡನೆ ತರಗತಿ – ನಾಗಮಂಗಲದ ಗಂಗವಾಡಿಗೆ ಕೊಟ್ಟು ವಿವಾಹ ಮಾಡಿದ್ದಾರೆ. ಎಲ್ಲರೂ ಮಕ್ಕಳಂದಿಗರು.

**ಕಲೆ:** ಎಚ್. ಎಸ್. ಕೆಂಪಯ್ಯನವರಿಗೆ ಜನಪದ ಕಲೆ ಮತ್ತು ಜನಪದ ಗೀತೆಗಳಲ್ಲಿ ಬಾಲ್ಯದಿಂದಲೂ ಆಸಕ್ತರಾಗಿದ್ದು ಆಡುವುದರಲ್ಲಿ, ಹಾಡುವುದರಲ್ಲಿ ಹೇಳುವುದರಲ್ಲಿ ಕುತೂಹಲವನ್ನುಂಟು ಮಾಡುತ್ತಾರೆ.

ರಂಗದ ಕುಣಿತದಲ್ಲಿ ಹೆಸರು ಗಳಿಸಿದ್ದಾರೆ– 'ಯಾಕವ್ವ ಮಾರವ್ವ ಮೊಕವೆಲ್ಲ ಸಪ್ಪಗಿದೆ' ಎಂದು ಕೇಳುಗರ ಕಿವಿ ತೆರೆಯುವಂತೆ ಇಂಪಾಗಿ ಹಾಡುತ್ತಾ ಈಗಲೂ ಹೆಜ್ಜೆ ಹಾಕುತ್ತಾರೆ; ಮಕ್ಕಳಿಗೆ ಹೇಳಿಕೊಡುತ್ತಾರೆ.

ಸೋಬಾನೆ ಪದ, ಬೀಸೋಪದ, ಜನಪದ ಗೀತೆ, ಜನಪದ ಕಥೆ, ಉಪಕಥೆಗಳನ್ನೂ ಹೇಳುತ್ತಾರೆ.

ಇವರು ಲಕ್ಷ್ಮೀದೇವಿಯ ಗುಡ್ಡ; ಆದ್ದರಿಂದ ಲಕ್ಷ್ಮೀದೇವಿಯ ಮೇಲೆ ಮತ್ತು ಹಿರಿಯಮ್ಮ ದೇವಿಯ ಮೇಲೆ ಜನಪದ ಹಾಡುಗಳನ್ನು ಹಾಡುತ್ತಾರೆ.

❖



## ಶ್ರೀ ಚಂದ್ರಶೇಖರ ಆರಾಧ್ಯ (ಹಸೆಜಗಲಿ, ಚಿತ್ರ ಬರಹಗಾರ)

ಮಂಡ್ಯ ತಾಲ್ಲೂಕು ಗುಡಿಗೇನ ಹಳ್ಳಿಯ ಶ್ರೀ ಸಿದ್ಧಲಿಂಗ ಆರಾಧ್ಯ ಮತ್ತು ಶ್ರೀಮತಿ ಗಿರಿಜಮ್ಮನವರ ಹಿರಿಯ ಮಗನಾಗಿ 5.10.1947ರಲ್ಲಿ (63ವರ್ಷ) ಸಿ. ಎಸ್. ಆರಾಧ್ಯರು ಜನಿಸಿದರು. ಇವರ ತಂದೆ-ತಾಯಿ ಅನಕ್ಷರಸ್ಥರು. ಇವರು ಹನ್ನೆರಡು ಅಂಕಣದ ಹುಲ್ಲಿನ ಮನೆಯಲ್ಲಿ ವಾಸವಾಗಿದ್ದು, 10ಗುಂಟೆ ಜಮೀನಿನಲ್ಲಿ ವ್ಯವಸಾಯ ಮಾಡಿ ಇಬ್ಬರು ಗಂಡು ಮಕ್ಕಳನ್ನು ಸಾಕಬೇಕಾಗಿತ್ತು. ಹಿರಿಯ ಮಗ ಚಂದ್ರಶೇಖರಾಧ್ಯರನ್ನು ಎಸ್.ಎಸ್.ಎಲ್.ಸಿ ವರೆಗೆ ಓದಿಸಿದರು. ಇವರು ಅಂಚೆ ಕಛೇರಿಯಲ್ಲಿ ಪತ್ರವಿತರಕರಾಗಿ ಕೆಲಸಕ್ಕೆ ಸೇರಿದ ವರ್ಷದಲ್ಲೇ ರಾಜೀನಾಮೆ ಸಲ್ಲಿಸಿ ಶ್ರೀ ಸಿ.ಎಸ್. ವೆಂಕಟರಾಮಾಚಾರ್ ಅವರಿಂದ ಹಸೆಜಗಲಿ ಚಿತ್ರ ಬರೆಯುವುದನ್ನು ಕಲಿತರು.

1976ರಿಂದ ಶೈವ ಸಂಪ್ರದಾಯಸ್ಥರ ಮದುವೆ ಮನೆಗಳಲ್ಲಿ ಹಸೆಜಗಲಿ ಬರೆಯಲಾರಂಭಿಸಿದರು. ಹಸೆಜಗಲಿಯಲ್ಲಿ ಶಿವಲಿಂಗ, ನಂದಿವಿಗ್ರಹ, ಬಾಳೆಕಂಬ, ಗಂಡು ಹೆಣ್ಣಿನ ಬಾಸಿಂಗ, ಸೂರ್ಯ-ಚಂದ್ರನ ಚಿತ್ರಗಳನ್ನು ಗೋಡೆಯ ಮೇಲೆ ಬರೆಯುತ್ತಿದ್ದರು. ಅನಂತರ ಹಸೆಜಗಲಿಯನ್ನು ಬರೆಸಿದವರ, ಬರೆದವರ

ಹೆಸರುಗಳನ್ನು ಬರೆಯುತ್ತಿದ್ದರು. ಇವರಿಗೆ ಹತ್ತುರೂಪಾಯಿ ಸಂಭಾವನೆ, ಎಲೆ, ಅಡಿಕೆ, ಅಕ್ಕಿಪಡಿ ಕೊಡುತ್ತಿದ್ದರು.

ಜನರ ಬೇಡಿಕೆಗೆ ಅನುಸಾರವಾಗಿ ಗೋಡೆ ಮೇಲೆ ಲಕ್ಷ್ಮೀ-ಸರಸ್ವತಿ, ಶಿವ-ಪಾರ್ವತಿ-ಗಣೇಶ, ಬಸವೇಶ್ವರ, ರಾಘವೇಂದ್ರ, ಎಡೆಯೂರು ಸಿದ್ದಲಿಂಗೇಶ್ವರ ಶೋಭಿಸತೊಡಗಿದರು.

ಹಸೆಜಗಲಿ ಬರೆಸುವವರೂ ಕಡಿಮೆಯಾದರು. ಜೀವನ ನಿರ್ವಹಣೆ ಕಷ್ಟವೆನಿಸಿತು. ಆಗ ಸಿ.ಎಸ್.ಆರಾಧ್ಯರು ಜನಪದ ಕಲೆಗಳಾದ ದೊಣ್ಣೆವರಸೆ, ಬೆಂಕಿಭರಾಟೆ, ಪಟಕುಣಿತ, ವೀರಭದ್ರನ ಕುಣಿತ (ಇದಕ್ಕೆ ಅರ್ಚಕ ಗಂಗಾಧರ ಅವರು ಗುರು)ಕಲಿತಿದ್ದಾರೆ. ತಮಟೆ ಬಾರಿಸುವುದನ್ನು ಕಲಿತಿದ್ದಾರೆ.

ಕಳೆದ ಮೂವತ್ತೈದು ವರ್ಷಗಳಿಂದ ಜನಪದ ಕಲಾಸೇವೆಯಲ್ಲಿ ತೊಡಗಿದ್ದಾರೆ. ಸರಕಾರಿ ಕಾರ್ಯಕ್ರಮಗಳಲ್ಲಿ ಕೆಲವು ಅವಕಾಶಸಿಕ್ಕಿ ತಮ್ಮ ಕಲೆಗಳನ್ನು ಪ್ರದರ್ಶಿಸಿ ಪ್ರಶಸ್ತಿ ಪತ್ರಗಳನ್ನು ಪಡೆದಿರುವುದಾಗಿ ಹೇಳುತ್ತಾರೆ.

ಮಂಡ್ಯ ಜಿಲ್ಲೆಯಲ್ಲಿ 500ಕ್ಕೂ ಹೆಚ್ಚು ಹಸೆಜಗಲಿಯನ್ನು ಬರೆದಿದ್ದಾರೆ.

ಶ್ರೀ ಸಿ.ಎಸ್.ಆರಾಧ್ಯರು ಮಂಡ್ಯ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ಚಾಮರಾಜನಗರ, ಮಂಗಳೂರು, ಕೊಡಗು ಉತ್ಸವಗಳಲ್ಲಿ ತಮಟೆ ಬಾರಿಸಿದ್ದಾರೆ. ವೀರಗಾಸೆ ಸ್ತಬ್ದಚಿತ್ರ ಪ್ರದರ್ಶನ ನೀಡಿದ್ದಾರೆ. ಸರಕಾರದ ಸೂಕ್ತ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಿದ್ದಾರೆ.

❖



## ಶ್ರೀ ಬೆಟ್ಟಯ್ಯ (ತಮಟೆ)

ಮಂಡ್ಯ ತಾಲ್ಲೂಕು ಇಂಡುವಾಳು ಗ್ರಾಮದ ಶ್ರೀ ಸಿದ್ಧವೀರಯ್ಯನವರ ಮಗ ಶ್ರೀ ಬೆಟ್ಟಯ್ಯ ಅವರು ಅಕ್ಷರಸ್ಥರು, ಹರಿಜನರು, ಐವತ್ತೆಂಟು ವರ್ಷಗಳಾಗಿವೆ.

ಶ್ರೀ ಬೆಟ್ಟಯ್ಯನವರಿಗೆ ತಮಟೆ ವಾದನದಲ್ಲಿ ಇಪ್ಪತ್ತೆಂಟು ವರ್ಷಗಳ ಅನುಭವವಿದೆ. ಇವರ ಮಡದಿ ಶಿವಮ್ಮ, ವಯಸ್ಸು ನಲವತ್ತಾರು, ಅವಿದ್ಯಾವಂತೆ. ಈ ದಂಪತಿಗಳಿಗೆ ಎರಡು ಗಂಡು ಮಕ್ಕಳು, ಮಗಳೊಬ್ಬಳಿದ್ದಾಳೆ. 1982ರಲ್ಲಿ ಜನಿಸಿದ ಮೊದಲ ಮಗನಿಗೆ 26 ವರ್ಷಗಳಾಗಿದ್ದು, ಪಿ,ಯು,ಸಿ ವರೆಗೆ ವ್ಯಾಸಂಗ ಮಾಡಿದ್ದಾನೆ. 1984ರಲ್ಲಿ ಜನಿಸಿದ ಮಗನಿಗೆ 24 ವರ್ಷಗಳಾಗಿದ್ದು ಬಿ.ಎಡ್ ಡ್ರಾಯಿಂಗ್ ಡಿಪ್ಲಮೋ ಮಾಡಿದ್ದಾನೆ. 20 ವರ್ಷದ ಮಗಳು ಬೆಂಗಳೂರಿನಲ್ಲಿ ನರ್ಸಿಂಗ್ ಟ್ರೈನಿಂಗ್ ಮಾಡಿದ್ದಾಳೆ.

ಬೆಟ್ಟಯ್ಯನವರು ನೀಡಿರುವ ತಮಟೆ ಪ್ರದರ್ಶನ ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ ಹರಿದಿನಗಳಲ್ಲಿ, 2009ರಲ್ಲಿ ಮೇಲುಕೋಟೆ ರಥ ಸಪ್ತಮಿಯಲ್ಲಿ, 2003ರಲ್ಲಿ ಮಂಡ್ಯದಲ್ಲಿ ಕನ್ನಡ ರಾಜ್ಯೋತ್ಸವದಲ್ಲಿ, 2005ರಲ್ಲಿ ಮೇಲುಕೋಟೆಯಲ್ಲಿ ನಡೆದ ಜಿಲ್ಲಾ ಜನಪದ ಕಲಾಮೇಳದಲ್ಲಿ, 2004ರ ಮೈಸೂರು ದಸರಾ ಉತ್ಸವದಲ್ಲಿ, 2003ರ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ, 2008ರಲ್ಲಿ ಹಾಸನದಲ್ಲಿ

ನಡೆದ ಹೊಯ್ಸಳ ಉತ್ಸವದಲ್ಲಿ, ದೆಹಲಿ ಕನ್ನಡ ಸಂಘದ ಕಾರ್ಯಕ್ರಮದಲ್ಲಿ ಮತ್ತು ವಾರ್ತಾ ಇಲಾಖೆ ವತಿಯಿಂದ ಸೋನಿಯಾ ಗಾಂಧಿ ಹುಟ್ಟು ಹಬ್ಬದಲ್ಲಿ – ತಮಟೆ ಬಾರಿಸುವುದರ ಮೂಲಕ ತಮ್ಮ ಪ್ರತಿಭೆಯನ್ನು ಪ್ರಕಟಿಸಿದ್ದಾರೆ.

ಬೆಟ್ಟಯ್ಯನವರಿಗೆ ಮೇಲುಕೋಟೆಯಲ್ಲಿ ಶಾಲು ಹೊದಿಸಿ ಸನ್ಮಾನಿಸಿದ್ದಾರೆ.

❖



## ಶ್ರೀ ಪುಟ್ಟಸ್ವಾಮಿ (ವೀರಗಾಸೆ)

ಶಿವಾರ ಗ್ರಾಮದ ಶರಣ ದಂಪತಿಗಳಾದ ಶ್ರೀ ದೊಡ್ಡಪುಟ್ಟಯ್ಯ ಮತ್ತು ಶ್ರೀಮತಿ ಬಸಮ್ಮನವರ ಹಿರಿಯ ಮಗ 2-3-1937ರಲ್ಲಿ ಜನಿಸಿದ ಶ್ರೀ ಪುಟ್ಟಸ್ವಾಮಿಯವರು (73 ವರ್ಷ) ವಂಶಪಾರಂಪರ್ಯವಾಗಿ ಬಂದ ಅರ್ಚಕ ವೃತ್ತಿಯನ್ನು ಕೈಗೊಂಡಿದ್ದಾರೆ.

ಶ್ರೀ ಪುಟ್ಟಯ್ಯಸ್ವಾಮಿಯವರು ತಮ್ಮ 19ನೇ ವಯಸ್ಸಿನಲ್ಲಿ ಶಿವಾರಗ್ರಾಮದ ಶ್ರೀ ಚಿಕ್ಕಲಿಂಗಯ್ಯನವರಿಂದ ವೀರಗಾಸೆ ನೃತ್ಯವನ್ನು ಅಭ್ಯಸಿಸಿದರು. ಗ್ರಾಮದ ದೇವರ ಉತ್ಸವ, ಜಾತ್ರೆಗಳಲ್ಲಿ ವೀರಗಾಸೆ ನೃತ್ಯವನ್ನು ಪ್ರದರ್ಶಿಸಿ ಜನರ ಪ್ರೀತಿಗೆ ಪಾತ್ರರಾದರು.

ಗ್ರಾಮಸ್ಥರ ಒತ್ತಾಯದ ಮೇರೆಗೆ ಶ್ರೀ ಅಂಕನಾಥೇಶ್ವರ ದೇವಾಲಯದ ಅರ್ಚಕರಾಗಿದ್ದ ಇವರು ಅನಂತರ ವೀರಭದ್ರೇಶ್ವರ, ಈಶ್ವರ ದೇವಾಲಯಗಳ ಅರ್ಚಕ ಕಾಯಕವನ್ನು ಕೈಗೊಂಡರು. ಶಿವಾರಗುಡ್ಡದ ಗಂಗಾಧರೇಶ್ವರ ಸ್ವಾಮಿಯ ಸೇವೆಯನ್ನು ಕೈಗೊಂಡರು; ಶ್ರದ್ಧೆ, ನಿಷ್ಠೆಯಿಂದ ದೇವರ ಪೂಜೆ ಮಾಡಿ ಜನರ ಮೆಚ್ಚುಗೆ ಗಳಿಸಿದರು.

ಶ್ರೀ ಪುಟ್ಟಸ್ವಾಮಿ ಅವರಿಗೆ ಗುರುಪ್ರಸಾದ್, ಶಿವಕುಮಾರ್ ಇಬ್ಬರು ಗಂಡು ಮಕ್ಕಳಿದ್ದಾರೆ, ಕೃಷಿ ಕಾರ್ಮಿಕರಾಗಿದ್ದಾರೆ. ಬಿಂದು ಮತ್ತು ಸಿಂಧು ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅಕ್ಷರಸ್ಥರು. ಎಲ್ಲ ಮಕ್ಕಳ ವಿವಾಹವನ್ನು ಸಾಲಮಾಡದೆ ಸರಳವಾಗಿ ಮಾಡಿದ್ದಾರೆ. ಪುಟ್ಟಸ್ವಾಮಿಯವರು ಸರಳ ಮತ್ತು ಪ್ರಾಮಾಣಿಕ ಜೀವನವನ್ನು ನಡೆಸುತ್ತಿರುವುದು ಮೆಚ್ಚುವಂಥದ್ದು. 1999ರಲ್ಲಿ ಸ್ವಂತ ನಿವೇಶನದಲ್ಲಿ ಮನೆಯನ್ನು ಕಟ್ಟಿದ್ದಾರೆ.

ಶ್ರೀ ಪುಟಸ್ವಾಮಿಯವರು ವೀರಭದ್ರನ ಕುಣಿತದ ಜನಪದ ಕಲಾವಿದರಾಗಿ ನಾಗಮಂಗಲ, ಮದ್ದೂರು, ಮಂಡ್ಯ, ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಪ್ರದರ್ಶನ ನೀಡಿದ್ದಾರೆ.

ಇವರು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿ ಒಳ್ಳೆಯ ನಟ ಎನ್ನಿಸಿಕೊಂಡಿದ್ದಾರೆ.

2005ರಲ್ಲಿ ತಮ್ಮ 71 ವಯಸ್ಸಿನಲ್ಲಿ ಹೃದಯಬೇನೆ ಕಾಣಿಸಿಕೊಂಡು ನಾಲ್ಕು ವರ್ಷಗಳಿಂದ ಔಷಧೋಪಚಾರಕ್ಕೂ ಹಣವಿಲ್ಲದೇ, ಜೀವನ ನಿರ್ವಹಣೆಯೂ ಕಷ್ಟವಾಗಿದೆ. ಹೃದಯ ರೋಗ, ರಕ್ತದ ಒತ್ತಡ, ಮಧುಮೇಹದಿಂದ ಇಂದು ಬಳಲುತ್ತಿದ್ದಾರೆ.

ಅಶಕ್ತ ಕಲಾವಿದರಾದ ಶ್ರೀ ಪುಟ್ಟಸ್ವಾಮಿಯವರು ಸರಕಾರದಿಂದ, ಸಂಘ ಸಂಸ್ಥೆಗಳಿಂದ ಧನ ಸಹಾಯವನ್ನು ಇಂದು ನಿರೀಕ್ಷಿಸುತ್ತಿದ್ದಾರೆ.

❖



## ಶ್ರೀ ಹೆಮ್ಮಿಗೆ ಬಸವರಾಜು (ಜನಪದ ಗೀತೆ ಗಾಯಕ)

ಶ್ರೀ ಬಸವರಾಜು ಅವರು ಶ್ರೀ ಮಾರಯ್ಯ ಮತ್ತು ಶ್ರೀಮತಿ ಬೀರಮ್ಮ ದಂಪತಿಗಳಿಗೆ ದಿನಾಂಕ 20-7-1961ರಲ್ಲಿ ಹೆಮ್ಮಿಗೆಯಲ್ಲಿ ಜನಿಸಿದ ಇವರಿಗೆ ಈಗ 49 ವರ್ಷಗಳಾಗಿವೆ. ಮಾತಾ-ಪಿತ ಇಬ್ಬರೂ ಅವಿದ್ಯಾವಂತರು, ಅವಿದ್ಯಾವಂತರ ಮಗನಾದ ಬಸವರಾಜು ಅವರು ಬಡ ಹರಿಜನ ಕುಟುಂಬದಲ್ಲಿ ಜನಿಸಿದರೂ ಓದುವ ಹಂಬಲವಿದ್ದುದರಿಂದ ಎಸ್.ಎಸ್.ಎಲ್.ಸಿ. ಮತ್ತು ಟಿಸಿಎಚ್ ಮಾಡಿ 1997ರಲ್ಲಿ ಪ್ರಥಮವಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿ ವೃತ್ತಿ ಜೀವನ ಆರಂಭಿಸಿದರು.

ಶ್ರೀ ಬಸವರಾಜು ಅವರ ವೃತ್ತಿ ಜೀವನ ಆರಂಭವಾಗುವುದಕ್ಕೆ ಮೊದಲೇ 1992ರಲ್ಲಿ ಶ್ರೀಮತಿ ಗಾಯತ್ರಿ ಅವರೊಡನೆ ಸಾಂಸಾರಿಕ ಜೀವನ ಆರಂಭಿಸಿದ್ದರು. ಇವರಿಗೆ ಮುದ್ದಾದ ಎರಡು ಹೆಣ್ಣು ಮಕ್ಕಳು, ಒಂದು ಗಂಡು ಮಗುವೂ ಇದೆ. ಮೊದಲ ಮಗಳು ಅಶ್ವಿನಿ (17ವ) ದ್ವಿತೀಯ ಪಿ.ಯು.ಸಿ; ರಜನಿ (14ವ) 9ನೇ ತರಗತಿ; ಮಗ ನವೀನ್ (11ವ) ಆರನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಮಕ್ಕಳೆಲ್ಲರಿಗೂ ಉತ್ತಮ ವಿದ್ಯಾಭ್ಯಾಸವನ್ನು ನೀಡಬೇಕೆಂಬ ಹಂಬಲ ಶ್ರೀ ಹೆಮ್ಮಿಗೆ ಬಸವರಾಜು ಅವರಿಗಿದೆ.

ಹೆಮ್ಮಿಗೆ ಬಸವರಾಜು ಅವರ ಮನೆಯು ಜನಪದ ಗೀತೆ ಗಾಯಕಿಯರ ಬೀಡಾಗಿತ್ತು. ಅಜ್ಜಿ ಶ್ರೀಮತಿ ಮಾದಮ್ಮ ಜನಪದ ಗೀತೆ ಮತ್ತು ದೇಶಭಕ್ತಿ ಗೀತೆಗಳನ್ನು ಹಾಡುತ್ತಿದ್ದರು. ತಾಯಿ ಶ್ರೀಮತಿ ಬೀರಮ್ಮ ಅವರು ಮಾದಮ್ಮ ಅವರ ಪ್ರಭಾವಕ್ಕೊಳಗಾಗಿ ಸೋಬಾನೆ ಪದ, ಜನಪದ ಗೀತೆಗಳನ್ನು ಹಾಡುತ್ತಿದ್ದರು. ಶ್ರೀ ಬಸವರಾಜು ಅವರು ಜನಪದ ಗೀತೆಗಳನ್ನು ಕೇಳುತ್ತಾ ಬೆಳೆದರು, ತಾವೂ ಹಾಡಬೇಕೆಂಬ ಆಸಕ್ತಿಯ ಸೆಲೆ ತಾಯಿ, ಅಜ್ಜಿಯರಿಂದ ಗುಪ್ತಗಾಮಿನಿಯಾಗಿ ಆನುವಂಶಿಕವಾಗಿ ಹರಿದು ಬಂದಿತು. ಶ್ರೀ ಬಸವರಾಜು ಅವರು ಎಲ್ಲೇ ಹಾಡುತ್ತಿದ್ದರು ಇವರ ಕೋಗಿಲೆಯ ಇಂಚರದ ಧ್ವನಿ ಕೇಳಿಸಿದಾಕ್ಷಣ ಕೇಳುಗರಿಗೆ ಇದು ಬಸವರಾಜು ಹಾಡುತ್ತಿರುವ ಹಾಡು ಎಂದು ಗ್ರಹಿಸುವಷ್ಟರ ಮಟ್ಟಿಗೆ ತಮ್ಮದೇ ಆದ ಛಾಪನ್ನು ಹಾಡುಗಾರಿಕೆಯಲ್ಲಿ ಮೂಡಿಸುವ ಜಿಲ್ಲೆಯ ಪ್ರತಿಭಾವಂತ ಜನಪದ ಗೀತೆಗಾಯಕರಾಗಿದ್ದಾರೆ.

ಬೆಳೆಯುವ ಪೈರನ್ನು ಮೊಳಕೆಯಲ್ಲಿ ನೋಡು ಎಂಬ ಗಾದೆ ಬಸವರಾಜುಗೆ ಅನ್ವಯಿಸುತ್ತದೆ. ಅವರು ವ್ಯಾಸಂಗ ಮಡುತ್ತಿದ್ದ ಮಾಧ್ಯಮಿಕ ಶಾಲೆಯಲ್ಲಿ ಪ್ರತಿ ಶುಕ್ರವಾರ ಸರಸ್ವತಿ ಪೂಜೆಯಂದು ಬಸವರಾಜು ಅವರು ಪ್ರಾರ್ಥನೆ ಮಾಡಲು ಗುರು ದಿವಂಗತ ಶ್ರೀ ಆರಾಧ್ಯರು ಅವಕಾಶ ಕೊಟ್ಟು ಪ್ರೋತ್ಸಾಹಿಸಿದುದನ್ನು ನಮ್ರವಾಗಿ ಬಸವರಾಜು ಸ್ಮರಿಸುತ್ತಾರೆ. ಪ್ರೌಢಶಾಲೆ ಸೇರಿದಾಗ ಸಂಗೀತ ತರಗತಿಗೆ ಸೇರಿದರು. ಶ್ರೀ ಎಂ.ಆರ್.ಸತ್ಯನಾರಾಯಣರಾವ್ ಸಂಗೀತ ಕಲಿಸಿ ಪ್ರೋತ್ಸಾಹಿಸಿದರು. ಜನಪದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವುದನ್ನು ಶಾರೀರವನ್ನು ಉತ್ತಮಗೊಳಿಸಿಕೊಂಡರು.

ಶ್ರೀ ಹೆಮ್ಮಿಗೆ ಬಸವರಾಜು ಅವರು ಸಾರ್ವಜನಿಕವಾಗಿ ಮೊಟ್ಟ ಮೊದಲು ಹನಿಯಂಬಾಡಿಯ ಬೋರೇದೇವರು ದೇವಸ್ಥಾನದಲ್ಲಿ:

'ಮೂರು ಕಣ್ಣಿನ ಮುಗಿಲ ಬಣ್ಣದ ಮುದ್ದು ಮಾದಯ್ಯ
ನಿಮ್ಮ ನೆತ್ತಿ ಮೇಲೆ ನಾಗರ ಜಡೆಯ ನಲಿದು ಬಾರಯ್ಯ' ಎಂದು ಹಾಡಿ ಜನರ ಮೆಚ್ಚುಗೆ ಗಳಿಸಿದರು. ಇಲ್ಲಿ ಆರಂಭವಾದ ಇವರ ಗೀತೆ ಗಾಯನ ವಾಹಿನಿ ನಿರಂತರವಾಗಿ ಹರಿದು ಬರುತ್ತಿದೆ.

ಜನಪದ ಗೀತೆ ಗಾಯನದಲ್ಲಿ ಹೆಸರು ಗಳಿಸಿದ ಶ್ರೀ ಬಸವರಾಜು ಹೆಮ್ಮೆ ಪಡುವುದಕ್ಕಿಂತ ಕಲಿಯಬೇಕೆಂಬ ಪ್ರಚ್ಛನ್ನ ಬಯಕೆ ಪುಟಿದು 1999-2000ರಲ್ಲಿ ಜಾನಪದ ಲೋಕದಲ್ಲಿ ಜನಪದ ಡಿಪ್ಲೋಮ ಪಡೆದರು.

ಸಾಮಾನ್ಯವಾಗಿ ಹರಿಜನರಿಗೆ ಜಮೀನು ಇರುವುದಿಲ್ಲ. ಇವರಿಗೂ ಇಲ್ಲ. ಷೀಟಿನ ಮನೆಯೊಂದಿದೆ.

ಶ್ರೀ ಹೆಮ್ಮಿಗೆ ಬಸವರಾಜು ಅವರಿಗೆ ತಮ್ಮ ಜನ್ಮ ಸ್ಥಳದ ಬಗೆಗೆ ಅಭಿಮಾನವಿದೆ. ತಮ್ಮ ಹೆಸರಿನ ಹಿಂದೆ ಹೆಮ್ಮಿಗೆಯನ್ನು ಸೇರಿಸಿಕೊಂಡೆ ತಮ್ಮ ಪರಿಚಯ ಮಾಡಿಕೊಳ್ಳುವ ಸಂಭಾವಿತ ಸರಳ ವ್ಯಕ್ತಿ.

ಶ್ರೀ ಹೆಮ್ಮಿಗೆ ಅವರು ಜನಪದ ಭಕ್ತಿ ಗೀತೆಗಳನ್ನು ಹಾಡುವುದರಲ್ಲಿ ಸಿದ್ಧ ಕಂಠರು.

1. ಶ್ರೀ ಮಹದೇಶ್ವರ-ಶರಣೆ ಸಂಕಮ್ಮನ ಸಾಲು; ಕಂಸಾಳೆ ಹಾಡನ್ನು ಹಾಡುತ್ತಾರೆ.
2. ನಂಜುಂಡೇಶ್ವರ-ಹುಚ್ಚನಹಳ್ಳಿ ಮಾರಮ್ಮ 'ತಿಂಗ ತಿಂಗಳಿಗೂ ಚಂದ ನಂಜನಗೂಡು ಗಂಧ ತುಂಬೈತೆ ಗುಡಿಯೆಲ್ಲಾ' ನಂಜುಂಡೇಶ್ವರನ ಈ ಹಾಡನ್ನು ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ.
3. ಚಾಮುಂಡೇಶ್ವರಿ
4. ತೌರಿನ ಹಾಡುಗಳು 'ತವರೂರ ಸಿರಿ ನೋಡಬಂದೆ ತಾಯಿನೆನಪಾಗಿ ಕಣ್ಣೀರ ತಂದೆ'

   ಈ ಹಾಡನ್ನು ಬಸವರಾಜು ಹಾಡುತ್ತಿದ್ದರೆ ಕೇಳುಗರ ಕಂಗಳಲ್ಲಿ ಕಂಬನಿ ತುಂಬಿ ಬರುತ್ತದೆ.
5. ಮಂಟೆಸ್ವಾಮಿ, ಸಿದ್ಧಪ್ಪಾಜಿ, ರಾಚಪ್ಪಾಜಿ, ನೀಲಗಾರರ ಹಾಡನ್ನೂ ಹಾಡುತ್ತಾರೆ. ಜನಪದ ಗೀತೆಗಳನ್ನು ಹಾಡಿರುವ ಸ್ಥಳಗಳು: ಮಂಡ್ಯ, ಮೈಸೂರು, ಬೆಂಗಳೂರು, ಗುಳೇದಗುಡ್ಡ, ಬಾದಾಮಿ-ಐಹೊಳೆ, ಗುಜರಾತಿನ ಕೆವಾಡಿಯಾದಲ್ಲಿ ಅಂತರರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ, ಆಕಾಶವಾಣಿ-ಮೈಸೂರು, ಬೆಂಗಳೂರು, ಚಂದನ ದೂರದರ್ಶನ ಮೊದಲಾದ ಕಡೆಗಳಲ್ಲಿ ಸುಶ್ರಾವ್ಯವಾಗಿ ಹಾಡಿದ್ದಾರೆ.

ದಿವಂಗತ ಶ್ರೀ ಜಿ,ವಿ ಅತ್ರಿಯವರು ನಡೆಸಿದ ಪ್ರಥಮ ಕನ್ನಡ ಸಂಗೀತ ಸಮ್ಮೇಳನದಲ್ಲಿ ಜನಪದ ಗೀತೆ ಗಾಯನದಲ್ಲಿ ಹಿರಿಯರ ವಿಭಾಗದಲ್ಲಿ ಪ್ರಥಮ ಬಹುಮಾನ 3000/ರೂಗಳನ್ನು ಪಡೆದಿದ್ದಾರೆ.

1994ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು; ಮೂಡಬಿದರೆಯಲ್ಲಿ ಶ್ರೀ ವೀರೇಂದ್ರ ಹೆಗಡಡೆ ಅವರ ಹುಟ್ಟು ಹಬ್ಬದಲ್ಲಿ ಹಾಡಿ ಮೆಚ್ಚುಗೆ ಪಡೆದಿದ್ದಾರೆ.

ರಾಮನಗರದ ಜಾನಪದ ಲೋಕದಲ್ಲಿ ಜನಪದ ಗೀತೆಗಾಯನ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಸನ್ಮಾನ :

1. 2007ರಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ
2. ಕನ್ನಡ ಸಾಹಿತ್ಯ ಪರಿಷತ್ ಸೂನಗಹಳ್ಳಿ
3. ಸ್ನೇಹ ಸಂಘದಿಂದ ಕಲಾ ಮಂದಿರ – ಮಂಡ್ಯ
4. ವಂದನಾ ಸಾಂಸ್ಕೃತಿಕ ಟ್ರಸ್ಟ್ – ಬೆಂಗಳೂರು

ಗುರುವಾಗಿ ಶಿಷ್ಯಂದಿರಿಗೆ ತರಬೇತಿ : ಶ್ರೀ ಶಿವಮಾಧು, ಧನುಷ್ ಜಗದೀಶ್ ಮತ್ತು ಪೃಥ್ವಿ (ಟಿ.ವಿ.ಗಾಯಕರಾಗಿ ಪ್ರಸಿದ್ಧಿ ಪಡೆದವರು)

ಕೆ.ಎಂ.ದೊಡ್ಡಿಯ ವಿವೇಕಾನಂದ ಸ್ಕೂಲ್ ವಿದ್ಯಾರ್ಥಿಗಳಿಗೆ ಜನಪದ ಗೀತೆಗಾಯನ ತರಗತಿಯನ್ನು ನಡೆಸಿದ್ದಾರೆ.

ಜನಪದ ಗೀತೆ ಗಾಯನದ ಕೋಗಿಲೆ ಹೆಮ್ಮಿಗೆ ಶ್ರೀ ಬಸವರಾಜು ತಮ್ಮ ನಿಷ್ಠೆ– ಶ್ರದ್ಧೆಯಿಂದ ಯಶಸ್ಸನ್ನು ಪಡೆಯಲಿ ಎಂದು ಆಶಿಸೋಣ.

❖



## ಶ್ರೀಮತಿ ದೊಡ್ಡ ತಾಯಮ್ಮ (ಸೋಬಾನೆ)

ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿಯ ಕಾರಸವಾಡಿಯ ಶ್ರೀಮತಿ ದೊಡ್ಡ ತಾಯಮ್ಮ ಮೂಲತಃ ಗುಂಡ್ಲುಪೇಟೆಯ ತಗಡೂರಿನಿಂದ ಬಂದವರು.

ಅರವತ್ತೈದು ವರ್ಷ ವಯಸ್ಸಿನ ಇವರು ಅವಿದ್ಯಾವಂತೆ. ಇವರ ತಂದೆ ದೊಡ್ಡ ಹೈದೇಗೌಡ, ತಾಯಿ ದೇವಮ್ಮ. ಇವರ ಗಂಡ ದಿವಂಗತ ತಗಡನ ಮಂಚೇಗೌಡ. ದೊಡ್ಡತಾಯಮ್ಮ ಇವರಿಗೆ ಎರಡನೆಯ ಹೆಂಡತಿ. ಮಕ್ಕಳಿಲ್ಲ ಇದ್ದ ಒಬ್ಬ ಮಗ 21ನೇ ವಯಸ್ಸಿನಲ್ಲೇ ತೀರಿಕೊಂಡ.

ಸಿದ್ದಯ್ಯನ ಕೊಪ್ಪಲಿನ ಸಿದ್ದಮ್ಮ ದಿವಂಗತ ತಗಡನ ಮಂಚೇಗೌಡರ ಮೊದಲ ಮಡದಿ. ಈಕೆಗೆ ಎರಡು ಗಂಡು, ಮೂರು ಹೆಣ್ಣು ಮಕ್ಕಳಿದ್ದಾರೆ. ದೊಡ್ಡತಾಯಮ್ಮ ಅವರು ಸಿದ್ದಮ್ಮನ ಮಗ ಶ್ರೀ ಮಾದೇವು ಜತೆ ವಾಸವಾಗಿದ್ದಾರೆ.

ದೊಡ್ಡ ತಾಯಮ್ಮನವರ ಜನಪದ ಕಲಾ ಸೇವೆ ಸ್ಮರಣೀಯವಾದುದು.

1. ಸೋಬಾನೆ ಪದಗಳು 2. ಜನಪದ ಗೀತೆಗಳು 3.ತತ್ತ್ವಪದಗಳನ್ನು ಹಾಡುತ್ತಾರೆ.

ಮಾದಪ್ಪ, ಸಿದ್ದಪ್ಪಾಜಿ ಮೇಲೆ ಭಕ್ತಿ ಗೀತೆಗಳನ್ನು ಹಾಡುತ್ತಾರೆ. ಮದುವೆ ಪದ, ಹೂ ಹೊಂಬಾಳೆ ಹಾಡು, ನಾಟಿ ಪದಗಳನ್ನು ಇಂಪಾಗಿ ಹಾಡುತ್ತಾರೆ.

ಶ್ರೀಮತಿ ದೊಡ್ಡ ತಾಯಮ್ಮನವರು ಮೈಸೂರು ಆಕಾಶವಾಣಿಯ ಕಲಾವಿದೆ. ಸುತ್ತೂರು ಸ್ವಾಮೀಜಿ ಮಠದಲ್ಲಿ, ಆದಿ ಚುಂಚನಗಿರಿ ಮಠದಲ್ಲಿ, ಹನುಮಂತ ನಗರದಲ್ಲಿ, ಜಾನಪದ ಲೋಕದಲ್ಲಿ, ಬೆಂಗಳೂರು ಹಬ್ಬದಲ್ಲಿ, ರಾಜಾಜಿನಗರದ ಹಬ್ಬ, ಬಳ್ಳಾರಿ ಜಿಲ್ಲಾ ಉತ್ಸವದಲ್ಲಿ ಹಾಡಿದ್ದಾರೆ.

ಆಂಧ್ರಪ್ರದೇಶದ ಪೋತಲೂರು ವೀರಬ್ರಹ್ಮೇಂದ್ರಸ್ವಾಮಿ ಮಠದಲ್ಲೂ ಹಾಡಿ ಅಲ್ಲಿಯ ಜನರ ಮೆಚ್ಚುಗೆ ಪಡೆದಿದ್ದಾರೆ.

ಒಕ್ಕಲಿಗ ಜನಾಂಗದ ಇವರು ಕೊಡಗು ಗಡಿನಾಡ ಉತ್ಸವ, ಮೈಸೂರು ದಸರಾ; ವಸ್ತು ಪ್ರದರ್ಶನ, ಮೈಸೂರು ರಂಗಾಯಣ, ಮೈಸೂರು ಕಲಾ ಮಂದಿರ, ರಾಜ್ಯೋತ್ಸವದಲ್ಲಿ ಮಂಡ್ಯದ ಕಲಾ ಮಂದಿರದಲ್ಲಿ ಹಾಡಿದ್ದಾರೆ.

ಸನ್ಮಾನ : 1) ರಂಗಾಯಣ ಮೈಸೂರು 2) ಸುತ್ತೂರು ಮಠ 3) ಜಾನಪದ ಲೋಕೋತ್ಸವ ಇಲ್ಲೆಲ್ಲಾ ಶಾಲು ಹೊದಿಸಿ ಸನ್ಮಾನಿಸಿದ್ದಾರೆ.

ದೊಡ್ಡತಾಯಮ್ಮ ಅವರಿಗೆ ಇನ್ನೂ ಮಾಸಾಶನ ಬರುತ್ತಿಲ್ಲ. ನಗದು ರೂಪದಲ್ಲಿ ಯಾವ ಪ್ರಶಸ್ತಿಯೂ ಬಂದಿಲ್ಲ.

ಒಟ್ಟು ಕುಟುಂಬದಲ್ಲಿ ಒಂದು ಎಕರೆ ತರಿ, ಅರ್ಧ ಎಕರೆ ಖುಷ್ಕಿ ಜಮೀನಿದೆ. ಇವರು ಜೀವನ ನಿರ್ವಹಣೆ ಕಷ್ಟವೆಂದು ಕೈಕಟ್ಟಿ ಕುಳಿತಿಲ್ಲ. ಐದು ಜನರ ತಂಡ ಕಟ್ಟಿಕೊಂಡು ಶ್ರೀ ದೇವರಾಜು ಅವರ ಸಹಕಾರದಿಂದ ಈಗ ಜನಪದ ಗೀತೆ ಗಾಯನ ಕಾರ್ಯಕ್ರಮ ನೀಡುತ್ತಿದ್ದಾರೆ.

❖



## ಶ್ರೀಮತಿ ಚಿಕ್ಕತಾಯಮ್ಮ (ಸೋಬಾನೆ)

ಮಂಡ್ಯ ತಾಲ್ಲೂಕು ದುದ್ದ ಹೋಬಳಿಯ ಮಲ್ಲ ನಾಯಕನ ಕಟ್ಟೆ, ದಿವಂಗತ ಸಣ್ಣೇಗೌಡರ ಧರ್ಮಪತ್ನಿ ಶ್ರೀಮತಿ ಚಿಕ್ಕತಾಯಮ್ಮ ಅವರು ಇಂಪಾಗಿ ಹಾಡುವ ಜನಪದ ಗೀತೆ ಗಾಯಕಿ. ಇವರಿಗೆ ಅರವತ್ತೊಂದು ವರ್ಷಗಳಾಗಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಂದು ಸಾವಿರ ರೂ.ಗಳ ಮಾಸಾಶನ ಬರುತ್ತಿದೆ. ಇವರು ಒಕ್ಕಲಿಗರು; ಕೃಷಿಕರು – 30 ಗುಂಟೆ ತರಿ ಜಮೀನು ಇದ್ದು ಜೀವನಕ್ಕೆ ತೊಂದರೆ ಇಲ್ಲ ಎನ್ನುತ್ತಾರೆ.

ಚಿಕ್ಕ ತಾಯಮ್ಮನವರಿಗೆ ಮೂರು ಗಂಡು ಮಕ್ಕಳು. ಒಬ್ಬಳು ಮಗಳಿದ್ದಾಳೆ. ಶ್ರೀ ಅಶ್ವತ್ಥ್ – 48 ವರ್ಷ; ಶ್ರೀ ಶಂಕರೇಗೌಡ–45 ವರ್ಷ; ಶ್ರೀ ಕಾಳೇಗೌಡ–42 ವರ್ಷ; ಶ್ರೀಮತಿ ಧನಲಕ್ಷ್ಮಿ – 35 ವರ್ಷಗಳಾಗಿವೆ. ಇವರನ್ನು ಹುಲಿವಾನದ ಎಸ್. ಬೋರೇಗೌಡರಿಗೆ ಕೊಟ್ಟು ವಿವಾಹ ಮಾಡಿದ್ದಾರೆ.

ಶ್ರೀಮತಿ ಚಿಕ್ಕತಾಯಮ್ಮ ಅವರು ಜನಪದ ಗೀತೆ ಗಾಯಕಿ. ಇವರು 1. ಸೋಬಾನೆ ಪದ, 2. ರಾಗಿ ಬೀಸುವ ಪದ, 3. ಸಾಂಸಾರಿಕ ಜೀವನವನ್ನು ಕುರಿತ ಜನಪದ ಗೀತೆಗಳು, 4. ನಾಟಿ ಪದ, 5. ಗ್ರಾಮದೇವತೆಗಳಾದ– ಮಾರಮ್ಮ, ಮಂಚಮ್ಮ, ಬೋರಪ್ಪನ ಮೇಲೆ ಹಾಡುತ್ತಾರೆ, 6. ಮಹದೇಶ್ವರ, 7. ಸಿದ್ದಪ್ಪಾಜಿ– ಇವರ ಮೇಲೂ ಹಾಡುತ್ತಾರೆ. 8. ತತ್ತ್ವಪದಗಳನ್ನೂ ಹಾಡುತ್ತಾರೆ.

ಇವರ ಜನಪದಗೀತೆಗಳನ್ನು ಮಗ ಶ್ರೀ ಕಾಳೇಗೌಡನೊಡನೆ ಹಾಡಿ ಕ್ಯಾಸೆಟ್ ಮಾಡಿ ಬಿಡುಗಡೆ ಮಾಡಿದ್ದಾರೆ. ಕ್ಯಾಸೆಟ್‌ಗಳು ನಿರೀಕ್ಷಿಸಿದ ಮಟ್ಟದಲ್ಲಿ ಮಾರಟವಾಗದೆ, ಹಾಕಿದ ಬಂಡವಾಳ ಬಾರದೆ ಸಾಲ ಹೊತ್ತಿದ್ದಾರೆ.

ಇವರ ಕ್ಯಾಸೆಟ್‌ನಲ್ಲಿ – 1. ಮೊದಲ ದೇವರು ತಂದೆ–ತಾಯಿ. ಕಾಳೇಗೌಡ ಹಾಡಿದ್ದಾರೆ, 2. ಹೆಣ್ಣಿಗೆ ಬೇಕು ಅಣ್ಣನ ಆಸರೆ, 3. ಹೆಣ್ಣು ಜೀವನದ ಕಣ್ಣು– ಇವುಗಳನ್ನು ಚಿಕ್ಕತಾಯಮ್ಮ ಹಾಡಿದ್ದಾರೆ.

ಶ್ರೀಮತಿ ಚಿಕ್ಕತಾಯಮ್ಮನವರು 15 ಜನರ 'ಶ್ರೀ ರೇಣುಕಾಂಬ ಜನಪದ ಕಲಾ ತಂಡ'ವನ್ನು ಕಟ್ಟಿದ್ದಾರೆ. ಇವರನ್ನೊಳಗೊಂಡಂತೆ ಆರುಜನ ಹಾಡುಗಾರಿಕೆಗೆ ಮಂಡ್ಯದ ಕಲಾ ಮಂದಿರದಲ್ಲಿ ಸನ್ಮಾನವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಮಂಡ್ಯದ ಕಲಾಮಂದಿರದಲ್ಲಿ ಇವರಿಗೆ ಕಾಯಕ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

❖



ಶ್ರೀಮತಿ ಲಕ್ಷಮ್ಮ



ಶ್ರೀಮತಿ ಪುಟ್ಟ ತಾಯಮ್ಮ



ಶ್ರೀಮತಿ ಲಕ್ಷಮ್ಮ



ಶ್ರೀ ಜಿ.ಸಿ. ಕೃಷ್ಣಯ್ಯ

## ಶ್ರೀಮತಿ ಲಕ್ಷ್ಮಮ್ಮ (ಜನಪದ ಗೀತೆ, ತತ್ತ್ವಪದ ಗಾಯಕಿ)

ದಿವಂಗತ ದ್ಯಾವಯ್ಯನವರ ಪತ್ನಿ ಶ್ರೀಮತಿ ಲಕ್ಷಮ್ಮನವರು ಮಂಡ್ಯನಗರಕ್ಕೆ ಹೊಂದಿಕೊಂಡಂತೆ ಪೂರ್ವಕ್ಕೆ ನಾಲ್ಕು ಕಿ.ಮೀ. ದೂರದ ಗುತ್ತಲು ಗ್ರಾಮದವರು. ಮಡಿವಾಳ ಜನಾಂಗಕ್ಕೆ ಸೇರಿದ ಇವರಿಗೆ ಅರವತ್ತಮೂರು ವರ್ಷಗಳಾಗಿವೆ. ಅವಿದ್ಯಾವಂತೆ.

ಕನಕಪುರ ತಾಲ್ಲೂಕಿನ ಸಾತನೂರು ಬಳಿಯ ದಾಳಿಂಬದ ತತ್ತ್ವಜ್ಞಾನಿ ಬಸವಾನಂದ ಸ್ವಾಮೀಜಿ ಅವರಿಂದ ಹದಿನೈದು ವರ್ಷದವಳಾಗಿದ್ದಾಗಲೇ ದೀಕ್ಷೆಯನ್ನು ಪಡೆದು ನಲವತ್ತೆಂಟು ವರ್ಷಗಳಾಗಿವೆ.

ಇವರು ಒಂದು ಭಜನೆ ಮಂಡಲಿಯನ್ನು ಸ್ಥಾಪಿಸಿಕೊಂಡಿದ್ದಾರೆ. ಇವರ ತಂಡದಲ್ಲಿ ಆರು-ಏಳು ಜನರಿದ್ದಾರೆ. ಪ್ರತಿ ಸೋಮವಾರ ಗುತ್ತಲಿನ ಶ್ರೀ ಅರ್ಕೇಶ್ವರ ಸ್ವಾಮಿ ದೇವಾಲಯದಲ್ಲಿ ಭಜನೆ ಮಾಡುತ್ತಾರೆ. ಇವರೆಲ್ಲರೂ ಶ್ರೀ ಬಸವಾನಂದರ ತತ್ತ್ವಪದಗಳನ್ನೂ ಶ್ರೀ ರೇವಣಸಿದ್ಧೇಶ್ವರ ತತ್ತ್ವಪದಗಳನ್ನೂ ಹಾಡುತ್ತಾರೆ. ಬಸವೇಶ್ವರರ ವಚನಗಳಿಂದ ಆಯ್ದ ತತ್ತ್ವಗಳನ್ನೂ ಹಾಡುತ್ತಾರೆ.

ಜನಪದ ಗೀತೆಗಾಯನ ತಂಡದಲ್ಲಿರುವವರು ಕಿವಿಗೆ ಇಂಪಾಗುವಂತೆ ಹಾಡುತ್ತಾರೆ. 1. ಶ್ರೀಮತಿ ಪುಟ್ಟತಾಯಮ್ಮನವರು ಶ್ರೀ ಬೋರಶೆಟ್ಟರ ಮಡದಿ.

ಬೋರಶೆಟ್ಟರು ಈಕೆಯನ್ನು ಬಿಟ್ಟು ಎಲ್ಲಿಯೋ ಹೊರಟು ಹೋಗಿದ್ದಾರೆ, ಜಮೀನಿಲ್ಲ; ಕೂಲಿ ಮಾಡಿಕೊಂಡು ಗುಡಿಸಿಲಿನಲ್ಲಿ ವಾಸಿಸುತ್ತಿದ್ದಾರೆ. ಇವರಿಗೆ ಅರವತ್ತೈದು ವರ್ಷಗಳಾಗಿವೆ. ಅವಿದ್ಯಾವಂತೆ ಜನಪದಗೀತೆ ಮತ್ತು ತತ್ತ್ವಪದಗಳನ್ನು ಕಾರ್ಯಕ್ರಮ ಸಿಕ್ಕಿದಾಗ ಹಾಡುತ್ತಾರೆ.

ಶ್ರೀ ಜಿ.ಸಿ. ಕೃಷ್ಣಯ್ಯನವರ ಮಡದಿ ಶ್ರೀಮತಿ ಲಕ್ಷ್ಮಮ್ಮ ತಂಡದ ಜಪದ ಗೀತೆ ಗಾಯಕಿಯರಲ್ಲಿ ಒಬ್ಬರು. ಇವರಿಗೆ ಐವತ್ತೆಂಟು ವರ್ಷಗಳಾಗಿವೆ. ಮಡಿವಾಳ ಜನಾಂಗದವರು. ಇಂದು ಹಳ್ಳಿಗಳಲ್ಲೂ ಅವರವರ ಬಟ್ಟೆಗಳನ್ನು ಅವರೇ ಮಡಿ ಮಾಡಿಕೊಳ್ಳುವುದರಿಂದ ಈಗ ಕುಲಕಸುಬು ನಡೆಯುತ್ತಿಲ್ಲ. ಕೂಲಿ ಮಾಡಿ ಜೀವಿಸಬೇಕಿದೆ. ಹೆಂಚಿನ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಶ್ರೀ ಜಿ.ಸಿ. ಕೃಷ್ಣಯ್ಯ ಅವರಿಗೆ ಅರವತ್ತೆರಡು ವರ್ಷಗಳಾಗಿವೆ. ದೃಢಕಾಯರಾಗಿದ್ದಾರೆ, ಕೂಲಿ ಮಾಡಿ ಬದುಕುತ್ತಿದ್ದಾರೆ. ತಂಡದ ಸದಸ್ಯರಲ್ಲೊಬ್ಬರಾಗಿ ಹಾಡುತ್ತಾರೆ.

❖



ಶ್ರೀಮತಿ ವೆಂಕಟಮ್ಮ



ಶ್ರೀಮತಿ ಲಕ್ಷ್ಮಮ್ಮ ಶ್ರೀನಿವಾಸ



ಶ್ರೀಮತಿ ತಾಯಮ್ಮ

ಶ್ರೀಮತಿ ವೆಂಕಟಮ್ಮ ಶ್ರೀ ತಿಮ್ಮಶೆಟ್ಟಿ ಅವರ ಧರ್ಮಪತ್ನಿ, ಇವರಿಗೆ ಐವತ್ತೆಂಟು ವರ್ಷಗಳಾಗಿವೆ. ಇವರು ರಾಜು ವಡ್ಡರ ಜನಾಂಗದವರು. ಇವರು ಮೂಲತಃ ಕೆಮ್ಮಾಳು ಸಾತನೂರಿನಿಂದ ಒಂದು ಗುತ್ತಲು ಕಾಲೋನಿಯಲ್ಲಿ ನೆಲೆಸಿದ್ದಾರೆ. ಗುತ್ತಲು ಲಕ್ಷ್ಮಮ್ಮನ ತಂಡದೊಡನೆ ಹಾಡುತ್ತಾರೆ.

ಗುತ್ತಲು ಗ್ರಾಮದ ಶ್ರೀ ಶ್ರೀನಿವಾಸು ಅವರ ಮಡದಿ ಶ್ರೀಮತಿ ಲಕ್ಷ್ಮಮ್ಮ- ಸವಿತಾ ಜನಾಂಗಕ್ಕೆ ಸೇರಿದವರು. ಶ್ರೀನಿವಾಸು ಅವರು ಹಬ್ಬ-ಹರಿದಿನ, ಮದುವೆಗಳಲ್ಲಿ ಓಲಗ ನುಡಿಸುತ್ತಾರೆ. ಲಕ್ಷ್ಮಮ್ಮ ಅವರಿಗೆ ಐವತ್ತು ವರ್ಷಗಳಾಗಿವೆ; ಜಮೀನು ಇಲ್ಲ, ಕೂಲಿ ಕಾರ್ಮಿಕರಾಗಿದ್ದಾರೆ. ಲಕ್ಷ್ಮಮ್ಮನವರೊಡನೆ ಹಾಡುತ್ತಾರೆ.

ಗುತ್ತಲು ಗ್ರಾಮದ ಶ್ರೀ ಲಿಂಗಶೆಟ್ಟಿ ಅವರ ಧರ್ಮಪತ್ನಿ ಶ್ರೀಮತಿ ತಾಯಮ್ಮ ಅವರಿಗೆ ಐವತ್ತು ವರ್ಷಗಳಾಗಿವೆ; ಇವರು ಮಡಿವಾಳ ಜನಾಂಗದವರು.

ಲಕ್ಷ್ಮಮ್ಮನವರೊಡನೆ ಹಾಡುವವರೆಲ್ಲರೂ ಹಿಂದುಳಿದ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರಾಗಿದ್ದಾರೆ. ಇವರೆಲ್ಲರೂ ಸುಶ್ರಾವ್ಯವಾಗಿ ಹಾಡುತ್ತಾರೆ.

ಶ್ರೀಮಲೈ ಮಹದೇಶ್ವರ, ಕಾಳಮ್ಮ, ಮಾರಮ್ಮ, ಅರ್ಕೇಶ್ವರ- ಮೊದಲಾದ ದೇವರುಗಳ ಬಗೆಗೆ ಭಾವಪೂರ್ಣವಾಗಿ ಹಾಡುತ್ತಾರೆ.

ಇವರು ಹಾಡಿರುವ ಗಮನಾರ್ಹವಾದ ಸ್ಥಳಗಳು :

1. ಹನುಮಂತನಗರ, 2. ಸುತ್ತೂರು ಮಠ, 3. ತತ್ತ್ವಪದ ಗಾಯಕರ ಸಮಾವೇಶ (20.10.2009), 4. ದಾಳಿಂಬದ ಬಳಿಯ ದೊಡ್ಡ ಹಾರೋಹಳ್ಳಿ (ಕನಕಪುರ ಹತ್ತಿರ) 5. ಚುಂಚನಗಿರಿ – ನಾಲ್ಕು ಸಾರಿ ಹಾಡಿದ್ದಾರೆ. 6. ಜಾನಪದಲೋಕದ ಕುರುಡರ ಆಶ್ರಮದಲ್ಲಿ ಸಿದ್ದೇಶ್ವರ ಸ್ವಾಮಿ ಸಮ್ಮುಖದಲ್ಲಿ ಹಾಡಿದ್ದಾರೆ.

ಸನ್ಮಾನ ಮತ್ತು ಉಡುಗೊರೆ : 1. ದೊಡ್ಡ ಹಾರೋಹಳ್ಳಿಯಲ್ಲಿ ಲಕ್ಷಮ್ಮ ಅವರಿಗೆ ಶಾಲು ಹೊದಿಸಿ ಸನ್ಮಾನ.

2. ಆದಿ ಚುಂಚನಗಿರಿಯಲ್ಲಿ ತಂಡದ ಪ್ರತಿಯೊಬ್ಬ ಮಹಿಳೆಗೂ ಒಂದೊಂದು ಸೀರೆ – ಉಡುಗೊರೆ ನೀಡಿದ್ದಾರೆ.

❖



## ಶ್ರೀ ರುದ್ರಪ್ಪ ಗೊರವಾಲೆ
## (ಜನಪದ ಗೀತೆ, ತತ್ತ್ವಪದ ಗಾಯಕರು)

ದಿನಾಂಕ : 18–5–1947 ರಲ್ಲಿ ಶ್ರೀ ಮರಿವೀರಯ್ಯ ಮತ್ತು ಚಿಕ್ಕ ತಾಯಮ್ಮ ಅವರ ಸುಪುತ್ರರಾಗಿ ಗೊರವಾಲೆಯಲ್ಲಿ ಜನಿಸಿ, ಎಸ್.ಎಸ್.ಎಲ್.ಸಿ, ಟಿ.ಸಿ.ಎಚ್. ವಿದ್ಯಾಭ್ಯಾಸ ಮಾಡಿ ಶಿಕ್ಷಕ ವೃತ್ತಿಯನ್ನು ಕೈಗೊಂಡು ಇಂದು ನಿವೃತ್ತರಾಗಿರುವ ಇವರಿಗೆ ಅರವತ್ತಮೂರು ವರ್ಷಗಳಾಗಿವೆ.

ಮಡಿವಾಳ ಜನಾಂಗದ ಇವರು ಶ್ರೀ ರೇಣುಕಸಿದ್ಧೇಶ್ವರರ ಭಕ್ತರಾಗಿ ಆಧ್ಯಾತ್ಮವನ್ನು ರೂಢಿಸಿಕೊಂಡಿದ್ದಾರೆ. ಇವರ ಮಡದಿ ರೇವಮ್ಮ, ಮಗ ಶ್ರೀ ಚಂದ್ರಶೇಖರ್ ಅವರೂ ವಂಶಪಾರಂಪರ್ಯವಾಗಿ ಜನಪದಗೀತೆ ಮತ್ತ ತತ್ತ್ವಪದಗಳನ್ನು ಹಾಡುತ್ತಾರೆ.

ಶ್ರೀ ಗೊರವಾಲೆ ರುದ್ರಪ್ಪನವರು ಸ್ನೇಹಶೀಲರು. ಇವರು ಜನಪದಗೀತೆ, ಸೋಬಾನೆ ಪದಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ, ಧಾರ್ಮಿಕ ಸಭೆ–ಸಮಾರಂಭಗಳಲ್ಲಿ ಸುಶ್ರಾವ್ಯವಾಗಿ ಹಾಡುತ್ತಾರೆ.

ಶ್ರೀ ರುದ್ರಪ್ಪನವರು ಬೆಂಗಳೂರು ಮತ್ತು ಮೈಸೂರು ಆಕಾಶವಾಣಿಗಳಲ್ಲಿ ಜನಪದಗೀತೆ, ಸೋಬಾನೆ ಪದ, ತತ್ತ್ವಪದಗಳನ್ನು ಹಾಡಿದ್ದಾರೆ. ತತ್ತ್ವಪದ ಗಾಯಕರಾಗಿ 'ತಿಳಿಯೊ ಮನವೆ ನಿಜವ' ಎಂಬ ಕ್ಯಾಸೆಟ್ ಬಿಡುಗಡೆ ಮಾಡಿದ್ದಾರೆ. ಸುಮಾರು 35 ವರ್ಷಗಳಿಂದಲೂ ಗಾಯನ ಕಲಾ ಸೇವೆ ಸಲ್ಲಿಸುತ್ತಿದ್ದಾರೆ.

ಗೊರವಾಲೆ ರುದ್ರಪ್ಪನವರು ಹಲವಾರು ಕಡೆ ಗಾಯನ ಕಾರ್ಯಕ್ರಮಗಳನ್ನು ನೀಡಿ ಪ್ರಶಸ್ತಿ, ಬಿರುದು, ಸನ್ಮಾನವನ್ನು ಪಡೆದಿದ್ದಾರೆ. ಅವುಗಳಲ್ಲಿ ಗಮನಾರ್ಹವಾದವು– 1998ರಲ್ಲಿ ಬಾಳೆಹೊನ್ನೂರಿನ ರಂಭಾಪುರಿ ಜಗದ್ಗುರುಗಳಿಂದ 'ಜಾನಪದ ಗೀತಗಾನ ಗಾರುಡಿಗ' ಬಿರುದು, 1997ರಲ್ಲಿ ಮಂಡ್ಯ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವತಿಯಿಂದ ಲಕ್ಷ್ಮಿಸಾಗರದಲ್ಲಿ ನಡೆದ 'ಸೋಬಾನೆ ಸಂಜೆ' ಕಾರ್ಯಕ್ರಮ ನೀಡಿ ಅಭಿನಂದನಾರ್ಹರಾಗಿದ್ದಾರೆ. ಮಂಡ್ಯದ ಹನುಮಂತನಗರ, ತೆಂಡೆಕೆರೆ, ಕರ್ನಾಟಕ ಜಾನಪದ ಪರಿಷತ್– ಬೆಂಗಳೂರು, ಕಡೂರು, ತುಮಕೂರು, ರಾಮನಗರ, ಅವ್ವೇರಹಳ್ಳಿ, ಶ್ರೀ ರೇವಣಸಿದ್ದೇಶ್ವರನ ಬೆಟ್ಟ, ರಾಮನಗರದ ಜಾನಪದ ಲೋಕ, ದುರ್ದಂಡೇಶ್ವರ ಬೇಬಿ ಮಠ, ದನಗೂರು ಬೃಹನ್ಮಠ, ಹಲಗೂರು ಮಠ, ಬೆಂಗಳೂರು ದೂರದರ್ಶನದಲ್ಲಿ ತತ್ತ್ವಪದ ಗಾಯನ ಕಾರ್ಯಕ್ರಮ, ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ, ಕನಕಪುರ ಶ್ರೀ ದೇಗುಲ ಮಠದಲ್ಲಿ, ಕನ್ನಡ ಸಾಹಿತ್ಯ ಪರಿಷತ್– ಮಂಡ್ಯ, ಆದಿಚುಂಚನಗಿರಿ, ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಗೀತೆಗಾಯನ ಕಾರ್ಯಕ್ರಮ ನೀಡಿದ್ದಾರೆ.

❖



## ಶ್ರೀ ಜವರಯ್ಯ (ತತ್ತ್ವಪದ ಗಾಯಕರು)

ಮಂಡ್ಯದಿಂದ ಉತ್ತರಕ್ಕೆ ನಾಗಮಂಗಲ ರಸ್ತೆಯಲ್ಲಿ ಪಯಣಿಸಿದರೆ ಸುಮಾರು ಹದಿನೈದು ಕಿ.ಮೀ. ದೂರದಲ್ಲಿ ಬಸರಾಳು ಹೋಬಳಿ ಸಿಗುತ್ತದೆ. ತಂಬೂರಿ ಜವರಯ್ಯ ಅವರ ಮನೆ ಎಲ್ಲಿ? ಎಂದು ಕೇಳಿದರೆ ಜನ ತೋರಿಸುತ್ತಾರೆ. ಅಷ್ಟರ ಮಟ್ಟಿಗೆ ಜಿಲ್ಲೆಯಲ್ಲಿ ತತ್ತ್ವಪದ ಗಾಯಕರಾಗಿ ಜವರಯ್ಯ ಅವರು ಹೆಸರು ಗಳಿಸಿದ್ದಾರೆ. ತಂಬೂರಿ ಜವರಯ್ಯ ಎಂದೇ ಜಿಲ್ಲೆಯಲ್ಲಿ ಖ್ಯಾತಿಗಳಿಸಿದ್ದಾರೆ.

ಜಾಂಬಾಡಿ ದಾಸಯ್ಯ – ಗಿರಿಗಮ್ಮ ದಂಪತಿಗಳ ಪುತ್ರನಾಗಿ 19.7.1937 ರಲ್ಲಿ ಬಸರಾಳಿನಲ್ಲಿ ಜವರಯ್ಯನವರು ಜನಿಸಿದರು. ಇವರು ಆದಿ ಜಾಂಬವ ಜನಾಂಗದವರು, ಶ್ರೀಮತಿ ಬೋರಮ್ಮ ಇವರ ಮಡದಿ ಶ್ರೀ ಜವರಯ್ಯ ಅವರಿಗೆ ಈಗ 73 ವರ್ಷಗಳಾಗಿವೆ.

ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು ಬಂಡಶೆಟ್ಟಿ ಹಳ್ಳಿಯ ಕೋಡಿಗಲ್ಲು ಮಠದ ಗುರು ರುದ್ರಮುನಿಸ್ವಾಮಿಯವರನ್ನು ತಂಬೂರಿ ಹಿಡಿದು ಸ್ಮರಿಸುತ್ತಾ ತತ್ತ್ವಪದ ಮತ್ತು ಜನಪದ ಗೀತೆಗಳನ್ನು ಇಂಪಾಗಿ ಹಾಡುತ್ತಾರೆ. ಜವರಯ್ಯನವರು ಸುಮಾರು 40 ವರ್ಷಗಳಿಂದ ತತ್ತ್ವಪದ ಗಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

1998-99 ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 5,000/- ರೂ. ನಗದು ಮತ್ತು ಪ್ರಶಸ್ತಿ ಪತ್ರವನ್ನು ಪಡೆದಿದ್ದಾರೆ.

ಬೆಂಗಳೂರು ದೂರದರ್ಶನ, ಮೈಸೂರು ದಸರಾ ಕಾರ್ಯಕ್ರಮ, ಗಗನಚುಕ್ಕಿ ಉತ್ಸವ, ಬೆಂಗಳೂರು ಜ್ಞಾನಭಾರತಿ, ಕ್ರೈಸ್ತ ಪದವಿ ಪೂರ್ವ ಕಾಲೇಜು, ನಯನ ಮಂದಿರ-ಬೆಂಗಳೂರು, ಬಳ್ಳಾರಿ ಜಿಲ್ಲೆ ಗಡಿನಾಡ ಉತ್ಸವ, ಬೆಳಗಾವಿ, ಬೀದರ್, ಶಿವಮೊಗ್ಗ, ಹಾಸನ- ಮೊದಲಾದ ಕಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ; ಇವರು 5ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ.

ಎಪ್ಪತ್ತ ಎರಡು ವರ್ಷದ ವಯೋವೃದ್ಧರಾದ ಇವರು ಇಂದೂ ಚಟುವಟಿಕೆಯಿಂದಿದ್ದು ಕಾರ್ಯಕ್ರಮ ನೀಡುತ್ತಿದ್ದಾರೆ. ಇವರ ವೇಷ-ಭೂಷಣ ನೋಡಿದವರಿಗೆ, ಇವರೊಡನೆ ಸಂಭಾಷಿಸಿ, ತತ್ತ್ವಪದಗಳನ್ನು ಆಲಿಸಿದವರಿಗೆ ಇವರ ಬಗೆಗೆ ಗೌರವಭಾವ ಮೂಡುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಇವರಿಗೆ ಒಂದು ಸಾವಿರ ರೂಪಾಯಿ ಮಾಸಾಶನ ಬರುತ್ತಿದೆ.

2006 ರಲ್ಲಿ ಬಸರಾಳಿನಲ್ಲಿ ನಡೆದ ಮಂಡ್ಯ ತಾಲ್ಲೂಕು 8ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜವರಯ್ಯ ಅವರನ್ನು ಸಾಹಿತ್ಯ ಪರಿಷತ್ತು ಸನ್ಮಾನಿಸಿದೆ- ಈ ಲೇಖಕರ ಅಧ್ಯಕ್ಷತೆಯಲ್ಲಿ.

❖



## ಶ್ರೀಮತಿ ಬೋರಮ್ಮ (ತತ್ವಪದ, ಜನಪದ ಗೀತೆ ಗಾಯಕಿ)

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿಯ ಶ್ರೀ ಬೋರಯ್ಯ (ಬಾತಯ್ಯ) ಮತ್ತು ಕೆಂಪಮ್ಮ ದಂಪತಿಗಳಿಗೆ 28.10.1943 ರಲ್ಲಿ ಬೋರಮ್ಮ ಜನಿಸಿದರು. ಇವರಿಗೆ 66 ವರ್ಷಗಳಾಗಿವೆ.

ತತ್ತ್ವಪದ ಗಾಯಕರಾದ ಶ್ರೀ ತಂಬೂರಿ ಜವರಯ್ಯ ಅವರ ಮಡದಿ- ಪತಿ-ಪತ್ನಿ ಇಬ್ಬರೂ ಗಾಯಕರು.


ಬೋರಮ್ಮನವರು - ಮಂಡ್ಯ, ಬಳ್ಳಾರಿ, ಮಡಿಕೇರಿ, ಬೀದರ್, ಬೆಳಗಾಂ ಜಿಲ್ಲೆಯ ಅಂಥೋಣಿ, ಶಿವಮೊಗ್ಗ, ಮೈಸೂರು ಕಲಾಮಂದಿರ, ಬೆಂಗಳೂರು ರವೀಂದ್ರ ಕಲಾಕ್ಷೇತ್ರ, ಹೊಸೂರು ರಸ್ತೆ ಕ್ರೈಸ್ತ ಪದವಿ ಪೂರ್ವ ಕಾಲೇಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮೂಡಬಿದರೆಯಲ್ಲಿ ಅಡವಾಳ್ ಕಾರ್ಯಕ್ರಮ, ಹೊನ್ನಾವರ, ಆಕಾಶವಾಣಿ, ದೂರದರ್ಶನದಲ್ಲಿ ಕಾರ್ಯಕ್ರಮ ನೀಡಿದ್ದಾರೆ.

ಪತಿ - ಪತ್ನಿ ಇಬ್ಬರೂ ಶಿಶುನಾಳ ಶರೀಫ, ಮಹಂತೇಶ, ಮಹಾಲಿಂಗ, ಬಳ್ಳಾರಿಯ ಕೊಂಡಾರ್ಯ - ಇವರ ತತ್ತ್ವಪದಗಳನ್ನು ಹಾಡುತ್ತಾರೆ.

ನಂಜನಗೂಡು ನಂಜುಂಡೇಶ್ವರನ ಜನಪದ ಗೀತೆಗಳನ್ನು ಹಾಡುತ್ತಾರೆ.

2006–07ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸನ್ಮಾನಿಸಿದೆ. ತಾಯಮ್ಮ–ಮಲ್ಲಯ್ಯ ದತ್ತಿ ಪ್ರಶಸ್ತಿ 2000 ರೂ. ನಗದು ನೀಡಿ ಗೌರವಿಸಿದೆ. 2008ರಲ್ಲಿ ರಂಗಾಯಣದಲ್ಲಿ ಶ್ರೀ ಜವರಯ್ಯ ಅವರನ್ನು ಸನ್ಮಾನಿಸಿದಾಗ ಬೋರಮ್ಮ ಅವರಿಗೆ 1000 ರೂ.ಗಳನ್ನಿತ್ತು ಗೌರವಿಸಿದೆ. ಕರ್ನಾಟಕ ಜಾನಪದ ಅಕಾಡೆಮಿಯು 2008–2009ನೇ ಸಾಲಿನಲ್ಲಿ ತತ್ತ್ವಪದ ಗಾಯನಕ್ಕೆ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

❖



## ಶ್ರೀ ಕೆ.ಎಂ. ಕೃಷ್ಣೇಗೌಡ (ತತ್ತ್ವಪದ ಗಾಯಕ)

ಶ್ರೀ ಕೆ.ಎಂ. ಕೃಷ್ಣೇಗೌಡರು ಕೀಲಾರದವರು, 65 ವರ್ಷ ವಯಸ್ಸಾಗಿದೆ. 6ನೇ ತರಗತಿವರೆಗೆ ಓದಿದ್ದಾರೆ. ಇವರ ಪತ್ನಿ ಗೌರಮ್ಮ, 55 ವರ್ಷ ವಯಸ್ಸಾಗಿದೆ. ಇವರು ಗುರೂಪದೇಶ ಪಡೆದು 18 ವರ್ಷಗಳಾಗಿವೆ. ಬೆಂಗಳೂರು ವೇದಾಂತ ಶಿವರಾಮ ಶಾಸ್ತ್ರಿಗಳ ಶಿಷ್ಯ, ಇವರನ್ನು ಗುರುಪುತ್ರ ಎನ್ನುತ್ತಾರೆ.

ಇವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಸುಮ ಅವರನ್ನು ಗುತ್ತಲಿಗೆ, ವಿವಾಹ ಮಾಡಿಕೊಟ್ಟಿದ್ದಾರೆ, ಎರಡನೆಯ ಮಳು ಉಷಾ ಉಪನ್ಯಾಸಕಿಯಾಗಿದ್ದಾರೆ. ಮಗ ಕೆ. ಶಿವಶಂಕರ ಎಸ್. ಎಸ್. ಎಲ್. ಸಿ. ಓದಿದ್ದಾನೆ.

ಕೃಷ್ಣೇಗೌಡರು – ಶಿವರಾಮಶಾಸ್ತ್ರಿ, ಬ್ರಹ್ಮಾನಂದ, ಗೀತಸಾರದ ತತ್ತ್ವಪದಗಳನ್ನು ಹಾಡುತ್ತಾರೆ. ಇವರಿಗೆ 20 ಗುಂಟೆ ಗದ್ದೆ ಇದೆ. ಸಂಘ-ಸಂಸ್ಥೆಗಳಿಂದ, ಸರಕಾರದಿಂದ ಯಾವುದೇ ಸಹಾಯ ಸಿಕ್ಕಿಲ್ಲ.

❖



## ಶ್ರೀಮತಿ ಗೌರಮ್ಮ (ತತ್ತ್ವಪದ ಗಾಯಕಿ)

ಮಂಡ್ಯ ತಾಲ್ಲೂಕಿನ ಕೋಲಾರದ ಗೌರಮ್ಮನವರು ಐವತ್ತೆಂಟು ವರ್ಷದವರು. ಇವರ ಪತಿ ಶ್ರೀ ನಿಂಗೇಗೌಡರು. ಇವರಿಗೆ ಎಪ್ಪತ್ತೆರಡು ವರ್ಷಗಳಾಗಿವೆ. ಗೌರಮ್ಮ ಅವಿದ್ಯಾವಂತೆ.

ಗೌರಮ್ಮನವರು ರೇಣುಕಾ ಪೀಠದ ಜ್ಞಾನಾನಂದರ ತತ್ತ್ವಪದಗಳನ್ನು ಹಾಡುತ್ತಾರೆ. 'ಪಾಹಿಮಾಂ ಗುರುವೆ' ಎಂದು ಆರಂಭಿಸಿ ನಿರರ್ಗಳವಾಗಿ ಹಾಡುತ್ತಾರೆ. ಜನಪದ ತತ್ತ್ವಗೀತೆಗಳ ಸ್ಪರ್ಧೆ ನಡೆಯುವ ಕಡೆ ಸಾಮಾನ್ಯವಾಗಿ ಇವರು ಸ್ಪರ್ಧಿಸಿ ಹಾಡುವ ಉತ್ಸಾಹವುಳ್ಳವರಾಗಿದ್ದಾರೆ.

ಇವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಒಬ್ಬ ಪೊಲೀಸ್ ಹುದ್ದೆಯಲ್ಲಿದ್ದಾನೆ, ಮತ್ತೊಬ್ಬ ಪಿ.ಯು.ಸಿ. ವ್ಯಾಸಂಗ ಮಾಡಿದ್ದಾನೆ. ಒಬ್ಬ ಮಗಳು ಎಂಟನೇ ತರಗತಿವರೆಗೆ ಓದಿದ್ದಾಳೆ. ಎಲ್ಲರೂ ವಿವಾಹಿತರು.

ಸರಕಾರ ನೀಡಿದ 35X40 ನಿವೇಶನದಲ್ಲಿ ಶೀಟ್ ಮನೆ ಕಟ್ಟಿಕೊಂಡಿದಾರೆ. ಜಮೀನು ಇಲ್ಲ.



## ಶ್ರೀ ಕೃಷ್ಣೇಗೌಡ (ಪಟಾ ಕುಣಿತ, ಸೋಬಾನೆ, ಗಾರುಡಿಗೊಂಬೆ, ಕೋಲಾಟ)

ಪಾಂಡವಪುರ-ನಾಗಮಂಗಲ ರಸ್ತೆಯಲ್ಲಿ ತಾಲ್ಲೂಕಿನಿಂದ 15 ಕಿ.ಮೀ. ದೂರದಲ್ಲಿ ಹೆಗ್ಗಡಹಳ್ಳಿ ಇದೆ. ಹೆಗ್ಗಡಹಳ್ಳಿಯು ಸುಂಕಾತೊಣ್ಣೂರಿಗೆ 2 ಕಿ.ಮೀ. ದೂರದಲ್ಲಿದೆ.

ಶ್ರೀ ಚಿಕ್ಕಹೊನ್ನೇಗೌಡ ಮತ್ತು ಶ್ರೀಮತಿ ಕೆಂಪಮ್ಮ ಅವರ ಮಗನಾಗಿ ಕೃಷ್ಣೇಗೌಡರು ದಿನಾಂಕ 1.7.1957ರಲ್ಲಿ ಜನಿಸಿದರು. ಈಗ 53 ವರ್ಷಗಳಾಗಿವೆ. ಇವರು ಅವಿದ್ಯಾವಂತರು.

ಚಿಕ್ಕಂದಿನಿಂದಲೇ ಜನಪದ ಕಲೆಗಳಿಂದ ಆಕರ್ಷಿತರಾಗಿ ಅವುಗಳನ್ನು ಕಲಿಯಲು ಯತ್ನಿಸಿದುದರ ಫಲವಾಗಿ ಪೂಜಾ ಕುಣಿತ, ಕೋಲಾಟ, ಗಾರುಡಿ ಗೊಂಬೆ ಕಲೆಯನ್ನು ಕರಗತ ಮಾಡಿಕೊಂಡರಲ್ಲದೆ, ಉತ್ತಮ ಧ್ವನಿಯುಳ್ಳ ಇವರು ಸೋಬಾನೆ ಪದಗಳನ್ನೂ ಕಲಿತು ಇಂಪಾಗಿ ಹಾಡುತ್ತಾರೆ. ಇವರಿಗೆ ಹನ್ನೊಂದು ಜನ ಒಡಹುಟ್ಟಿದವರು.

ಸುಮಾರು ಮೂವತ್ತು ವರ್ಷಗಳಿಂದ ತಾವು ಕಲಿತ ಕಲೆಗಳನ್ನು ಅವಕಾಶ ಸಿಕ್ಕಿದಾಗಲೆಲ್ಲ ಪ್ರದರ್ಶಿಸುತ್ತಾ, ಸೋಬಾನೆ ಪದಗಳನ್ನು ಹಾಡುತ್ತಾ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ.

ಮಂಡ್ಯದ ಶ್ರೀಮತಿ ವರಲಕ್ಷ್ಮಿ ಅವರು ಕೃಷ್ಣೇಗೌಡರ ಧರ್ಮಪತ್ನಿ. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಮಗಳಿದ್ದು ಮಾಧ್ಯಮಿಕ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ.

ಶ್ರೀ ಕೃಷ್ಣೇಗೌಡರು ಜಿಲ್ಲೆ, ರಾಜ್ಯ, ಹೊರರಾಜ್ಯಗಳಲ್ಲೂ ತಮ್ಮ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸಿದ್ದಾರೆ: 1. 1989ರಲ್ಲಿ ಶ್ರೀ ಭೈರವೇಶ್ವರ ಜನಪದ ಗೀತೆ ಗಾಯನ ಮೇಳ– ಆದಿಚುಂಚನಗಿರಿ, 2. 1992ರಲ್ಲಿ ದೂರದರ್ಶನ ಕೇಂದ್ರ– ಬೆಂಗಳೂರು, 3. 1993ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ– ಬೆಂಗಳೂರು. 4. 1993ರಲ್ಲಿ ಜಿಲ್ಲಾ ಜಾನಪದ ಕಲಾ ಮೇಳ– ಕೊಪ್ಪಳ, 5. 1994ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ, 6. 1995ರಲ್ಲಿ ಚಂದ್ರಶೇಖರನಾಥ ಸ್ವಾಮೀಜಿ ತಾಂತ್ರಿಕ ಶಿಕ್ಷಣ– ಚಿಕ್ಕಬಳ್ಳಾಪುರ, 7. 1997ರಲ್ಲಿ ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟ–ಬೆಂಗಳೂರು, 8. 1999ರಲ್ಲಿ ಮೈಸೂರು ದಸರಾ ವಸ್ತು ಪ್ರದರ್ಶನ, 9. 1999ರಲ್ಲಿ ಮೈಸೂರು ದಸರಾ ಮಹೋತ್ಸವ, 10. 2000ರಲ್ಲಿ ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನ– ಮಂಡ್ಯ ತಾಲ್ಲೂಕು, 12. 2002ರಲ್ಲಿ ಶರಣ ಸಂಸ್ಕೃತಿ ಉತ್ಸವ, ಮುರುಗಾಮಠ–ಚಿತ್ರದುರ್ಗ ಮತ್ತು ಶ್ರೀ ನಿಕುಂಬಾಣಿ ದೇವಸ್ಥಾನ– ಲಕ್ಷ್ಮೀಸಾಗರ, 13. 2002ರಲ್ಲಿ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನ–ಮಂಡ್ಯ ತಾಲ್ಲೂಕು, 14. 2004ರಲ್ಲಿ ದಸರಾ ಮಹೋತ್ಸವ ಮೆರವಣಿಗೆ, 15. 2005ರಲ್ಲಿ ಗಂಗ ಸಾಮ್ರಾಜ್ಯೋತ್ಸವ–ತಲಕಾಡು, 16. 2007ರಲ್ಲಿ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ–ತಂಜಾವೂರು ಮತ್ತು ಜಾನಪದ ಜಾತ್ರೆ– ಲಾಲ್‌ಬಾಗ್–ಬೆಂಗಳೂರು, 17. 2008ರಲ್ಲಿ ಚಿತ್ರಕಲಾ ಪರಿಷತ್– ಲೋಕರಂಗ ಉತ್ಸವ–ಭೂಪಾಲ್, 18. 2008ರಲ್ಲಿ ಶರಣ ಸಂಸ್ಕೃತಿ ಉತ್ಸವ– ಚಿತ್ರದುರ್ಗ ಮತ್ತು ದಸರಾ ಜನಪದೋತ್ಸವ– ಇಲ್ಲೆಲ್ಲಾ ಜನತೆಯ ಮೆಚ್ಚುಗೆಯನ್ನು ಪಡೆದಿದ್ದಾರೆ.

**ಶಿಕ್ಷಕರಾಗಿ :** ಗುರುವಿನ ಸ್ಥಾನ ಹಿರಿದೆಂದು ಭಾವಿಸಿ ಹಲವಾರು ಶಿಷ್ಯಂದಿರಿಗೆ ತಮ್ಮ ಕಲೆಯನ್ನು ಕಲಿಸಿದ್ದಾರೆ. 1. ಮೈಸೂರಿನ ರಂಗಾಯಣದ ವಿದ್ಯಾರ್ಥಿಗಳಿಗೆ ಕೋಲಾಟವನ್ನು ಕಲಿಸಿದ್ದಾರೆ. 2. ತುಮಕೂರು ಮಹಿಳಾ ಸಂಘದವರಿಗೆ ಕೋಲಾಟವನ್ನು ಕಲಿಸಿದ್ದಾರೆ. 3. ಜಾನಪದ ಲೋಕದಲ್ಲಿಯ ವಿದ್ಯಾರ್ಥಿಗಳಿಗೆ ಕೋಲಾಟ ಮತ್ತು ಸೋಬಾನೆಯನ್ನು ಒಂದು ವಾರ ಕಲಿಸಿದ್ದಾರೆ – ಆಗ ದಿನಕ್ಕೆ 275 ರೂ. ಸಂಭಾವನೆ ಪಡೆದಿದ್ದಾರೆ. 4. ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಮಂಡ್ಯ ವತಿಯಿಂದ 'ಗುರು–ಶಿಷ್ಯ ಪರಂಪರೆ' ಯೋಜನೆ ಮೂಲಕ ಸುಂಕಾ ತೊಣ್ಣೂರಿನಲ್ಲಿ ಹತ್ತು ಮಂದಿಗೆ ಸೋಬಾನೆ ಪದ ಕಲಿಸಿದ್ದಾರೆ; ಈ ತಂಡದವರು ಇಂದು ಆಕಾಶವಾಣಿಯ ಕಲಾವಿದರಾಗಿದ್ದಾರೆ.

ಶ್ರೀ ಕೃಷ್ಣೇಗೌಡರ ಶ್ರದ್ಧೆ- ನಿಷ್ಠೆ- ಕಲಾ ಸೇವೆಗಾಗಿ ಹಲವಾರು ಬಿರುದು, ಪ್ರಶಸ್ತಿ ಸನ್ಮಾನಗಳೂ ಪ್ರಾಪ್ತಿಸಿವೆ.

1. ಕರ್ನಾಟಕ ರಕ್ಷಣಾ ವೇದಿಕೆ- ಪಾಂಡವಪುರ 2003ರಲ್ಲಿ 'ಜಾನಪದ ರತ್ನ' ಪ್ರಶಸ್ತಿ, 2. 2000ರಲ್ಲಿ ಹನುಮಂತನಗರದಲ್ಲಿ ಸೋಬಾನೆಗಾಗಿ ಪ್ರಶಸ್ತಿ, 3. ಮೇಲುಕೋಟೆಯ ಚಲುವನಾರಾಯಣಸ್ವಾಮಿ ರಾಜ್ಯ ಮಟ್ಟದ ಕಲಾ ಮೇಳದಲ್ಲಿ 'ಜಾನಪದ ಗಾರುಡಿಗ' ಬಿರುದು, 4. ಮಂಡ್ಯ ಜಿಲ್ಲಾ ಆಡಳಿತವು 'ಸುವರ್ಣ ಕರ್ನಾಟಕ' ಉತ್ಸವದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು 2005ರಲ್ಲಿ ನೀಡಿದೆ. 5. ಸಿದ್ದಮ್ಮ ಮತ್ತು ಸಿದ್ದೇಗೌಡ ಗುರೂಜಿ 'ಜಾನಪದ ಪ್ರಶಸ್ತಿ'ಯನ್ನು 2008ರಲ್ಲಿ ನೀಡಿದೆ. 6. ಪಾಂಡವಪುರ ಶಿಕ್ಷಕರ ಭವನದಲ್ಲಿ ರಕ್ಷಣಾ ವೇದಿಕೆಯಿಂದ ಸನ್ಮಾನ, 7. ಜಾನಪದ ಲೋಕ- ಲೋಕೋತ್ಸವ ಸನ್ಮಾನ, 8. ಮೇಲುಕೋಟೆ ರಥಸಪ್ತಮಿಯಲ್ಲಿ ಸನ್ಮಾನ, 9. ಕೆರೆ ತೊಣ್ಣೂರಿನ ನಿಕುಂಬಿಕಾ ದೇವಸ್ಥಾನದಲ್ಲಿ, 10. ಚನ್ನಪಟ್ಟಣದಲ್ಲಿ ಸೋಬಾನೆ ಪದಕ್ಕಾಗಿ 3000 ರೂ.ಗಳೊಡನೆ ಸನ್ಮಾನ.

ಶ್ರೀ ಕೃಷ್ಣೇಗೌಡ ಹೆಗ್ಗಡಹಳ್ಳಿ ಅವರು ಸೋಬಾನೆ ಪದಗಳನ್ನು ಹಾಡುವುದರಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದಿದ್ದಾರೆ; ಪಟಾಕುಣಿತ, ಕೋಲಾಟ ಕಲೆಯಲ್ಲೂ ನೈಪುಣ್ಯ ಹೊಂದಿದ್ದಾರೆ.

ಶ್ರೀ ಕೃಷ್ಣೇಗೌಡರಿಗೆ ಹೆಗ್ಗಡಹಳ್ಳಿಯಲ್ಲಿ ಮೂರು ಅಂಕಣದ ನಾಡು ಹೆಂಚಿನ ಸ್ವಂತ ಮನೆ ಇದೆ.

❖




## ಶ್ರೀ ನರಸಿಂಹಶೆಟ್ಟಿ (ಪಟಾ ಕುಣಿತ, ಕೋಡಂಗಿ ವೇಷ)

ದಿ॥ ಶ್ರೀ ನರಸಶೆಟ್ಟಿ ಮತ್ತು ಶತಾಯಷಿ ಶ್ರೀಮತಿ ವೆಂಕಟಮ್ಮ ಇವರ ಪುತ್ರ ಶ್ರೀ ನರಸಿಂಹಶೆಟ್ಟಿ ಕದಲಗೆರೆ ಗ್ರಾಮದವರು. ನರಸಿಂಹಶೆಟ್ಟರಿಗೆ 53 ವರ್ಷಗಳಾಗಿವೆ, ಇವರ ಮಡದಿ ಶ್ರೀಮತಿ ಜಯಮ್ಮ ಅವರಿಗೆ 42 ವರ್ಷಗಳಾಗಿವೆ. 26 ವರ್ಷದ ನಾಗರಾಜು, 23 ವರ್ಷದ ಪ್ರಭಾಕರ; 20 ವರ್ಷದ ರೇಣುಕಮ್ಮ, 18 ವರ್ಷದ ಯಶೋದಮ್ಮ– ಇವರ ಮಕ್ಕಳು. ಇವರು ಮಡಿವಾಳಶೆಟ್ಟರು.

ಶ್ರೀ ನರಸಿಂಹಶೆಟ್ಟರು– ಪಟಾಕುಣಿತ, ಕೋಡಂಗಿ ವೇಷ, ಗಾರುಡಿಗೊಂಬೆ– ಕಲಿತ ಕಲೆಗಳಾಗಿವೆ. ಇವರ ಗುರು ಕದಲಗೆಯ ಆರ್. ಶಿವಣ್ಣಗೌಡರು. ನರಸಿಂಹಶೆಟ್ಟರಿಗೆ 30 ವರ್ಷಗಳ ಕಲಾನುಭವವಿದೆ. ಮೇಲುಕೋಟೆಯ ಸುತ್ತಲ ಪ್ರದೇಶಗಳಲ್ಲಿ ನಡೆಯುವ ಭಾಗವಂತಿಕೆ ಮೇಳದಲ್ಲಿ ಇವರು ಹಾಕುವ ಕೋಡಂಗಿ ವೇಷ ಜನಪ್ರಿಯವಾಗಿದೆ.

ಶ್ರೀ ನರಸಿಂಹಶೆಟ್ಟರು ನೀಡಿರುವ ಕಲಾ ಪ್ರದರ್ಶನದ ಸ್ಥಳಗಳು– ಬೆಂಗಳೂರು, ಮಡಿಕೇರಿ, ಚಿಕ್ಕಮಗಳೂರು, ಬಾಗಲಕೋಟೆ, ಹೊಸಪೇಟೆ, ಹಂಪಿ ಉತ್ಸವ, ಧರ್ಮಸ್ಥಳ, ಮೂಡಬಿದಿರೆ, ರಾಯಚೂರು, ಶಿವಮೊಗ್ಗದ ಇಟಗಿ; ಹೊರರಾಜ್ಯಗಳಾದ ದೆಹಲಿ, ರಾಜಸ್ಥಾನ.

ನರಸಿಂಹಶೆಟ್ಟರಿಗೆ ಜಾನಪದಲೋಕದಲ್ಲಿ ಶಾಲು ಹೊದಿಸಿ ಸನ್ಮಾನಿಸಿದ್ದಾರೆ.



## ಶ್ರೀ ಆರ್. ಶಿವಣ್ಣಗೌಡ (ಪಟದ ಕುಣಿತ, ರಂಗದ ಕುಣಿತ)

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಹೋಬಳಿಯ ಕದಲಗೆರೆ ಗ್ರಾಮದ ದಿವಂಗತ ಶ್ರೀ ಪಿ. ರಾಜೇಗೌಡ-ದೇವಮ್ಮ ದಂಪತಿಗಳ ಪುತ್ರ ಆರ್. ಶಿವಣ್ಣಗೌಡರು– ಸಾಕ್ಷರತೆಯ ಮೂಲಕ ಓದು ಬರಹ ಕಲಿತಿದ್ದಾರೆ; ಐವತ್ತು ವರ್ಷಗಳಾಗಿವೆ. ಇವರ ಧರ್ಮಪತ್ನಿ ನಾಗಮ್ಮನವರಿಗೆ ಮೂವತ್ತೇಳು ವರ್ಷಗಳಾಗಿವೆ. ನಾಗಮ್ಮ-ಶಿವಣ್ಣಗೌಡರ ಅಕ್ಕನ ಮಗಳು; ಒಂದೇ ಊರಿನವರು. ಶ್ರೀ ಕೆ.ಎಸ್. ಪದ್ಮನಾಭ ಎಸ್.ಎಸ್.ಎಲ್.ಸಿ., ಕೆ.ಎಸ್. ಪ್ರಮೋದ 9ನೇ ತರಗತಿ– ಇವರು ಆರ್. ಶಿವಣ್ಣಗೌಡರ ಮಕ್ಕಳು.

ಆರ್. ಶಿವಣ್ಣಗೌಡರು ಚಿಕ್ಕಂದಿನಿಂದಲೇ ಕಲೆಯ ಬಗೆಗೆ ಒಲವುಳ್ಳವರಾಗಿದ್ದರು. ಆದ್ದರಿಂದ ಜನಪದ ಕಲೆಗಳಾದ ರಂಗದ ಕುಣಿತ, ಪಟದ ಕುಣಿತ ಕಲಿತರು.

ವಗರಿ (ವರನಂದಿ) ಹಬ್ಬ : ವರನಂದಿಯ ತವರು ಕದಲಗೆರೆ, ಗೌರಿ ಹಬ್ಬ ಆದ 12 ದಿನಕ್ಕೆ ಬಾಳೆಕಂಬ ತಂದು, ವರನಂದಿಯನ್ನು ಈರನ ದಾರಿ ಮೂಲಕ ಊರಿಗೆ ಕರೆತರುತ್ತಾರೆ. ಹರಿಜನರ ಕೇರಿಯೇ ಈರನದಾರಿ.

ರಂಗದ ಕುಣಿತವು ವರನಂದಿ ಹಬ್ಬದಲ್ಲಿ 12 ದಿನ ನಡೆಯುತ್ತದೆ. ಆದಿನಾರಾಯಣ ಸ್ವಾಮಿ ದೇವಸ್ಥಾನವು ಮೇಲುಕೋಟೆಯ ತಿರುನಾರಾಯಣನಿಗಿಂತ ಮೊದಲೇ ಸ್ಥಾಪಿತವಾದುದು. ಹರಿಸೇವೆ ಮಾಡುವಾಗ ಉಲ್ಲಾರ ನಾರಾಯಣಸ್ವಾಮಿಗುಡ್ಡ– ಲಕ್ಷ್ಮೀದೇವಿಗುಡ್ಡ– ಇವರನ್ನೇ ದೇವರೆಂದುಕೊಂಡು ದಳವಾರ (ಪಟ) ಸಹಿತ ಒಬ್ಬ ಕೋಡಂಗಿ ಜತೆ ಹೋಗಿ ಗುಡ್ಡಂದರಿಗೆ ಪೂಜೆ ಮಾಡಿ ಲಕ್ಷ್ಮೀದೇವಿ ಖಣಜಕ್ಕಿ ತಮ್ಮ ಕಾಣಿಕೆ ಸಲ್ಲಿಸುತ್ತಾರೆ. ನಾರಾಯಣಸ್ವಾಮಿ ಗುಡ್ಡ ಬೆತ್ತ ಹಿಡಿದು ಹೋಗುತ್ತಾನೆ, ಜನತೆಯಲ್ಲಿ ಕೋಡಂಗಿ ಹೋಗುತ್ತಾನೆ.

ಭಾಗವಂತಿಕೆ ಮೇಳವನ್ನು ಶ್ರಾವಣ ಕಾರ್ತಿಕ ಮಾಸದಲ್ಲಿ ಮಾಡುತ್ತಾರೆ. ಈ ಮೇಳದಲ್ಲಿ 8 ರಿಂದ 10 ಜನರಿರುತ್ತಾರೆ.

ಪ್ರದರ್ಶನ : ದಾವಣಗೆರೆಯಲ್ಲಿ ನಡೆದ ಮೇಳದಲ್ಲಿ ಅಣ್ಣನವರಾದ ದಿವಂಗತ ಸಿಂಗೇಗೌಡ ಜತೆ ಭಾಗವಹಿಸಿದ್ದರು. ಪ್ರತಿ ವರ್ಷ ನಡೆಯುವ ಮೇಲುಕೋಟೆಯ ರಥಸಪ್ತಮಿಯಲ್ಲಿ – ತೊಟ್ಟಿಲು ಮಡು (ಅಷ್ಟ ತೀರ್ಥ) ಪೂಜೆಯಲ್ಲಿ ಪ್ರದರ್ಶನ ನೀಡಿದ್ದಾರೆ.

ರಂಗದ ಕುಣಿತವನ್ನು ಕೇರಳದ ಪಾಂಡಿಚೇರಿಯಲ್ಲಿ ಮಾಡಿದ್ದಾರೆ.

ಪಟಾ ಕುಣಿತದ ಪ್ರದರ್ಶನವನ್ನು ತಮಿಳು ನಾಡು ದಕ್ಷಿಣ ಚಿತ್ರ, ನಾಗಪುರದಲ್ಲಿ ನೀಡಿದ್ದಾರೆ. 4ನೆಯ ರಾಷ್ಟ್ರೀಯ ಕ್ರೀಡಾ ಕೂಟ– ಬೆಂಗಳೂರು, ಮಡಿಕೇರಿ ದಸರಾ, ಮಂಡ್ಯ ಜಿಲ್ಲೆ ಜನಪದ ಕಲಾವಿದರ ಸಮಾವೇಶದಲ್ಲಿ ಪ್ರದರ್ಶನವನ್ನು ನೀಡಿದ್ದಾರೆ.

ಪಟಾ ಕುಣಿತ ಮತ್ತು ರಂಗದ ಕುಣಿತಗಳನ್ನು – ಮೈಸೂರು ದಸರಾ, ರಾಜಾಸ್ಥಾನ ದೆಹಲಿ–ಸೋನಿಯಾಗಾಂಧಿ ಹುಟ್ಟಿದ ಹಬ್ಬ – 10 ಜನರ ನೇತೃತ್ವ ವಹಿಸಿದ್ದರು. ಕಲ್ಕತ್ತಾ, ಬೆಂಗಳೂರು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ರದರ್ಶನ ನೀಡಿದ್ದಾರೆ. ಬೆಂಗಳೂರು ಹಬ್ಬ, ರವೀಂದ್ರ ಕಲಾಕ್ಷೇತ್ರ– ಮೊದಲಾದ ಕಡೆಗಳಲ್ಲಿ ಶಿವಣ್ಣಗೌಡರು ತಮ್ಮ ಕಲಾ ಪ್ರದರ್ಶನ ನೀಡಿದ್ದಾರೆ.

ದೊಡ್ಡರಸಿನ ಕೆರೆ, ಅಂಬರಹಳ್ಳಿ– ಈ ಊರುಗಳಲ್ಲಿ ಎರಡು ತಂಡಗಳಿಗೆ ತಮ್ಮ ಕಲೆಯನ್ನು ಕಲಿಸಿದ್ದಾರೆ.

ಪಟಾ ಕುಣಿತ ಮತ್ತು ರಂಗದ ಕುಣಿತ ಪರಸ್ಪರ ಪೂರಕವಾದವು.

ಕದಲಗೆರೆಯಲ್ಲಿ 15 ಮಕ್ಕಳಿಗೆ ಪಟಾ ಕುಣಿತದ ತರಬೇತಿ ನೀಡಿದ್ದಾರೆ.

ಆರ್. ಶಿವಣ್ಣಗೌಡರಿಗೆ ಸನ್ಮಾನ ಸಂದಿರುವ ಸ್ಥಳಗಳು : 1. ಪಾಂಡವಪುರ ಕನ್ನಡ ರಕ್ಷಣಾ ವೇದಿಕೆ – ಶಾಲು ಹೊದಿಸಿ ಜಾನಪದ ರತ್ನ ಪ್ರಶಸ್ತಿ ನೀಡಿದ್ದಾರೆ,

2. ಜಾನಪದ ಲೋಕದಲ್ಲಿ ಶಾಲು ಹೊದಿಸಿ ಸನ್ಮಾನಿಸಿದ್ದಾರೆ, 3. ಮಂಡ್ಯ ಜಿಲ್ಲಾ ಆಡಳಿತ, 4. ಮೇಲುಕೋಟೆ ರಥ ಸಪ್ತಮಿ, ಈ ನಾಲ್ಕು ಕಡೆಗಳಲ್ಲಿ ಶಾಲುಹೊದಿಸಿ ಸನ್ಮಾನಿಸಲಾಗಿದೆ.

ಚಲನಚಿತ್ರಗಳಲ್ಲಿ ಕಲಾ ಪ್ರದರ್ಶನ ಮತ್ತು ನಟನೆ; ಜೋಗಿ, ಕಬ್ಬಡಿ, ಗಜ, ತಾಕತ್ತು, ಸೇವಂತಿ, ಭಾಗ್ಯದ ಬಳೆಗಾರ, ವಾಯುಪುತ್ರ; ಕುಂಕುಮ ಭಾಗ್ಯ (ಕಿರುಚಿತ್ರ), ಮಜ (ತಮಿಳು).

ಆರ್. ಶಿವಣ್ಣಗೌಡರ ಜನಪದ ಕಲಾ ಸೇವೆ ಗಮನಾರ್ಹವಾಗಿದೆ.

❖


ಶ್ರೀಮತಿ ನಾಗಮ್ಮ


ಶ್ರೀಮತಿ ಕೆಂಚಮ್ಮ


ಶ್ರೀಮತಿ ಭದ್ರಮ್ಮ


ಶ್ರೀಮತಿ ಹನುಮಮ್ಮ

## ಶ್ರೀಮತಿ ನಾಗಮ್ಮ (ಸೋಬಾನೆ)

ಪಾಂಡವಪುರ ತಾಲ್ಲೂಕು ಲಕ್ಷ್ಮೀಸಾಗರದ ಶ್ರೀ ಪಾಪೇಗೌಡ ಮತ್ತು ಶ್ರೀಮತಿ ಕೆಂಚಮ್ಮನವರ ಪುತ್ರಿ ಸೋಬಾನೆ ನಾಗಮ್ಮ ಅವರು ಶ್ರೀ ಹನುಮಂತೇಗೌಡರ ಪತ್ನಿ. ಇವರಿಗೆ ಆನಂದ ಎಂಬ ಮಗನಿದ್ದು ತೀರಿಕೊಂಡಿದ್ದಾನೆ. ಸುನಂದ ಇವರ ಮಗಳು. ಇವರಿಗೆ ಈಗ ಐವತ್ತೈದು ವರ್ಷಗಳಾಗಿವೆ. ಶ್ರೀ ಕೃಷ್ಣೇಗೌಡ ಇವರ ತಮ್ಮ.

ಶ್ರೀಮತಿ ನಾಗಮ್ಮನವರಿಗೆ ಹತ್ತು ಗುಂಟೆ ಖುಷ್ಕಿ ಜಮೀನಿದೆ. ಇವರ ಸಂಸಾರ ಈ ಜಮೀನನ್ನು ಅವಲಂಬಿಸಿದೆ. ಇವರ ಅಳಿಯ ಮೇಲುಕೋಟೆ ಹತ್ತಿರದ ಮದೇನಹಳ್ಳಿಯವರು.

ತಾಯಿ ಶ್ರೀಮತಿ ಕೆಂಚಮ್ಮನವರಿಂದ ನಾಗಮ್ಮ ಸೋಬಾನೆ ಹಾಡುಗಳನ್ನು ಕಲಿತು ಸುಶ್ರಾವ್ಯವಾಗಿ ಹಾಡುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಶುಭ ಕಾರ್ಯಗಳಲ್ಲಿ ಆಹ್ವಾನದ ಮೇರೆಗೆ ಹೋಗಿ ಹಾಡಿ ಕೊಟ್ಟಷ್ಟು ಗೌರವಧನವನ್ನು ಸ್ವೀಕರಿಸುತ್ತಾರೆ. ಸರಸ್ವತಿಯನ್ನು ಸ್ಮರಿಸಿ ಹಾಡುವುದು ಇವರ ಪದ್ಧತಿ.

ನಾಗಮ್ಮನವರು ಕೇವಲ ಸೋಬಾನೆ ಪದಗಳನ್ನಷ್ಟೇ ಅಲ್ಲದೆ ವಿವಿಧ ದೇವರುಗಳ ಮೇಲೆ ಭಕ್ತಿ ಗೀತೆಗಳನ್ನೂ ಮದುವೆ ಹಾಡುಗಳನ್ನೂ ನಾಲ್ಕು-

ಆರು-ಹತ್ತು ಜನರ ತಂಡದೊಡನೆ ಹಾಡುತ್ತಾರೆ. ಇಡೀ ತಂಡದಲ್ಲಿ ಒಂದಿಬ್ಬರು ಮುಮ್ಮೇಳವಾಗಿ ಹಾಡಿದರೆ ಉಳಿದವರು ಹಿಮ್ಮೇಳವಾಗಿ ಹಾಡುತ್ತಾರೆ. ಗುಂಪಾಗಿ ಹಾಡಿದ ಗೀತೆಯ ಧ್ವನಿಯು ಜೇನುನೊಣಗಳ ಝೇಂಕಾರದಂತೆ ಕಿವಿತುಂಬಿ ಎದೆತುಂಬಿ ಮೈಮರೆಸುತ್ತದೆ ಶ್ರಾವಕರನ್ನು.

1. ಮೇಲುಕೋಟೆ ಚಲುವ ನಾರಾಯಣಸ್ವಾಮಿ
2. ಭೂಮಿತಾಯಿ
3. ಚುಂಚನಗಿರಿ ಭೈರವ
4. ಕಮ್ಮನದೇವಿ (ದೇವಮ್ಮ) ಹನುಮಂತರಾಯ
5. ಮನೆಯಮ್ಮ (ಲಕ್ಷ್ಮೀದೇವಿ)
6. ಮಹದೇಶ್ವರ
7. ಚಾಮುಂಡೇಶ್ವರಿ
8. ನಂಜುಂಡೇಶ್ವರ

ಈ ದೇವರುಗಳ ಮೇಲೆ ಇಂಪಾಗಿ ಹಾಡುತ್ತಾರೆ. ವೈವಾಹಿಕ ಜೀವನಕ್ಕೆ ಸಂಬಂಧಿಸಿದ- ಸೋಬಾನೆ, ಮದುವೆ, ರಾಗಿಬೀಸುವ ಹಾಡುಗಳು ಇವರ ಕಂಠ ಖಣಜದಲ್ಲಿವೆ. ಭೂಮಿಯನ್ನು ನಂಬಿ ಬಾಳುವ ಜನಪದರಿಗೆ ಮಳೆ-ಬೆಳೆ ಮುಖ್ಯವಾದ್ದರಿಂದ ಮಳೆರಾಯ- ಉತ್ತರದೇವಿ ಮೇಲೂ ಹಾಡತ್ತಾರೆ. ಮದುವೆ ಹಾಡುಗಳಲ್ಲಿ ಮುಖ್ಯವಾಗಿ ದೇವರ ತರುವ ಶಾಸ್ತ್ರ ನಡೆಯುವಾಗ ಹಾಡುವ ಹಾಡು ಗಮನಾರ್ಹವಾದುದು.

**ಮೇಲುಕೋಟೆ ಚಲುವನಾರಾಯಣಸ್ವಾಮಿಯನ್ನು ಕುರಿತು :**

*ಈ ಚಲುವಯ್ಯ ಹುಟ್ಟಲಾಗಿ*
*ಮೇಲುಕೋಟೆ ಕಟ್ಟಲಾಗಿ /ಸೋಬಾನೆ/*

ಎಂದು ಹಾಡುತ್ತಾರೆ.

*'ಹಸಿರು ಭೂಮಿತಾಯಿ*
*ಮೊಸರು ಅನ್ನಬಯಸಿ'*

- ಎಂದು ಭೂಮಿತಾಯಿಯನ್ನು ಕುರಿತು ಭಕ್ತಿ ಭಾವದಿಂದ ಹಾಡುತ್ತಾರೆ.

*'ಕಲ್ಲೆ ಮಾತಾಡುತಾವೆ*
*ಗಿಡವೆ ಓಲಾಡುತಾವೆ*
*ಚುಂಚನಗಿರಿ ಬೆಟ್ಟದ ಮೇಲೆ*
*ನವಿಲೆ ಕೂಗಾಡುತಾವೆ.*

ಎಂದು ಚುಂಚನಗಿರಿಯ ಭೈರವನನ್ನು ಕುರಿತು ಹಾಡುವ ಈ ಜನಪದ ಗೀತೆಯು ಪ್ರಕೃತಿ ಗೀತೆಯೂ ಆಗಿದೆ.

*'ಸರಸೋತಿ ಸಣ್ಣೋಳೆ*
*ನಗುಮೊಕದ ಕರಚಲುವೆ'*

–ಎಂದು ಸೋಬಾನೆ ಹಾಡನ್ನು ಹಾಡುತ್ತಾರೆ.

*'ರಾಗಿ ಕಲ್ಲೀಗೆ ರನ್ನಾದ ಕೈಗೂಟ*
*ರಾಜ ತಮ್ಮನ ಕೊಡುಗೆ ಕಲೆ'*

–ಗೃಹಿಣಿಯಾದವಳು ಮನೆಯಲ್ಲಿ ಅಕ್ಕಿ–ರಾಗಿ ಬೀಸಿ ಊಟ ಸಿದ್ಧಪಡಿಸಬೇಕು. ಬೀಸುವ ಕಲ್ಲೇ ಅವರ ಪಾಲಿನ ಮನೆಯ ಲಕ್ಷ್ಮಿ.

*'ಕಮ್ಮನ ದೇವಿಯನ್ನು ಕುರಿತು:*
*ಅ(ಹ)ಣ್ಣು ಮಾರೂದು ಎಲ್ಲಿ?*
*ಕಾಯಿ ಮಾರೂದು ಎಲ್ಲಿ?*
*ತಾಯಿ ದೇವಮ್ಮನ ಗುಡಿಯ ಬಾಗಿಲ ಮುಂದೆ*
*ಧೂಪ ಮಾರೂದೆಲ್ಲಿ?'*

–ಎಂದು ದೇವಿಯ ಪೂಜಾ ಸೇವೆ ಮಾಡಲು ಬೇಕಾದ ಪರಿಕರಗಳಿಗಾಗಿ ಪರಿತಪಿಸುವ ಭಕ್ತರ ಮನ: ಸ್ಥಿತಿಯನ್ನು ಈ ಗೀತೆ ತಿಳಿಸುತ್ತದೆ.

*'ಸೂಜುಗಾರ ಸೂಜು ಮಲ್ಲಿಗೆ*
*ಮಂಡೆ ಮೇಲೆ ದುಂಡು ಮಲ್ಲಿಗೆ'*
*ಎಂದು ಹನುಮಂತರಾಯನನ್ನು ವರ್ಣಿಸುತ್ತಾರೆ.*
*ಒಂದೆಲೆ ಒಣಗೀತು, ಒಂದೆಲೆ ಚಿಗುರೀತು.*
*ಬಂದಲೆ ಹೋದ ಮಳೆರಾಯ*
*ಬಂದು ಹುಯ್ಯೋ ಜಡಿ ಮಳೆಯ'*

–ಎಂದು ಬೆಳೆಗೆ ಆಧಾರವಾದ ಮಳೆರಾಯನನ್ನು ಜನಪದರು ಬೇಡುತ್ತಾರೆ. ಮನೆಯಮ್ಮ (ಲಕ್ಷ್ಮೀದೇವಿ)ಯನ್ನು ಕುರಿತ ಹಾಡಿದು

*'ಹೂವಿನೊಳಗವಳೆ ಹೂವಿನೊಳಗೆ*
*ಮೊಬ್ಬಾದ ಪೂಜೆ ಮೊಗ್ಗಿನೊಳಗೆ'*
*'ಬಣ್ಣದ ಹುಲಿಯ ನೋಡ*
*ಚೆನ್ನಾದ ತೇರ ನೋಡ*
*ಚೆನ್ನಾದ ತೇರಡಿ ಮಲಗಿಕೋ*
*ಮುದ್ದಾದ ಮಾದೇವನ ನೋಡು'*

ಎಂಬುದಾಗಿ ಮಲೆಯ ಮಹದೇಶ್ವರನ ಭಕ್ತಿ ಗೀತೆಯನ್ನು ಇಂಪಾಗಿ ಹಾಡುತ್ತಾರೆ.

*'ಉತ್ತರ ಮಳೆ ಊದಿ*
*ಉತ್ತರಾಸ ಕೊಳ ತುಂಬಿ*
*ಉತ್ತರಾದ ಕೊಳಕೆ ನೀರಿಗೆ ಹೋಗಿ*
*ಉತ್ತರಾಸದಂಬು ಸೊಸೆ ಬೇಡ'*

–ಎಂದು ಉತ್ತರೆ ಮಳೆಯನ್ನು ಕುರಿತು ದೀರ್ಘವಾಗಿ ಹಾಡುತ್ತಾರೆ.

*'ಅವಳು ಮೂರೇ ಮಾತಿಗೆ*
*ಮುಗುಲೆದ್ದಳು ಚಾಮುಂಡಿ'*

–ಎಂದು ಚಾಮುಂಡೇಶ್ವರಿಯ ಗೀತೆಯನ್ನು ಹಾಡುತ್ತಾರೆ.

*'ನಂಜನ ಗೂಡಲಿ ನಮಗ್ಯಾರೋ ನಂಟರು*
*ನಂಜಪ್ಪ ಸ್ವಾಮಿ ಹಿರಿಯಣ್ಣ'*

ಎಂದು ನಂಜನಗೂಡಿನ ನಂಜುಂಡೇಶ್ವರನ ಬಗೆಗೆ ಹಾಡುವ ಹಾಡಿನಲ್ಲಿ ದೇವ–ಮಾನವನ ಮಧುರ ಬಾಂಧವ್ಯ, ಒಡಹುಟ್ಟಿನ ಕಲ್ಪನೆ ರಮ್ಯೋಜ್ವಲವಾಗಿದೆ.

ಶ್ರೀಮತಿ ನಾಗಮ್ಮನವರಿಗೆ ಸಂದ ಸನ್ಮಾನ: ಆದಿಚುಂಚನಗಿರಿ, ಸುತ್ತೂರು, ದಸರಾ ವಸ್ತು ಪ್ರದರ್ಶನ, ಮೈಸೂರು ಆಕಾಶವಾಣಿ, ಹಲಗೂರು, ಬೇಬಿಮಠ, ಚಿಕ್ಕ ಮಂಡ್ಯದ ಹಳ್ಳಿಕೇಶ್ವರ ದೇವಾಲಯ ಈ ಸ್ಥಳಗಳಲ್ಲಿ ಇವರ ಜನಪದ ಗೀತೆಗಾಯನವನ್ನು ಮೆಚ್ಚಿ ಸನ್ಮಾನಿಸಿದ್ದಾರೆ.

ಕಲ್ಕತ್ತಾದಲ್ಲಿ ಹಾಡಿದ್ದಕ್ಕೆ ಪ್ರಮಾಣ ಪತ್ರ, ನೆನಪಿನ ಕಾಣಿಕೆ ನೀಡಿದ್ದಾರೆ. ಆದಿಚುಂಚನಗಿರಿಯಲ್ಲಿ ಪ್ರಶಸ್ತಿಯೊಡನೆ 5000/ರೂ ನಗದು ನೀಡಿದ್ದಾರೆ. ಸರಕಾರದ ಧನ ಸಹಾಯ ದೊರೆಕಿಲ್ಲ.

ಶ್ರೀಮತಿ ಕೆಂಚಮ್ಮನವರು ನಾಗಮ್ಮನವರ ತಾಯಿ ಹಾಗೂ ಗುರು. ಕೆಂಚಮ್ಮನವರಿಗೆ ಎಪ್ಪತ್ತು (70) ವರ್ಷಗಳಾಗಿವೆ. ಇಬ್ಬರು ಗಂಡು ಮಕ್ಕಳಿದ್ದಾರೆ. ಇವರು ಮುಮ್ಮೇಳ ಹಾಡುಗಾರರು. ವಯೋಧರ್ಮಾನುಸಾರವಾಗಿ ಹೆಚ್ಚು ಹಾಡಿದರೆ ಉಬ್ಬಸ ಬರುತ್ತದಂತೆ ಆದ್ದರಿಂದ ಇತ್ತೀಚಿಗೆ ಹೆಚ್ಚು ಮುಮ್ಮೇಳಗಾರ್ತಿಯಾಗಿರದೆ ಹಿಮ್ಮೇಳ ಹಾಡುತ್ತಾರೆ. ಇವರು ಲಕ್ಷ್ಮೀಸಾಗರದವರು.

ಶ್ರೀಮತಿ ಭದ್ರಮ್ಮ ಕೃಷ್ಣೇಗೌಡರಿಗೆ ಅರವತ್ತು ವರ್ಷಗಳಾಗಿವೆ. ಒಬ್ಬಳು ಮಗಳಿದ್ದು ಒಂಬತ್ತನೇ ತರಗತಿವರೆಗೆ ವ್ಯಾಸಂಗ ಮಾಡಿದ್ದಾಳೆ. ಇವಳನ್ನು ಭದ್ರಮ್ಮ ತನ್ನ ಅಣ್ಣನ ಮಗನಿಗೆ ಕೊಟ್ಟು ಮನೆವಾಳ್ತನಕ್ಕೆ ಮದುವೆ ಮಾಡಿದ್ದಾರೆ. ಇವರು ಲಕ್ಷ್ಮೀಸಾಗರದವರು.

ಶ್ರೀಮತಿ ಹನುಮಮ್ಮ ಗಂಡನನ್ನು ಕಳೆದುಕೊಂಡಿದ್ದಾರೆ, ಅರವತ್ತೈದು ವರ್ಷವಾಗಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುತ್ತಿದ್ದಾರೆ. ಹನುಮಮ್ಮನವರ ತಂದೆ ದಿ| ಲಕ್ಷ್ಮೇಗೌಡ, ತಾಯಿ ದಿ| ಸಣ್ಣಮ್ಮ, ಹನುಮಮ್ಮನವರಿಗೆ 38 ವರ್ಷದ ಮಗ ಇದ್ದಾನೆ. ಮಗನಿಗೆ ಶ್ರೀ ಕುಮಾರ, ಶ್ರೀ ಹನುಮಂತ ಎಂಬ ಮಕ್ಕಳಿದ್ದಾರೆ.

ಶ್ರೀಮತಿ ಹನುಮಮ್ಮ ಅವರಿಗೆ 10 ಗುಂಟೆ ಖುಷ್ಕಿ ಜಮೀನಿದೆ. ಮಳೆಯಾದರೆ ಬೆಳೆ, ಇಲ್ಲದಿದ್ದರೆ ಜೀವನ ನಿರ್ವಹಣೆ ಕಷ್ಟ. ಜನಪದ ಗೀತೆಗಳನ್ನು ಹಾಡಿ ಬದುಕಬೇಕಿದೆ.

ಶ್ರೀಮತಿ ನಾಗಮ್ಮ ಅವರಿಗೆ ನಾಡು ಹೆಂಚಿನ ಎರಡು ಅಂಕಣದ ಮನೆ ಇದೆ. 2008ರಲ್ಲಿ ನಾಗಮ್ಮ ಅವರು ಹತ್ತು ಜನಕ್ಕೆ ಸೋಬಾನೆ ಪದಗಳನ್ನು ಕಲಿಸಿದ್ದಾರೆ. ಇವರಲ್ಲಿ ಏಳುಜನ ಹೆಣ್ಣು ಮಕ್ಕಳು, ಮೂರು ಜನ ಗಂಡು ಮಕ್ಕಳಿದ್ದಾರೆ. ಇವರಲ್ಲಿ ನಾಲ್ಕು ಜನ ಸುಂಕಾಕೊಣ್ಣೂರಿನವರು, ಮೈಸೂರು ಆಕಾಶವಾಣಿಯಲ್ಲಿ ಹಾಡುತ್ತಿದ್ದಾರೆ.

ಲಕ್ಷ್ಮೀ ಸಾಗರವು ಪಾಂಡವಪುರ ನಾಗಮಂಗಲ ರೋಡಿನಲ್ಲಿ ಪಾಂಡವ ಪುರದಿಂದ ಪಶ್ಚಿಮಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ.

❖


ಶ್ರೀ ಸ್ವಾಮಿಗೌಡ


ಶ್ರೀಮತಿ ಪುಟ್ಟಮ್ಮ


ಶ್ರೀಮತಿ ಶಿವಮ್ಮ

## (ಸೋಬಾನೆ)

ಕೆರೆತೊಣ್ಣೂರಿನ ಶ್ರೀ ಹನುಮೇಗೌಡ ಮತ್ತು ಶ್ರೀಮತಿ ಈರಮ್ಮ ಅವರ ಮಗ ಸ್ವಾಮಿಗೌಡ, ಇವರಿಗೆ ಈಗ ಅರವತ್ತೈದು ವರ್ಷ ವಯಸ್ಸಾಗಿದೆ. ಇವರನ್ನು ಸೋಬಾನೆ ಸ್ವಾಮಿಗೌಡ ಎಂದೇ ಕರೆಯುತ್ತಾರೆ.

ಶ್ರೀ ಸ್ವಾಮಿಗೌಡರು ಅನಕ್ಷರಸ್ಥರು, ಇವರಿಗೆ ವರಲಕ್ಷ್ಮಿ (18ವರ್ಷ) ಎಂಬ ಮಗಳಿದ್ದು, ಇವಳನ್ನು ಕೆರೆತೊಣ್ಣೂರಿನ ಪ್ರತೀಪ್‌ಗೆ ಕೊಟ್ಟು ವಿವಾಹ ಮಾಡಿದ್ದಾರೆ, ಎರಡು ಗಂಡು ಮಕ್ಕಳಿದ್ದು ಇವರನ್ನು ಸ್ವಾಮಿಗೌಡರು ವ್ಯವಸಾಯಕ್ಕೆ ಬಿಟ್ಟಿದ್ದಾರೆ.

ಸೋಬಾನೆ ಸ್ವಾಮಿಗೌಡರೊಡನೆ ಶ್ರೀಮತಿ ಸರೋಜಮ್ಮ, ಶ್ರೀಮತಿ ಪುಟ್ಟಮ್ಮ, ಶ್ರೀಮತಿ ಶಿವಮ್ಮ ಹಾಡುತ್ತಾರೆ, ಈ ನಾಲ್ವರದ್ದು ಒಂದು ತಂಡ. ಸ್ವಾಮಿಗೌಡರಿಗೆ ಅಕ್ಷರ ಜ್ಞಾನವಿಲ್ಲ. ಇವರ ತಂಡದವರೆಲ್ಲ ಒಕ್ಕಲಿಗರು, 40 ವರ್ಷಗಳಿಂದ ಹಾಡುತ್ತಿದ್ದಾರೆ.

ಶ್ರೀಸ್ವಾಮಿಗೌಡರ ತಂಡ ಕೇವಲ ಸೋಬಾನೆ ಪದಗಳನ್ನಲ್ಲದೇ ಜನಪದ ಗೀತೆಗಳನ್ನು ಇಂಪಾಗಿ ಹಾಡುತ್ತಾರೆ. ಈ ಗೀತೆಗಳೆಲ್ಲವೂ ದೇವರನ್ನು ಕುರಿತ ಭಕ್ತಿಗೀತೆಗಳಾಗಿವೆ.

1. ಚಲುವರಾಯ ಸ್ವಾಮಿ
2. ಶ್ರೀ ಭೈರವ
3. ಹನುಮಂತರಾಯ

4. ಕೆರೆತೊಣ್ಣೂರು ನಾರಾಯಣಸ್ವಾಮಿ (ನಂಬಿ ನಾರಾಯಣ)
5. ಚಾಮುಂಡೇಶ್ವರಿ
6. ನಂಜುಂಡೇಶ್ವರ
7. ಚೌಡಮ್ಮ
8. ಮಾದೇಶ್ವರ
9. ಕಮ್ಮನ ದೇವಮ್ಮ
10. ಆದಿಲಕ್ಷ್ಮಿ
11. ಉತ್ತರದೇವಿ
12. ತಿಂಗಳಮಾಮ
13. ನಾಟಿ ಪದಗಳು
14. ಮಳೆರಾಯ

ಶ್ರೀ ಸ್ವಾಮಿಗೌಡ ಮತ್ತು ಸರೋಜಮ್ಮ ಮುಮ್ಮೇಳ ಹಾಡಿದರೆ, ಶ್ರೀಮತಿ ಪುಟ್ಟಮ್ಮ ಮತ್ತು ಶ್ರೀಮತಿ ಶಿವಮ್ಮ ಹಿಮ್ಮೇಳ ಹಾಡುತ್ತಾರೆ. ಸರೋಜಮ್ಮ ಅವರಿಗೆ 60 ವರ್ಷಗಳೂ, ಪುಟ್ಟಮ್ಮ ಅವರಿಗೆ 65 ವರ್ಷಗಳೂ, ಶಿವಮ್ಮ ಅವರಿಗೆ 65 ವರ್ಷಗಳೂ ಆಗಿವೆ.

ಶ್ರೀಮತಿ ಪುಟ್ಟಮ್ಮ ಅವರಿಗೆ ಮೂರು ಗಂಡು ಮಕ್ಕಳು, ಇವರಲ್ಲಿ ಒಬ್ಬ ತೀರಿಕೊಂಡ, ಈಗಿರುವ ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬನಿಗೆ 38 ವರ್ಷ, ಮತ್ತೊಬ್ಬನಿಗೆ 30 ವರ್ಷಗಳಾಗಿವೆ.

ಶ್ರೀಮತಿ ಶಿವಮ್ಮನ ಯಜಮಾನರು ತೀರಿಕೊಂಡಿದ್ದಾರೆ. ಮೂವರು ಗಂಡು ಮಕ್ಕಳಿದ್ದು ಕೃಷಿಕರಾಗಿದ್ದಾರೆ.

ಇವರೆಲ್ಲರೂ ಹಾಡುವ ಹಾಡುಗಳ ಪದಗಳನ್ನು ಪರಿಚಯಿಸಿಕೊಳ್ಳುವುದು ವಿಹಿತವೆನಿಸುತ್ತದೆ.

1. 'ಇಂಬಿ ಹೂವಿನ್ಹಾಂಗೆ ತುಂಬಿತು ಮೇಲುಕೋಟೆ'
   ಎಂದು ಮೇಲುಕೋಟೆ ಚಲುವರಾಯ ಸ್ವಾಮಿಯನ್ನು ಕುರಿತು ಹಾಡುತ್ತಾರೆ.
2. 'ಬನ್ನಿ ಭೈರವ ಕೊನ್ನಿ ಪಾದಕೆ ನೀರ' ಭೈರವೇಶ್ವರನ ಕುರಿತು ಹಾಡುತ್ತಾರೆ.
3. 'ಹನುಮಯ್ಯ ಬರುವಾಗ
   ನೀರೆರಡು ಭಾಗವಾದೋ' ಎಂದು ಹನುಮಂತನ ಬಗೆಗೆ ಹಾಡುತ್ತಾರೆ.
4. 'ನಾರಾಯಣ ಹುಟ್ಟಲಾಗಿ
   ತೊಣ್ಣೂರ ಕಟ್ಟಲಾಗಿ' ನಂಬಿ ನಾರಾಯಣನ ಹಾಡು ಇದು.
5. 'ಕಾಲಲಿ ಕಿರುಗೆಜ್ಜೆ ಸೇರಿನ ಉಡುದಾರ' ಇದು ಚೌಡೇಶ್ವರಿಯ ಹಾಡು

6. 'ದಳವಾಯಿ ಕೆರೆಯಲ್ಲಿ ತಾನ ಮಾಡೋಳು
ಅವಳು ಯಾರೋ' ಇದು ನಂಜುಂಡೇಶ್ವರನ ಗೀತೆ
7. 'ಗುಡುನಾಡ ಗುಡಿಗೆ ಹೊರಟಾಳೆ ಚೌಡಮ್ಮ
ಗುಲಗಂಜಿ ಬಣ್ಣ! ನರಿಯೋಳೆ
ಕಲ್ಲಮ್ಯಾಲೆ ಕಾಲ ತೋಳಿಯೋಳೆ' ತ್ರಿಪದಿ ಚೌಡಮ್ಮನ ಗೀತೆ
8. 'ಹಾಲರಬಿ ಬಂದೋ ನೂಲೊಂದು ಹಾಲರಬಿ ಬಂದೊ' ಇದು ಮಾದಪ್ಪನ ಗೀತೆ
9. ಎಲ್ಲಿಗೆ ದೇವಮ್ಮ ನಿನ್ನ ದುರುಪಯಣ
ಹಿರಿಯ ತೊಣ್ಣೂರ ಮದಗಾರ ಏರಿ ಮ್ಯಾಲೆ' ಕಮ್ಮನ ದೇವಮ್ಮನ ಕುರಿತ ಗೀತೆ
10. ಕಲ್ಲು ಗುಡಿಯೋಳೆ ಬಿಲ್ಲು ಚಪ್ಪರದೋಳೆ
ಬೀದಿಗೆ ಎದುರಾಗಿ ನಿಲ್ಲೋಳೆ। ನಾವು ನೀರಿಗೆ
ಹೋದಾಗ ಕೈಯ ಮುಗಿದೇವು ನಿನಗೆ-ಈ ತ್ರಿಪದಿ ಆದಿಲಕ್ಷ್ಮಿ ಕುರಿತ ಗೀತೆ
11. 'ಉತ್ತರೆ ಮಳೆ ಊದಿ
ಉತ್ತರಾಜಿ ಕೊಳಕೆ
ನೀರಿಗೆ ಹೋದೋ' ಉತ್ತರ ದೇವಿಯನ್ನು ಕುರಿತ ಹಾಡಿದು.
12. ಬಾರಪ್ಪ ಬೆಳದಿಂಗಳೇ
ಬೆಳದಿಂಗಳ ಬೆಳಗಿನಲ್ಲಿ। ಉಚ್ಚೆಳ್ಳ
ಸಾಲೆಲ್ಲ ಸರಮುತ್ತಿನ ಕಿರುಗೆಜ್ಜೆ – ಮಳೆರಾಯನನ್ನು ಕುರಿತು ಹಾಡುತ್ತಾರೆ.
13. 'ಛತ್ರಿ ಹಿಡ್ಕೊಂಡು ಬಿತ್ರಿಯ ಕರಕೊಂಡು
ಪಟ್ಟಣದ ಹಾದಿಲಿ ಬರುವೋನೆ ಗದ್ದೆಗೌಡ' ಗದ್ದೆಯಲ್ಲಿ ನಾಟಿ ಮಾಡುವ ಹಾಡು
14. ಮಳೆರಾಯನನ್ನು ಕುರಿತು
'ಹುಯ್ಯೋ ಹುಯ್ಯೋ ಮಳೆರಾಯ
ಜಗ್ಗಿಸಿ ಹುಯ್ಯೋ ಮಳೆರಾಯ' ಸುಶ್ರಾವ್ಯವಾಗಿ ಹಾಡುತ್ತಾರೆ.

ಬೆಟ್ಟದ ಪಕ್ಕದ ಕಲ್ಲು ಭೂಮಿ ಶ್ರೀಮತಿ ಸರೋಜಮ್ಮ ಅವರಿಗೆ 20 ಗುಂಟೆ ಖುಷ್ಕಿ ಜಮೀನು, ಶ್ರೀಮತಿ ಶಿಮಮ್ಮ ಅವರಿಗೆ 30ಗುಂಟೆ ಖುಷ್ಕಿಭೂಮಿ, ಶ್ರೀಮತಿ ಪುಟ್ಟಮ್ಮ ಅವರಿಗೆ 20ಗುಂಟೆ ಖೂಷ್ಕಿ ಭೂಮಿ ಇದೆ. ಇವರೆಲ್ಲರೂ ಜೀವನ ನಡೆಸುವುದು ಕಷ್ಟ ಎನ್ನುತ್ತಾರೆ. ಸೋಬಾನೆ ಸ್ವಾಮಿಗೌಡರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಬರುತ್ತಿದೆ.

ಶ್ರೀಸ್ವಾಮಿಗೌಡರ ತಂಡದವರು ಹಾಡಿರುವ ಸ್ಥಳಗಳಿವು–ಮೇಲುಕೋಟೆ, ಚುಂಚನಗಿರಿ, ಚಿತ್ರದುರ್ಗ–ಕೋಟೆ, ಕುಣಿಗಲ್ ಮಠ, ಎಡೆಯೂರು ಸಿದ್ಧಲಿಂಗೇಶ್ವರ ದೇವಸ್ಥಾನ, ಹಂಪಿ ಉತ್ಸವ, ಬಳ್ಳಾರಿ, ಅಣ್ಣಮ್ಮದೇವಿ ಉತ್ಸವ–ಬೆಂಗಳೂರು, ಬೇಬಿಮಠ–ಪಾಂಡವಪುರ, ಸುತ್ತೂರುಮಠ, ಸಿದ್ಧಗಂಗೆ, ಶಿವಗಂಗೆ, ಕರಿಕಾಳಮ್ಮ–ಗುರುವಾಯೂರು, ಜಾನಪದ ಲೋಕ, ಜನಪದ ಜಾತ್ರೆ–ಬೆಂಗಳೂರು.

ಸೋನಿಯಾ ಹುಟ್ಟು ಹಬ್ಬಕ್ಕೆ ದೆಹಲಿಗೆ ಹೋಗಿ, ತಂಡದ ನಾಲ್ವರೂ ಹನ್ನೆರಡು ದಿನಗಳಿದ್ದು ಪ್ರತಿ ಸಂಜೆ ಹಾಡಿ, ತಲಾ ಎರಡು ಸಾವಿರದಂತೆ ಒಟ್ಟು ಎಂಟು ಸಾವಿರ ರೂಗಳನ್ನು ಸಂಭಾವನೆಯಾಗಿ ಪಡೆದಿದ್ದಾರೆ.

ಇವರೆಲ್ಲರೂ ಮೈಸೂರು, ಬೆಂಗಳೂರು, ಆಕಾಶವಾಣಿಯಲ್ಲಿ ಹಾಡುತ್ತಿದ್ದಾರೆ.

ಈ ತಂಡದ ನಾಯಕರಾದ ಶ್ರೀ ಸ್ವಾಮಿಗೌಡರಿಗೆ ಬೇಬಿಮಠ, ಅಂಕೇಗೌಡನ ಕೊಪ್ಪ, ಚಿತ್ರದುರ್ಗ, ಚಿನಕುರುಳಿ, ಮೈಸೂರು ಅರಮನೆ, ಕೆ.ಛತ್ರ–ಮಂಡಲ ಪಂಚಾಯಿತಿ, ಮಂಡ್ಯ ಕಲಾಮಂದಿರದಲ್ಲಿ ರಾಜ್ಯಮಟ್ಟದ ಸನ್ಮಾನ ಮಾಡಿದ್ದಾರೆ.

❖



## ಶ್ರೀಮತಿ ತಿಮ್ಮಮ್ಮ (ಜನಪದ ಗೀತೆ ಗಾಯಕಿ)

ಶೀಮತಿ ತಿಮ್ಮಮ್ಮನವರು ದಿವಂಗತ ದೊಡ್ಡವೆಂಕಟಯ್ಯನವರ ಧರ್ಮಪತ್ನಿ. ತಿಮ್ಮಮ್ಮನವರ ತಂದೆ ಶ್ರೀ ದಾಸಪ್ಪ, ತಾಯಿ ಸೋಮನಹಳ್ಳಿ ಲಕ್ಷಮ್ಮ- ನಾಗಮಂಗಲ ತಾಲ್ಲೂಕು.

ಶ್ರೀಮತಿ ತಿಮ್ಮಮ್ಮ ಅವರು ವಿವಾಹವಾಗಿದ್ದು ಪಾಂಡವಪುರದ ದಿವಂಗತ ದೊಡ್ಡ ವೆಂಕಟಯ್ಯನವರನ್ನು.

ತಿಮ್ಮಮ್ಮನವರು ದಿನಾಂಕ 5.2.1917ರಲ್ಲಿ ಜನಿಸಿದರು. ಈಗ ಇವರಿಗೆ 93 ವರ್ಷ ವಯಸ್ಸಾಗಿದೆ. ಹಿರಿಯ ಜನಪದ ಗೀತೆ ಗಾಯಕಿ. ಇವರು ಸುಮಾರು 85 ವರ್ಷಗಳಿಂದ ಸತತವಾಗಿ ಹಾಡುತ್ತಿದ್ದಾರೆ. ಇವರು ಹೆಚ್ಚಾಗಿ ಸೋಬಾನೆ ಪದಗಳನ್ನು ಹಾಡುತ್ತಾರೆ. ಇವರು ಹರಿಜನರು. ಇವರು ನಂಜನಗೂಡಿನ ನಂಜುಂಡೇಶ್ವರ, ಚಾಮುಂಡೇಶ್ವರಿ, ಧರೆಗೆ ದೊಡ್ಡವರು, ಬಸವಣ್ಣನವರ ಮೇಲೆ ಜನಪದ ಗೀತೆಗಳನ್ನು ಹಾಡುತ್ತಾರೆ. ಒಗಟು, ಗಾದೆಗಳನ್ನು ಹೇಳುತ್ತಾರೆ.

ತಿಮ್ಮಮ್ಮನವರು ಪ್ರಥಮವಾಗಿ ಪಾಂಡವಪುರದ ಕುಂತಿಬೆಟ್ಟದಲ್ಲಿ ಎಚ್.ಎಲ್. ನಾಗೇಗೌಡರ ಸಮ್ಮುಖದಲ್ಲಿ ಹಾಡಿದ್ದಾರೆ. ಕಾಳೇಗೌಡ ನಾಗವಾರ ಅವರ ಅಧ್ಯಕ್ಷತೆಯಲ್ಲಿ ನಂಜನಗೂಡಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಾಡಿದ್ದಾರೆ.

ಬೆಂಗಳೂರು ಆಕಾಶವಾಣಿಯಲ್ಲಿ ಶ್ರೀಮತಿ ತಿಮ್ಮಮ್ಮ ಹಾಡಿದ್ದಾರೆ. ಮೇಲುಕೋಟೆಯಲ್ಲಿ, ಪಾಂಡವಪುರ ರಕ್ಷಣಾ ವೇದಿಕೆಯಲ್ಲಿ ಇವರಿಗೆ ಸನ್ಮಾನ ಮಾಡಿದ್ದಾರೆ.

ಇವರಿಗೆ ಮೂವರು ಗಂಡು ಮಕ್ಕಳು, ಒಬ್ಬಳು ಮಗಳಿದ್ದಾಳೆ. ಮಗಳಿಗೆ ಸೋಬಾನೆ ಮೊದಲಾಗಿ ಜನಪದ ಗೀತೆಗಳನ್ನು ಕಲಿಸಿದ್ದಾರೆ. 2008ರಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದ್ದಾರೆ.

❖



## ಶ್ರೀಮತಿ ಹನುಮಮ್ಮ (ಸೋಬಾನೆ)

ಶ್ರೀಮತಿ ಹನುಮಮ್ಮನವರು ದಿವಂಗತ ಹನುಮಂತೇಗೌಡರ ಪತ್ನಿ. ಹನುಮಮ್ಮನವರ ತಂದೆ ಶ್ರೀ ಹನುಮೇಗೌಡ, ತಾಯಿ ನಿಂಗಮ್ಮ. ಹನುಮಮ್ಮನವರಿಗೆ ಸುಮಾರು ಎಪ್ಪತ್ತೈದು ವರ್ಷಗಳಾಗಿವೆ.

ಶ್ರೀಮತಿ ಹನುಮಮ್ಮನವರು ಒಕ್ಕಲಿಗರು. ಇವರು ಸುಮಾರು ಐವತ್ತು ವರ್ಷಗಳಿಂದಲೂ ಗ್ರಾಮಾಂತರ ಪ್ರದೇಶಗಳಲ್ಲಿ ಸೋಬಾನೆ ಪದಗಳನ್ನು ಹಾಡುತ್ತಿದ್ದಾರೆ. ಜನಪದ ಭಕ್ತಿ ಗೀತೆಗಳನ್ನು ಹಾಡುತ್ತಾರೆ.

ಹನುಮಮ್ಮನವರು ಬೆಂಗಳೂರು ಮತ್ತು ಮೈಸೂರು ಆಕಾಶವಾಣಿಗಳಲ್ಲಿ ಹಾಡಿದ್ದಾರೆ. ಬೀದರ್ ಜಿಲ್ಲೆಯಲ್ಲೂ ಹಾಡಿದ್ದಾರೆ.

ಹೊರರಾಜ್ಯಗಳಾದ ದೆಹಲಿ, ಉಜ್ಜನಿ ನಗರದಲ್ಲಿ ಇವರು ಕಾರ್ಯಕ್ರಮ ನೀಡಿರುತ್ತಾರೆ.

ಜಾನಪದ ಲೋಕದಲ್ಲಿ ನಾಗೇಗೌಡರ ಅಧ್ಯಕ್ಷತೆಯ ಕಾರ್ಯಕ್ರಮದಲ್ಲಿ ಹಾಡಿದ್ದಾರೆ. ಕುಂತಿಬೆಟ್ಟ, ಮೇಲುಕೋಟೆ, ಆದಿಚುಂಚನಗಿರಿಯಲ್ಲಿ ಹಾಡಿದ್ದಾರೆ.

2002ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ. ಇವರಿಗೆ ಪಾಂಡವಪುರದಲ್ಲಿ ಮತ್ತು ಸ್ವಂತ ಊರಾದ ಲಕ್ಷ್ಮೀಸಾಗರದಲ್ಲಿ ಸನ್ಮಾನ ಮಾಡಿದ್ದಾರೆ.

ಇವರು ನಾಡು ಹೆಂಚಿನ ಮನೆಯಲ್ಲಿ ಒಬ್ಬ ಮಗನೊಡನಿದ್ದಾರೆ.



## ಶ್ರೀ ಶಿವಣ್ಣ (ತಮಟೆ ಕಲಾವಿದ)

ಶ್ರೀ ಕಾಳಯ್ಯ ಮತ್ತು ಶ್ರೀಮತಿ ವೆಂಕಟಮ್ಮ ಅವರ ಪುತ್ರ ಶ್ರೀ ಶಿವಣ್ಣ. ಇವರಿಗೆ 60 ವರ್ಷ ವಯಸ್ಸಾಗಿದೆ. ಚರ್ಮ ವಾದ್ಯವಾದ ತಮಟೆಯ ಉತ್ತಮ ಕಲಾವಿದ.

ಈ ಕಲಾವಿದ ಗ್ರಾಮಾಂತರ ಪ್ರದೇಶಗಳಲ್ಲಿ ತಮಟೆ ವಾದನದಿಂದ ಹೆಸರು ಗಳಿಸಿದ ಅನಂತರ ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರಗಳಲ್ಲಿ ತಮಟೆಯನ್ನು ಬಾರಿಸುವುದರಿಂದ ಹೆಸರು ಗಳಿಸಿದರು.

ರಾಷ್ಟ್ರೀಯ ಹಬ್ಬಗಳ ಕಾರ್ಯಕ್ರಮ, ಮೈಸೂರಿನ ದಸರಾ ಮೆರವಣಿಗೆ, ಮಡಿಕೇರಿಯ ದಸರಾ ಉತ್ಸವ, ಬೆಂಗಳೂರಿನ ದೂರದರ್ಶನದಲ್ಲಿ ತಮಟೆ ಬಾರಿಸಿ ಜನತೆಯ ಮೆಚ್ಚುಗೆ ಪಡೆದಿದ್ದಾರೆ.

ಹೊರರಾಜ್ಯಗಳಾದ ತಂಜಾವೂರು, ಭೂಪಾಲ್, ಮಹಾರಾಷ್ಟ್ರ ಮೊದಲಾದ ರಾಜ್ಯಗಳಲ್ಲಿ ತಮಟೆ ಕಲಾಪ್ರದರ್ಶನ ಮಾಡಿ ಹಲವಾರು ಪ್ರಶಸ್ತಿ ಪತ್ರಗಳನ್ನೂ ಬಹುಮಾನಗಳನ್ನೂ ಪಡೆದಿದ್ದಾರೆ.

ಶ್ರೀ ಶಿವಣ್ಣನವರು ಸರಕಾರದಿಂದ ಕಲಾವಿದರ ಮಾಸಾಶನವನ್ನು ಪಡೆಯುತ್ತಿದ್ದಾರೆ. ಶ್ರೀ ಶಿವಣ್ಣನವರ ಪತ್ನಿ ಶ್ರೀಮತಿ ನಾಚೀರಮ್ಮ – ಇವರಿಗೆ ಮೂರು ಗಂಡು ಮಕ್ಕಳು ಮತ್ತು ಮೂರು ಹೆಣ್ಣು ಮಕ್ಕಳಿದ್ದಾರೆ.

ಗರೀಬಿ ಸೈಟಿನ ಮನೆಯಲ್ಲಿ ಸುಂಕಾ ತೊಣ್ಣೂರಿನಲ್ಲಿ ವಾಸಿಸುತ್ತಿದ್ದಾರೆ.



## ಶ್ರೀಮತಿ ತಾಯಮ್ಮ (ಜನಪದ ಗೀತೆ, ಸೋಬಾನೆ ಪದ)

ಪಾಂಡವಪುರ ತಾಲ್ಲೂಕಿನ ಲಕ್ಷ್ಮೀ ಸಾಗರದ ಒಕ್ಕಲಿಗ ಜನಾಂಗದ 65 ವರ್ಷಗಳ ಶ್ರೀಮತಿ ತಾಯಮ್ಮನು ಗಂಡ ಮುಕುಂದೇಗೌಡನನ್ನು ಕಳೆದುಕೊಂಡಿದ್ದಾಳೆ.

ಒಂದು ಎಕರೆ ಗದ್ದೆ, ಅರ್ಧ ಎಕರೆ ಹೊಲವಿದೆ. ಇವರಿಗೆ 35 ವರ್ಷದ ಹನುಮಂತೇಗೌಡ, 25 ವರ್ಷದ ಅರುಣ್ ಕುಮಾರ್, 23 ವರ್ಷಧ ಸೌಭಾಗ್ಯ ಮಕ್ಕಳಿದ್ದಾರೆ. ಎಲ್ಲರೂ ವ್ಯವಸಾಯ ಮಾಡುತ್ತಾರೆ.

ಶ್ರೀಮತಿ ತಾಯಮ್ಮ ಅವರು 35 ವರ್ಷಗಳಿಂದಲೂ ಹಾಡುತ್ತಿದ್ದಾರೆ. ಇವರ ಗುರುಗಳು ಲಕ್ಷ್ಮೀಸಾಗರದ ಸೋಬಾನೆ ಕೃಷ್ಣೇಗೌಡರು. ತಾಯಮ್ಮನವರು ಸೋಬಾನೆ ಪದಗಳಲ್ಲದೆ ಕುಂಬಳದೇವಿ ಮೇಲಿನ ಪದ, ನಾರಾಯಣಸ್ವಾಮಿ, ಮಾದೇಶ್ವರನ ಭಕ್ತಿ ಗೀತೆಗಳನ್ನು ಹಾಡುತ್ತಾರೆ.

ಕುಂತಿ ಬೆಟ್ಟ, ಮೈಸೂರು ದಸರಾ, ಚುಂಚನಗಿರಿ, ಬೆಂಗಳೂರು ಮತ್ತು ಮೈಸೂರು ಆಕಾಶವಾಣಿ, ದೂರದರ್ಶನ, ಹುಬ್ಬಳ್ಳಿ, ದೆಹಲಿ, ಬೀದರ್, ಉಜ್ಜನಿ ಮೊದಲಾದ ಕಡೆ ಹಾಡಿ ಮೆಚ್ಚುಗೆ ಪಡೆದಿದ್ದಾರೆ.

ಇದುವರೆಗೆ ಎಲ್ಲಿಯೂ ಸನ್ಮಾನ ನಡೆದಿಲ್ಲ. ಇವರು 6 ಜನಕ್ಕೆ ಹಾಡುವ ತರಬೇತಿ ನೀಡಿದ್ದಾರೆ. ಇವರಿಗೆ ಮಾಸಾಶನ ಬರುತ್ತಿದೆ.



## ಶ್ರೀಮತಿ ಜಯಮ್ಮ (ಸೋಬಾನೆ)

ಪಾಂಡವಪುರ ತಾಲ್ಲೂಕಿನ ಲಕ್ಷ್ಮೀಸಾಗರದ 65 ವರ್ಷಗಳ ಶ್ರೀಮತಿ ಜಯಮ್ಮ ಅವಿದ್ಯಾವಂತೆ, ಪತಿ ಕೃಷ್ಣೇಗೌಡ ಗತಿಸಿದ್ದಾರೆ; ಇವರು ಒಕ್ಕಲಿಗರು.

35 ವರ್ಷಗಳ ರಘು 7ನೇ ತರಗತಿವರೆಗೂ 25 ವರ್ಷಗಳ ಗೋಪಾಲ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿರುವ ಇಬ್ಬರು ಮಕ್ಕಳು ಜಯಮ್ಮ ಅವರಿಗೆ ಇದ್ದಾರೆ.

ಜಮೀನು ಇಲ್ಲ. ಕೂಲಿ ಕಾರ್ಮಿಕರಾಗಿದ್ದಾರೆ. ಸೋಬಾನೆ ಕೃಷ್ಣೇಗೌಡ ಮತ್ತು ಕೆಂಚಮ್ಮ ಜಯಮ್ಮನವರ ಗುರುಗಳು.

ತಮ್ಮ ಗುರುಗಳಿಂದ ಜಯಮ್ಮ ಅವರು ಸೋಬಾನೆ ಪದ ಮತ್ತು ಜನಪದ ಗೀತೆಗಳನ್ನು ಕಲಿತು ಹಾಡುತ್ತಿದ್ದಾರೆ.

ಸೋಬಾನೆ ಪದ, ಭೈರವ, ಬೀಸುವ ಕಲ್ಲಿನ ಪದ, ಭೂಮಿತಾಯಿ ಪದ, ಮಳೆರಾಯನ ಪದ, ಬೀಗರ ಜರಿಯೋ ಪದ, ಚಲುವರಾಯ ಸ್ವಾಮಿ, ಚಾಮುಂಡೇಶ್ವರಿ ನಂಜುಂಡೇಶ್ವರ, ಮಾದೇಶ್ವರ, ಬಸವಣ್ಣನ ಪದಗಳನ್ನು ಹಾಡುತ್ತಾರೆ.

ಶ್ರೀಮತಿ ಜಯಮ್ಮ ಅವರು ತಾವು ಕಲಿತಿರುವ ಹಾಡುಗಳನ್ನು ಭದ್ರಮ್ಮ, ಹನುಮಮ್ಮ, ಪುಟ್ಟ ಚನ್ನಮ್ಮ, ಜಯಮ್ಮ, ಪ್ರಮೀಳ, ಜಯಲಕ್ಷ್ಮಿ, ಸುನಂದ,

ಮಹದೇವಮ್ಮ, ಬೆಟ್ಟಮ್ಮ, ಬೋರಮ್ಮ, ದೊಡ್ಡಗೌರಿ, ಕೆಂಚಮ್ಮ, ಸಾಕಮ್ಮ – ಇವರಿಗೆ ಗುರುವಾಗಿ ಕಲಿಸಿದ್ದಾರೆ.

ಮೈಸೂರು ಆಕಾಶವಾಣಿ, ಜಾನಪದ ಜಾತ್ರೆ, ಬೆಂಗಳೂರಿನಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇವರು ಹದಿಮೂರು ಜನರ ಒಂದು ತಂಡವನ್ನು ಕಟ್ಟಿದ್ದಾರೆ, ಹಾಡುತ್ತಿದ್ದಾರೆ.

ಚುಂಚನಗಿರಿ, ಸುತ್ತೂರು, ಮೇಲುಕೋಟೆ, ಬೇಬಿ, ಮಂಡ್ಯದ ಕಲಾಮಂದಿರ, ಕೆ.ಆರ್. ಪೇಟೆ, ಅಕ್ಕಿ ಹೆಬ್ಬಾಳು – ಮೊದಲಾದ ಸ್ಥಳಗಳಲ್ಲಿ ಶ್ರೀಮತಿ ಜಯಮ್ಮ ಅವರನ್ನು ಸನ್ಮಾನಿಸಿದ್ದಾರೆ.

❖



## ಶ್ರೀಮತಿ ಸಾಕಮ್ಮ (ಜನಪದ ಗೀತೆ ಗಾಯಕಿ)

ಕೃಷ್ಣರಾಜ ಪೇಟೆಯ ಬೋಳಮಾರನ ಹಳ್ಳಿಯ ದಿವಂಗತ ಯಜಮಾನ್ ಶಂಭೂಗೌಡರ ಧರ್ಮ ಪತ್ನಿ, ಇವರಿಗೆ ಸುಮಾರು 76 ವರ್ಷಗಳಾಗಿವೆ. ಯಜಮಾನರು ತೀರಿಕೊಂಡ ಮೇಲೂ ಧೃತಿಗೆಡದೆ ಜೀವನದಲ್ಲಿ ವಿದ್ಯೆ ಕಲಿಯದಿದ್ದರೂ ಕಲಿತ ಜನಪದ ಗೀತೆಗಳನ್ನು ಸಭೆ – ಸಮಾರಂಭಗಳಲ್ಲಿ, ದೈವ ಸನ್ನಿಧಿಯಲ್ಲಿ ಹಾಡುತ್ತಾ ಬದುಕಿನಲ್ಲಿ ನವ ಚೈತನ್ಯವನ್ನು ಪಡೆಯುತ್ತಾ ಉತ್ಸಾಹದಿಂದ ಸಜ್ಜನಿಕೆಯ ಸಾಕಾರ ಮೂರ್ತಿಯಾಗಿ, ಒಬ್ಬ ಮಗ, ಒಬ್ಬ ಮಗಳನ್ನು ಚೆನ್ನಾಗಿ ಸಾಕಿ ಮದುವೆ ಮಾಡಿ ಮೊಮ್ಮಕ್ಕಳೊಂದಿಗೆ ನೆಮ್ಮದಿಯ ಬಾಳನ್ನು ನಡೆಸುತ್ತಿದ್ದಾಳೆ.

ಸಾಕಮ್ಮ ಕೇವಲ ಜನಪದ ಗೀತೆ ಗಾಯಕಿಯಲ್ಲ, ವ್ಯಾವಹಾರಿಕವಾಗಿ ಚತುರೆ – ಸಣ್ಣ ಅಂಗಡಿಯನ್ನಿಟ್ಟು ಕೊಂಡು ಆರ್ಥಿಕವಾಗಿ ಸುಧಾರಣೆಗೊಂಡು ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ.

ಶ್ರೀಮತಿ ಸಾಕಮ್ಮನವರನ್ನು ನೋಡಿದ ಯಾರಿಗಾದರೂ ಈಕೆ ದಿಟ್ಟ ಮಹಿಳೆ ಎನ್ನಿಸದಿರದು. ದೃಢ ಕಾಯದಲ್ಲಿ ದೃಡ ಮನೋಭಾವ ತುಂಬಿರುವುದನ್ನು ಅವರನ್ನು ಸಂದರ್ಶಿಸಿದವರಿಗೆ ಅರಿವಾಗುತ್ತದೆ.

ಸಾಕಮ್ಮನವರು ತಿಳಿದಿರುವ ಜನಪದ ಸಾಹಿತ್ಯ ಪ್ರಕಾರಗಳು 1. ಸೋಬಾನೆ ಪದ 2. ಬೀಸೋ ಕಲ್ಲಿನ ಪದ 3. ಬೀಗರ ಪದ 4. ಹಸೆ ಹಾಡುಗಳು 5. ಅರಿಸಿನ ನೀರು ಹಾಕುವಾಗ ಮದುವೆಯಲ್ಲಿ ಹಾಡುವ ಹಾಡುಗಳು 6. ಮಂಗಳಾರತಿ ಹಾಡು 7. ಭಜನೆ 8. ದೇವರ ಮೇಲಿನ ಭಕ್ತಿಗೀತೆಗಳು – ಮೊದಲಾದ ಗೀತೆಗಳನ್ನು ನಾದ ಮಾಧುರ್ಯದಿಂದ ಹಾಡುತ್ತಾರೆ.

ಜನಪದ ಭಾಷಿಕ ವರ್ಗದಲ್ಲಿ ಬರುವ ಗಾದೆ, ಒಗಟುಗಳನ್ನು ಹೇಳುತ್ತಾರೆ ಸಾಕಮ್ಮ. ಮದ್ದೂರಿನಲ್ಲಿ ನಡೆದ ಒಗಟು ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮಸ್ಥಾನ ಪಡೆದುದಕ್ಕೆ ಪ್ರಶಸ್ತಿ ಪತ್ರವನ್ನು ಪಡೆದಿದ್ದಾರೆ.

ದೇವರುಗಳ ಬಗೆಗೆ ಕಥೆಗಳನ್ನು ಹೇಳುವುದರಲ್ಲೂ ಸಾಕಮ್ಮನವರು ಎತ್ತಿದಕೈ. ಸಾಕಮ್ಮನವರು ವಿವಿಧ ಜನಾಂಗದ ಪುರುಷ ಮತ್ತು ಮಹಿಳೆಯನ್ನು ಸೇರಿಸಿ ಒಂದು ತಂಡವನ್ನು ಕಟ್ಟಿದ್ದಾರೆ– ಆಹ್ವಾನದ ಮೇರೆಗೆ ಹೋಗಿ ಹಾಡುತ್ತಾರೆ. ತನ್ನ ಊರಿನ ರಂಗದ ಕುಣಿತದವರನ್ನು ಬೇರೆ ಬೇರೆ ಊರುಗಳಿಗೆ ಕರೆದುಕೊಂಡು ಹೋಗಿ ಪ್ರದರ್ಶನದ ವ್ಯವಸ್ಥೆ ಮಾಡುತ್ತಾರೆ. ಜನಪದ ಕಲಾವಿದರು, ಗೀತೆ ಗಾಯಕರೆಂದರೆ ಹೆಚ್ಚು ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ.

ಶ್ರೀಮತಿ ಸಾಕಮ್ಮನವರ ತಂಡದಲ್ಲಿ – ನರಸಮ್ಮ, ನಂಜಮ್ಮ, ಸಾವಿತ್ರಮ್ಮ, ಪಾಪಮ್ಮ, ಕಾವೇರಮ್ಮ, ಕಾಳಮ್ಮ, ಸೋಮಮ್ಮ, ಸಣ್ಣ ತಾಯಮ್ಮ ಇದ್ದಾರೆ.

ಸಾಕಮ್ಮನವರಿಗೆ ಮಾಸಾಶನ ಬರುತ್ತಿದೆ. ಜನಪದ ಕಲಾವಿದರೆಲ್ಲರೂ, ಗಾಯಕ – ಗಾಯಕಿ ಎಲ್ಲರೂ ಚೆನ್ನಾಗಿ ಬಾಳಬೇಕೆಂಬ ಬಯಕೆವುಳ್ಳ ವಿಶಾಲ ಮನಸ್ಸಿನವರು.



## ಶ್ರೀ ಅಂಗಡಿ ಜಯರಾಮ್ (ರಂಗದ ಕುಣಿತ)

ಮದ್ದೂರು ತಾಲ್ಲೂಕು ಗೌಡಯ್ಯನದೊಡ್ಡಿಯ ಶ್ರೀ ಚಿಕ್ಕಪುಟ್ಟೇಗೌಡರ ಮಗ ಶ್ರೀ ಜಯರಾಮ್ ಅವರಿಗೆ 52 ವರ್ಷಗಳಾಗಿವೆ; ಅವಿದ್ಯಾವಂತರು. ಇವರಿಗೆ 20 ಗುಂಟೆ ತರಿ ಜಮೀನಿದೆ. ಇವರ ಮಡದಿ ಶ್ರೀಮತಿ ರತ್ನಮ್ಮ ಅವರೂ ಅವಿದ್ಯಾವಂತರೇ.

ಜಯರಾಮ್ – ರತ್ನಮ್ಮ ದಂಪತಿಗಳಿಗೆ ಮೂವರು ಗಂಡು ಮಕ್ಕಳಿದ್ದಾರೆ ಮೊದಲ ಮಗ ಎಂ.ಎಸ್ಸಿ ಸ್ನಾತಕೋತ್ತರ ಪದವಿಯನ್ನು ಎರಡನೆಯ ಮಗ ಡಿಪ್ಲೋಮಾ, ಮೂರನೆಯ ಮಗ ಬಿ.ಎ. ಪದವಿ ಪಡೆದಿದ್ದಾರೆ.

ಜಯರಾಮ್ ಅವರು ಚಿಕ್ಕಂದಿನಿಂದಲೂ ರಂಗದ ಕುಣಿತವನ್ನು ಮಾಡುತ್ತಿದ್ದಾರೆ. ಇವರು ಜನಪದ ಗೀತೆ ಗಾಯಕರೂ ಹೌದು – ಮಹದೇಶ್ವರ, ಮಾರಮ್ಮ ಇವರ ಮೇಲೆ ಹಾಡುಗಳನ್ನು ಹಾಡುತ್ತಾರೆ; ಭಜನೆಯನ್ನು ಮಾಡುತ್ತಾರೆ. ಶಂಕರಾನಂದ ತತ್ವಪದಗಳನ್ನು ಹಾಡುತ್ತಾರೆ.



## ಶ್ರೀನಿವಾಸಪ್ಪ ಸ್ವಾಮೀಜಿ (ತತ್ತ್ವಪದ ಗಾಯಕ)

ಮದ್ದೂರು ತಾಲ್ಲೂಕು ಅರೆತಿಪ್ಪೂರಿನ ಶ್ರೀನಿವಾಸಪ್ಪ ಅವರು ಅರೆತಿಪ್ಪೂರು ಶ್ರೀಸಿದ್ಧಾರೂಢಸ್ವಾಮಿ ಮಠದಲ್ಲಿದ್ದಾರೆ. ಇವರಿಗೆ 70 ವರ್ಷಗಳಾಗಿವೆ. 3ನೇ ತರಗತಿಯವರೆಗೆ ಓದಿದ್ದಾರೆ. ಇವರ ಮಡದಿ ಶ್ರೀಮತಿ ಪುಟ್ಟಚೆನ್ನಮ್ಮ. ಈ ದಂಪತಿಗಳಿಗೆ 3ಗಂಡು ಮಕ್ಕಳಲ್ಲಿ ಮೊದಲನೆಯ ಮಗ ಎಂ.ಎಸ್.ಡಬ್ಲ್ಯು, ಎರಡನೇ ಮಗ ಬಿ.ಎ; ಮೂರನೆಯ ಮಗ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿದ್ದಾರೆ.

ಶ್ರೀನಿವಾಸಪ್ಪ ಅವರು ನಿಜಗುಣ ಶಿವಯೋಗಿ, ಮಹಾಲಿಂಗರಂಗ, ಶಿವರಾಮಶಾಸ್ತ್ರಿಗಳ–ಅಮನಸ್ಕರಾಜಯೋಗ ಮತ್ತು ಶಿಶುನಾಳಶರೀಫರ ಅಪರಾಧಸ್ತೋತ್ರಗಳಿಂದ ತತ್ತ್ವಪದಗಳನ್ನು ಹಾಡುತ್ತಾರೆ.



## ಶ್ರೀಮತಿ ಗಿರಿಯಮ್ಮ (ಜನಪದ ಗೀತೆ ಗಾಯಕಿ)

ನಾಗಮಂಗಲ ತಾಲ್ಲೂಕಿನ ಚುಂಚನಹಳ್ಳಿ ಪಾಳ್ಯದ ಗಿರಿಯಮ್ಮನವರಿಗೆ ಸುಮಾರು ಎಪ್ಪತ್ತೈದು ವರ್ಷಗಳ ಮೇಲಾಗಿವೆ. ಪ್ರೌಢಶಾಲೆಯವರೆಗೆ ವ್ಯಾಸಂಗ ಮಾಡಿದ್ದಾರೆ.

ರಾಗಿ ಬೀಸುವ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಇವರ ಕಂಠದಿಂದ ಹೊರಡುವ ಗೀತೆಗಳ ನಾದಲಹರಿ ಕಿವಿಗೆ ಬಿದ್ದಾಗ ಗಿರಿಯಮ್ಮನವರೇ ಹಾಡುತ್ತಿದ್ದಾರೆಂದು ಖಚಿತವಾಗಿ ಹೇಳಬಹುದು. ಅಷ್ಟರ ಮಟ್ಟಿಗೆ ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡಿದ್ದಾರೆ.

1939ರಿಂದಲೂ ಆದಿ ಚುಂಚನಗಿರಿಯಲ್ಲಿ ಪ್ರತಿವರ್ಷ ನಡೆಯುವ ಜನಪದ ಗೀತೆ ಗಾಯನದಲ್ಲಿ ಗಿರಿಯಮ್ಮನವರಿಗೆ ಬಹುಮಾನ ಖಚಿತವಾಗಿ ದೊರೆಯುತ್ತಿದೆ.

ಶ್ರೀಮತಿ ಗಿರಿಯಮ್ಮನವರು ಮದುವೆಪದ, ಬೀಸೋಪದ, ಅಣ್ಣ–ತಂಗಿ, ಅತ್ತಿಗೆ–ನಾದುನಿ, ಅಕ್ಕ–ತಂಗಿ, ತಾಯಿ–ತವರು, ನಂಜುಂಡೇಶ್ವರ, ಚುಂಚನಗಿರಿಯ ಭೈರವ, ತಿರುಪತಿ ತಿಮ್ಮಪ್ಪ, ಮುತ್ತಿನ ಶೆಟ್ಟಿ, ದೂರಿಪದ, ಮಳೆರಾಯ, ಮಾಳಮ್ಮ ಬಂಜೆ ಹೊನ್ನಮ್ಮ. ನಾಟಿಪದ ಮೊದಲಾದ ಜನಪದ ಗೀತೆಗಳನ್ನು ಹಾಡುತ್ತಾರೆ. ಇವರು ಬೆಂಗಳೂರು ಆಕಾಶವಾಣಿ, ದೂರದರ್ಶನ ಕೇಂದ್ರದಲ್ಲಿ ಗೀತೆಗಳನ್ನು ಹಾಡಿದ್ದಾರೆ. 'ಸೋಬಾನೆ ಚಿಕ್ಕಮ್ಮ'ನ ಪ್ರಶಸ್ತಿ ಇವರಿಗೆ ಪ್ರಾಪ್ತಿಸಿದೆ. 1999ರಲ್ಲಿ ಮಂಡ್ಯಜಿಲ್ಲಾ ಜನಪದ ಕಲಾವಿದರ ಸಮಾವೇಶದಲ್ಲಿ ಇವರನ್ನು ಸನ್ಮಾನಿಸಿದ್ದಾರೆ.

❖



## ಶ್ರೀಮತಿ ಮರಿಅರಸಮ್ಮ (ಸೋಬಾನೆ, ಜನಪದ ಗೀತೆ ಗಾಯಕಿ)

ನಾಗಮಂಗಲ ತಾಲ್ಲೂಕಿನ ಕಾಡಅಂಕನಹಳ್ಳಿಯ ಶ್ರೀಮತಿ ಮರಿಅರಸಮ್ಮ ಒಕ್ಕಲಿಗರು, ಪತಿ ವೆಂಕಟೇಗೌಡ. ಮರಿಅರಸಮ್ಮ ಅವರಿಗೆ ಎಪ್ಪತ್ತೈದು ವರ್ಷಗಳ (75) ಮೇಲಾಗಿದೆ. ಮರಿಅರಸಮ್ಮ ಮತ್ತು ವೆಂಕಟೇಗೌಡರಿಗೆ 45 ವರ್ಷದ ತಿಮ್ಮಪ್ಪ, 40 ವರ್ಷದ ವೆಂಕಟಲಕ್ಷ್ಮಿ, 35 ವರ್ಷದ ಜಯರಾಮ, 25 ವರ್ಷದ ಮಂಗಮ್ಮ ಮಕ್ಕಳಿದ್ದಾರೆ.

ಇವರಿಗೆ ಅರ್ಧ ಎಕರೆ ಹೊಲ. ಅರ್ಧ ಎಕರೆ ಗದ್ದೆ ಇದೆ. ಇವರು ನಲವತ್ತು (40) ವರ್ಷಗಳಿಂದಲೂ ಜನಪದ ಗೀತೆ ಮತ್ತು ಸೋಬಾನೆ ಪದಗಳನ್ನು ಹಾಡುತ್ತಿದ್ದಾರೆ.

ಬೆಂಗಳೂರು ಮತ್ತು ಮೈಸೂರು ಆಕಾಶವಾಣಿಯಲ್ಲಿ ಜನಪದ ಗೀತೆಗಳನ್ನು ಹಾಡಿದ್ದಾರೆ.

ಚುಂಚನಗಿರಿ, ಎಡೆಯೂರು, ತುಮಕೂರು–ಮಹಿಳಾ ಸಮ್ಮೇಳನ, ಮದ್ದೂರು, ಹನುಮಂತನಗರ–ಕಲಾಮೇಳ, ಮಧುಗಿರಿಯಲ್ಲಿ ಸೋಬಾನೆ ಪದ ಹಾಡಿದ್ದಾರೆ.

ಮರಿ ಅರಸಮ್ಮ ಅವರ ಹಾಡುಗಾರಿಕೆಯನ್ನು ಮೆಚ್ಚಿ ಚುಂಚನಗಿರಿ, ಮದ್ದೂರಿನಲ್ಲಿ ಸನ್ಮಾನಿಸಿದ್ದಾರೆ.

ರಾಜ್ಯೋತ್ಸವ ಮತ್ತು ಜಾನಪದ ಲೋಕದ ಪ್ರಶಸ್ತಿ ಪಡೆದಿದ್ದಾರೆ.

ಬೆಂಗಳೂರಿನ ದೇವಾಂಗ ಮಹಿಳಾ ಸಂಘದಲ್ಲಿ 12 ಜನಕ್ಕೆ ಮತ್ತು ಸ್ವಗ್ರಾಮವಾದ ಕಾಡಅಂಕನ ಹಳ್ಳಿಯಲ್ಲಿ ಸೋಬಾನೆ, ಜನಪದ ಗೀತೆಗಳನ್ನು ಹಾಡುವ ಬಗೆಗೆ ತರಬೇತಿ ನೀಡಿದ್ದಾರೆ.

❖





## ಶ್ರೀ ಸ್ವಾಮಿ (ನೀಲಗಾರರ ಪದ)

ಶ್ರೀರಂಗಪಟ್ಟಣ ತಾಲ್ಲೂಕಿನ ಎಂ.ಶೆಟ್ಟಿಹಳ್ಳಿಯ ಶ್ರೀ ಸಿದ್ದಯ್ಯ ಮತ್ತು ಶ್ರೀಮತಿ ಸಣ್ಣತಾಯಮ್ಮ ದಂಪತಿಗಳ ಪುತ್ರ ಶ್ರೀ ಸ್ವಾಮಿ ಅವರು. ಇವರು ಹರಿಜನರು. ಶ್ರೀಮತಿ ಜಯಮ್ಮ ಇವರ ಮಡದಿ. ಸ್ವಾಮಿ ಮತ್ತು ಜಯಮ್ಮ ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಸ್ವಾಮಿ 5ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಇವರಿಗೆ ಈಗ 53 (ಐವತ್ತ ಮೂರು) ವರ್ಷಗಳಾಗಿವೆ.

ಶ್ರೀ ಸ್ವಾಮಿ ಅವರು ನಾಲ್ಕು ತಂತಿಯ ತಂಬೂರಿ ನುಡಿಸುತ್ತಾ ಹಾಡುತ್ತಾರೆ. ಎರಡು ಬೆರಳುಗಳಿಗೆ ಗಗ್ಗರ ಹಾಕಿಕೊಂಡ ಒಬ್ಬ ತಂಬೂರಿ ವಾದ್ಯ ನುಡಿಸಿದರೆ, ಸಮುದ್ರದ ಕಪ್ಪೆ ಚರ್ಮ ಹಾಕಿ ತಯಾರಿಸಿದ ಡಕ್ಕೆಯನ್ನು ಕೈಲಿಟ್ಟುಕೊಂಡು ಒಬ್ಬ ನುಡಿಸಿದರೆ, ಉಡಿನ ಚರ್ಮದಿಂದ ತಯಾರಿಸಿದ ದಂಬಡಿಯನ್ನು, ಮತ್ತೊಬ್ಬ ತಾಳವನ್ನು ನುಡಿಸುತ್ತಾ ಇಂಪಾಗಿ ಹಾಡುತ್ತಾರೆ. ನಾಲ್ಕುತಂತಿಯ ತಂಬೂರಿಯನ್ನು ಹಿಡಿದು ತಾಳ ಹಾಕುತ್ತಾ ಏಕಾಂಗಿಯಾಗಿಯೂ ಹಾಡುತ್ತಾರೆ.

ಮಂಟೇಸ್ವಾಮಿ ಕಾವ್ಯದಿಂದ ಮಡಿವಾಳ ಮಾಚಪ್ಪನ ಸಾಲನ್ನು ಹಾಡುತ್ತಾರೆ. ಬಿಳಿಗಿರಿರಂಗ, ಜೋಗಿ–ಅರ್ಜುನ, ಚುಂಚನಗಿರಿ ಭೈರವ, ಚಾಮುಂಡೇಶ್ವರಿ ಮೊದಲಾದ ಹಾಡುಗಳನ್ನು ಹಾಡುತ್ತಾರೆ.

ಪಿರಿಯಾಪಟ್ಟಣದ ಕಾಳಗದ ಬಗೆಗೂ ಹಾಡುತ್ತಾರೆ, 'ಮೈಸೂರು ರಾಜರ ತಂಗಿ ಲಿಂಗರಾಜಮ್ಮ' ಕಥೆಯನ್ನು ಹಾಡಿನ ರೂಪದಲ್ಲಿ ಹಾಡುತ್ತಾರೆ; ಪಿರಿಯಾಪಟ್ಟಣದ ಕಾಳಗದ ಬಗೆಗೆ– 'ದಳವಾಯಿ ಅರಸು ಹೆಂಡತಿ', 'ವೀರರಾಜ ಅರಸು ಮೈಸೂರು', 'ಬಂಜೆ ಹೊನ್ನಮ್ಮ', 'ಮೈದಾಳರಾಮ=ಗೌರಿಹಬ್ಬ', 'ಬಸವಣ್ಣ', 'ಮಹದೇಶ್ವರ–ಸಂಕಮ್ಮನ ಸಾಲು' ಈ ಗೀತೆಗಳನ್ನು ಹಾಡುತ್ತಾರೆ.

ಮೈಸೂರು ಆಕಾಶವಾಣಿ, ಸುತ್ತೂರು ಮಠ, ದಸರಾ ವಸ್ತು ಪ್ರದರ್ಶನ, ಮೇಲುಕೋಟೆ, ಶ್ರೀರಂಗಪಟ್ಟಣದ ರಥ ಸಪ್ತಮಿ, ಜಾನಪದಲೋಕ ಮೊದಲಾದ ಸ್ಥಳಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಮೇಲುಕೋಟೆಯಲ್ಲಿ ರಥಸಪ್ತಮಿಯಲ್ಲಿ ಇವರಿಗೆ ಪ್ರಶಸ್ತಿ ನೀಡಿದ್ದಾರೆ.

ಸ್ವಾಮಿ ಅವರು ಒಂದು ಕಣ್ಣನ್ನು ತೆರೆದಂತೆ ಮತ್ತೊಂದು ಕಣ್ಣನ್ನು ತೆರೆಯಲಾರರು ಕಿರುಗಣ್ಣು ಈ ಕಲಾವಿದರಿಗೆ, ಯಾವ ಬಗೆಯಲ್ಲೂ ಧನ ಸಹಾಯ ದೊರೆತಿಲ್ಲ; ಇವರಿಗೆ ಸರಕಾರದಿಂದ ಧನ ಸಹಾಯ ದೊರೆತರೆ ಮತ್ತಷ್ಟು ಉತ್ಸಾಹದಿಂದ ಹಾಡಬಲ್ಲರು.

❖



## ಶ್ರೀಮತಿ ಪುಟ್ಟಸಿದ್ದಮ್ಮ (ಸೋಬಾನೆ)

ಶ್ರೀರಂಗಪಟ್ಟಣ ತಾಲ್ಲೂಕಿನ ಬಲ್ಲೇನಹಳ್ಳಿ ಗ್ರಾಮದಲ್ಲಿ ಶ್ರೀಮತಿ ಪುಟ್ಟಸಿದ್ದಮ್ಮ ವಾಸವಾಗಿದ್ದಾರೆ. ಇವರ ತಂದೆ ಜವರಯ್ಯ ತಾಯಿ ಪುಟ್ಟಮ್ಮ. ನರಸಯ್ಯ ಪುಟ್ಟಸಿದ್ದಮ್ಮನವರ ಪತಿ. ಇವರಿಗೆ ನಾಗರಾಜು, ಕೆಂಪಣ್ಣ, ನರಸಿಂಹ ಮೂರ್ತಿ– ಮೂರು ಜನ ಗಂಡು ಮಕ್ಕಳು, ಇವರು ಕೂಲಿ ಮಾಡುತ್ತಾರೆ. ಯಾರ ಆಶ್ರಯದಲ್ಲಿಯೂ ಪುಟ್ಟಸಿದ್ದಮ್ಮ ಇಲ್ಲ. ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ; ಷೀಟಿನ ಮನೆಯಲ್ಲಿ, ಜಮೀನು ಇಲ್ಲ. ಇವರು 1940 ರಲ್ಲಿ ಜನಿಸಿದ್ದಾರೆ, 70 ವರ್ಷಗಳಾಗಿವೆ. ಇವರು ಹರಿಜನರು.

ಪುಟ್ಟಸಿದ್ದಮ್ಮನವರು ಪುಟ್ಟೀರಮ್ಮನವರ ಹತ್ತಿರ ಸೋಬಾನೆ ಪದಗಳನ್ನು ಕಲಿತ್ತಿದ್ದಾರೆ. ಇವರು ಸೋಬಾನೆ, ಬೀಸೋಪದ, ಬೀಗರ ಜರಿಯೋಪದ, ಚಲುವರಾಯ, ರಂಗನಾಥನ ಮೇಲೆ ಜನಪದ ಗೀತೆಗಳನ್ನು ಮೈಸೂರು ಆಕಾಶವಾಣಿಯಲ್ಲಿ ಹಾಡಿದ್ದಾರೆ.

❖



## ಶ್ರೀಮತಿ ವೆಂಕಟಮ್ಮ (ಸೋಬಾನೆ)

ಶ್ರೀರಂಗಪಟ್ಟಣ ತಾಲ್ಲೂಕು ಬಲ್ಲೇನ ಹಳ್ಳಿಯ ವೆಂಕಟಮ್ಮ ಅವರು 85 ವಯಸ್ಸಾಗಿರುವ ವೃದ್ಧೆ. ವೆಂಕಟಯ್ಯ ಇವರ ಪತಿ. ವೆಂಕಟಮ್ಮನ ತಂದೆ ಪಾಚಿ, ತಾಯಿ ಸಿಂಗಮ್ಮ.

ವೆಂಕಟಮ್ಮನವರಿಗೆ ಈಗ ಐದು ಜನ ಮಕ್ಕಳಿದ್ದಾರೆ. ಇವರಲ್ಲಿ 3ಹೆಣ್ಣು, 2ಗಂಡು. ಹಿರಿಯ ಮಗ ಕೂಲಿ ಕೆಲಸ, ಕಿರಿಯ ಮಗ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ. ವೆಂಕಟಮ್ಮ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ; ಇವರು ಕುಕ್ಕೆ ಕೊರಮ ಶೆಟ್ಟರು.

ಶ್ರೀಮತಿ ಪುಟ್ಟೀರಮ್ಮ ಅವರ ಬಳಿ ಸೋಬಾನೆ ಪದ ಕಲಿತಿದ್ದಾರೆ. ಬೀಸೋಕಲ್ಲಿನ ಪದ, ಬೀಗರ ಜರಿಯೋ ಪದ, ಶ್ರೀರಂಗನಾಥ, ಚಲುವರಾಯ ಸ್ವಾಮಿಯ ಜನಪದ ಗೀತೆಗಳನ್ನು ಹಾಡುತ್ತಾರೆ. ಮೈಸೂರು ಆಕಾಶವಾಣಿಯಲ್ಲಿ ಹಾಡಿದ್ದಾರೆ.

❖



## ಶ್ರೀ ಮಹದೇವಯ್ಯ (ಕಂಸಾಳೆ)

ಮಳವಳ್ಳಿ ತಾಲ್ಲೂಕಿನ ಕಲ್ಲಾರೆಪುರ ಗ್ರಾಮದ ದಿವಂಗತ ಶ್ರೀ ಮಾದೇಗೌಡರ ಪುತ್ರ ಶ್ರೀ ಕಂಸಾಳೆ ಮಹದೇವಯ್ಯನವರು ಜನಪದ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯವಾದುದು.

ಶ್ರೀ ಮಹದೇವಯ್ಯನವರು ಬಾಲ್ಯದಿಂದಲೂ ಕಂಸಾಳೆ ಕಲೆ ಬಗೆಗೆ ಆಸಕ್ತಿವುಳ್ಳವರಾಗಿ, ತಾವು ಬೆಳೆದಂತೆಲ್ಲಾ ಆ ಕಲೆಯನ್ನು ಕಲಿತು ಪ್ರದರ್ಶಿಸುತ್ತಾ ಇಂಪಾಗಿ ಹಾಡುತ್ತಾ ಜನರ ಮೆಚ್ಚುಗೆಯನ್ನು ಪಡೆದರು.

ಶ್ರೀ ಮಹದೇವಯ್ಯನವರ ಮಡದಿ ಶ್ರೀಮತಿ ಪುಟ್ಟಮಾದಮ್ಮ ಅವರು ಕಂಸಾಳೆ ಕಲೆಯನ್ನು ಹಾಡನ್ನೂ ಮೆಚ್ಚಿ ಯಜಮಾನರಮ್ಮ ಪ್ರೋತ್ಸಾಹಿಸಿದರು. ಇವರ ಮಗ ಶಿವಮಾದು ಕೃಷಿಜೀವನ ಕೈಗೊಂಡರು, ಇವರ ಮಡದಿ ಶ್ರೀಮತಿ ಲಕ್ಷ್ಮಿ. ಇವರ ಮಕ್ಕಳಾದ ಶ್ರೀ ಎಸ್. ಯೋಗೇಶ್ ಮತ್ತು ಶ್ರೀ ಎಸ್. ನಿತೀಶ್. ಮಕ್ಕಳು ಮೊಮ್ಮಕ್ಕಳು ಕೃಷಿಕರಾಗಿಯೂ ಕಂಸಾಳೆಯನ್ನು ಕಲಿತು, ಆ ಕಲೆಯನ್ನು ಪೋಷಿಸುವುದರಲ್ಲಿ ಆಸಕ್ತಿಯನ್ನು ವ್ಯಕ್ತ ಪಡಿಸಿದ್ದಾರೆ.

ಕಂಸಾಳೆ ಶ್ರೀ ಮಹದೇವಯ್ಯನವರು ಕಂಸಾಳೆ ಕಲೆಯಲ್ಲಿ ಆಸಕ್ತಿಯುಳ್ಳ ಯುವಕರ ಒಂದು ತಂಡವನ್ನು ಕಟ್ಟಿ, ಅವರಿಗೆ ಕಂಸಾಳೆ ಕಲೆ ಮತ್ತು ಹಾಡುಗಳನ್ನು ಕಲಿಸಿ ಗುರುಸ್ಥಾನದಲ್ಲಿದ್ದು ಅವರಿಗೆ ಮಾರ್ಗದರ್ಶನ ನೀಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವರ ತಂಡದಲ್ಲಿ ವಿವಿಧ ಜನಾಂಗದ ಹನ್ನೆರಡು ಯುವಕರಿದ್ದಾರೆ.

ಕಂಸಾಳೆ ಶ್ರೀ ಮಹದೇವಯ್ಯನವರು ಕುರುಬ ಜನಾಂಗದವರು. ಇವರಿಗೆ ಈಗ ಸುಮಾರು 65 ವರ್ಷಗಳಾಗಿವೆ; ಕೃಷಿಕರಾದರೂ ಕಂಸಾಳೆ ಕಲೆಯಲ್ಲಿ ನೈಪುಣ್ಯವನ್ನು ಪಡೆದು ಕರ್ನಾಟಕ ಜನತೆಯ ಪ್ರೀತಿ ಆದರಗಳಿಗೆ ಪಾತ್ರರಾಗಿದ್ದಾರೆ.

❖



## ಶ್ರೀ ಎಲ್. ಮಾದಯ್ಯ (ಕಂಸಾಳೆ)

ಶ್ರೀ ಎಲ್. ಮಾದಯ್ಯನವರು ಕಂಸಾಳೆಯ ಕಲಾವಿದರು. ಮಳವಳ್ಳಿ ತಾಲ್ಲೂಕಿನ ಕಲ್ಲರೆಪುರದ ನಿವಾಸಿ. ಇವರಿಗೆ 55 ವರ್ಷಗಳಾಗಿವೆ. ಇವರ ಮಡದಿ ಶ್ರೀಮತಿ ಚಿಕ್ಕಮರಮ್ಮ. ಈ ದಂಪತಿಗಳಿಗೆ ಕೆ.ಎಂ. ಶಿವಮೂರ್ತಿ, ಲಕ್ಷ್ಮಿ ಮಕ್ಕಳಿದ್ದಾರೆ. ಶ್ರೀ ಮಾದಯ್ಯನವರು ಕೃಷಿಕರು. ಇವರು ಬೀಸು ಕಂಸಾಳೆಯಲ್ಲಿ ನಿಪುಣರು. ಇವರು ಕುರುಬ ಜನಾಂಗದವರು. ಈಗ ಕಂಸಾಳೆ ಮಹದೇವಯ್ಯನವರ ತಂಡದಲ್ಲಿ ಪ್ರದರ್ಶನನೀಡುತ್ತಿದ್ದಾರೆ. ಇವರು ದಿವಂಗತ ಚಿಕ್ಕಲಿಂಗೇಗೌಡರ ಮಗ.



## ಶ್ರೀ ಚೀರ್ಕುಣಿ (ಪೂಜಾ ಕುಣಿತ)

ತಳಗವಾದಿಯ ಎಲೆಜವರನ ಶ್ರೀ ಮೋಟಯ್ಯ ಮತ್ತು ಶ್ರೀಮತಿ ಚಲುವಮ್ಮ ದಂಪತಿಗಳ ಪುತ್ರ ಚೀರ್ಕುಣಿ. ಎಲೆಜವರನ ಶ್ರೀ ಮೋಟಯ್ಯ ಒಳ್ಳೆಯ ಪೂಜಾಕುಣಿತದ ಕಲಾವಿದನಂತೆ, ತಂದೆಯಂತೆ ಮಗ ಶ್ರೀ ಚೀರ್ಕುಣಿಯೂ ಪೂಜೆ ಕುಣಿತ ಕಲಿಯಬೇಕೆಂದಾಗ ತಿಬ್ಬಯ್ಯನವರ ಮಗ ಚಿಕ್ಕಯ್ಯ ಗುರುವಾದರು. ಶ್ರೀ ಚಿಕ್ಕಯ್ಯನವರು ಚಿರ್ಕುಣಿಗೆ ಮಾವನಾಗಬೇಕು. ಶ್ರೀ ಚೀರ್ಕುಣಿ ಅವರು ಬೋಯಿ (ಬೆಸ್ತ) ಜನಾಂಗದವರು.

ತಳಗವಾದಿಯ ಒಳಗೆರೆ ಹುಚ್ಚಮ್ಮ, ಕಬ್ಬಾಳಮ್ಮನ ಪೂಜೆಗಳನ್ನು ಚೀರ್ಕುಣಿ 15ನೇ ವಯಸ್ಸಿನಲ್ಲಿ ಹೊತ್ತು ಮೆರೆಸಲಾರಂಭಿಸಿದ. ಶ್ರೀ ಮೋಟಯ್ಯನ ಕಿರಿಯ ಮಗ ಚೀರ್ಕುಣಿ ಮೂರುಹೆಜ್ಜೆಯಿಂದ ಹದಿನಾಲ್ಕು ಹೆಜ್ಜೆ ಕುಣಿತದವರೆಗೂ ತಮಟೆ, ನಗಾರಿ, ತಾರಸಿಗಳ ಬಡಿತದ ಗತ್ತಿಗೆ ಅನುಗುಣವಾಗಿ ಹೆಜ್ಜೆಯಿರಿಸಿ ಪೂಜೆ ಹೊತ್ತು ಕುಣಿಯಲು ಆರಂಭಿಸಿದ 45 ವರ್ಷಗಳವರೆಗೆ ಪೂಜಾ ಕುಣಿತದ ಕಲಾವಿದನಾಗಿ ಜನರಿಗೆ ಕಲಾಪ್ರದರ್ಶನ ನೀಡಿದ ಶ್ರೀ ಚೀರ್ಕುಣಿ ಅವರಿಗೆ ಈಗ ಸುಮಾರು 65 ವರ್ಷಗಳಾಗಿವೆ. ಇಂದು ಪೂಜೆ ಹೊತ್ತುಕೊಂಡು ಕುಣಿಯಲಾರರು.

ಶ್ರೀ ಕಾಳೀರಯ್ಯನವರೊಡಗೂಡಿ ದೊಣ್ಣೆವರಸೆಯನ್ನು ಚೀರ್ಕುಣಿ ಮಾಡುತ್ತಿದ್ದರು. ಶ್ರೀ ಚೀರ್ಕುಣಿ ಅವರು ಪೂಜಾಕುಣಿತದ ಕಲೆಯಲ್ಲಿ ಹಲವಾರು ಚಮತ್ಕಾರಗಳನ್ನು ಮಾಡುವುದನ್ನು ಅಭ್ಯಸಿಸಿ ಮಡಿಕೆ ಮೇಲೆ, ಲೋಟಗಳ ಮೇಲೆ ನಡೆಯುವುದನ್ನು, ಕಣ್ಣುರೆಪ್ಪೆಗಳಿಂದ ನೆಲದ ಮೇಲಿರಿಸಿದ ನೋಟುಗಳನ್ನು ಪೂಜೆ ಹೊತ್ತೇ ತೆಗೆಯುವುದು ಜನರಿಗೆ ಆಶ್ಚರ್ಯವನ್ನೂ ಮನರಂಜನೆಯನ್ನು ನೀಡಿತು.

ತಳಗವಾದಿಯ ಅಕ್ಕಪಕ್ಕದ ಗ್ರಾಮಗಳಲ್ಲೂ ಪೂಜಾಕುಣಿತ ನಡೆಸಿ, ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲೂ ಪ್ರದರ್ಶನ ನೀಡಿ ಅಧಿಕಾರಿಗಳ ಸಮ್ಮುಖದಲ್ಲಿ ತನ್ನ ಕಲಾ ಪ್ರತಿಭೆಯನ್ನು ಪ್ರಕಟಿಸಿ ಜನಪ್ರಿಯತೆಯನ್ನು ಚೀರ್ಕುಣಿ ಪಡೆದರು.

ಪ್ರಥಮ ವಿಶ್ವಕನ್ನಡ ಸಮ್ಮೇಳನ, 1985ರಲ್ಲಿ ಬೆಂಗಳೂರು ಗಣರಾಜ್ಯೋತ್ಸವ 1988ರಲ್ಲಿ ಕರ್ನಾಟಕ ಜಾನಪದ ಟ್ರಸ್ಟ್, 1989ರಲ್ಲಿ ದಕ್ಷಿಣ ಸಾಂಸ್ಕೃತಿಕ ಕೇಂದ್ರ ತಂಜಾವೂರು, 1989ರಲ್ಲಿ ಮಹಾರಾಷ್ಟ್ರದಲ್ಲಿ ಅಪ್ನ ಉತ್ಸವ, 1994 ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, 1992ರಲ್ಲಿ ನಾಲ್ಕನೆಯ ರಾಷ್ಟ್ರೀಯ ಕ್ರೀಡಾ ಕೂಟ, 1986ರಲ್ಲಿ ಅಖಿಲ ಕರ್ನಾಟಕ ಜಾನಪದ ಕಲಾಮೇಳ, ಕೊಡಗು ಉತ್ಸವ, ಮಧುರೆ, ಪಳನಿ, ದೆಹಲಿ, ಚೆನ್ನೈ, ಮಿಜೋರಾಂ, ಆಂದ್ರಪ್ರದೇಶ, ಹರಿಯಾಣ, ಪಂಡರಾಪುರ, ಅಂಡಮಾನ್ ನಿಕೋಬಾರ್, ಪೂಜಾ ಕುಣಿತದ ಪ್ರದರ್ಶ ನೀಡಿ ಯಶಸ್ವಿಯಾಗಿದ್ದಾರೆ.

ಪ್ರತಿಭಾವಂತ ಕಲಾವಿದರಾದ ಚೀರ್ಕುಣಿ ಅವರು ಮುಂಬೈನಲ್ಲಿ ನಡೆದ ಸಾಂಸ್ಕೃತಿಕ ಉತ್ಸವದಲ್ಲಿ ಪ್ರದರ್ಶನ ನೀಡಿ ರಾಜೀವ್ ಗಾಂಧಿ ಅವರಿಂದ ಪ್ರಶಸ್ತಿಯನ್ನು ಗಳಿಸಿದ್ದಾರೆ.

1989ರಲ್ಲಿ ಮಂಡ್ಯದಲ್ಲಿ ಅಖಿಲ ಕರ್ನಾಟಕ ಜಾನಪದ ಕಲಾಮೇಳದಲ್ಲಿ ಭಾಗವಹಿಸಿ ಪ್ರಥಮ ಪ್ರಶಸ್ತಿ ಪಡೆದಿದ್ದಾರೆ.

1995ರಲ್ಲಿ ಮಂಡ್ಯ ಜಿಲ್ಲಾಡಳಿತ ವತಿಯಿಂದ ಜಿಲ್ಲಾಧಿಕಾರಿ ಶ್ರೀ ಗೋಪಾಲಕೃಷ್ಣಗೌಡರಿಂದ ಸನ್ಮಾನ ಸ್ವೀಕರಿಸಿದ್ದಾರೆ. 10.2.2002ರಂದು ಜಾನಪದ ಲೋಕದಲ್ಲಿ ನಡೆದ ಜಾನಪದ ಲೋಕೋತ್ಸವ ಕಾರ್ಯಕ್ರಮದಲ್ಲಿ ಡಾ. ಎಚ್.ಎಲ್. ನಾಗೇಗೌಡರಿಂದ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರಿಗೆ ಕ.ಸಂ. ಇಲಾಖೆಯಿಂದ ಮಾಸಾಶನ ಬರುತ್ತಿದೆ.

ಶ್ರೀ ಚೀರ್ಕುಣಿ ಅವರು ತಾವು ಕಲಿತ, ಪ್ರದರ್ಶಿಸಿದ ವಿಶಿಷ್ಟವಾದ ಪ್ರಸಿದ್ಧವಾದ ಪೂಜಾ ಕುಣಿತ ಕಲೆಯನ್ನು ಅನಂತರವೂ ನನ್ನ ಪೀಳಿಗೆ ಮುಂದುವರಿಸಬೇಕು. ಎಂಬ ಮಹದಾಸೆಯನ್ನು ತನ್ನ ಮಕ್ಕಳಾದ ಶ್ರೀ ಸಿದ್ದರಾಜು, ಮಗಳಾದ ಶ್ರೀಮತಿ

ಸವಿತಾ ಅವರಿಗೂ ಕಲಿಸಿದ್ದಾರೆ. ಪೂಜಾಕುಣಿತ ಕಲಾಕ್ಷೇತ್ರದಲ್ಲಿ ಇವರಿಬ್ಬರೂ ಈಗಾಗಲೇ ಹೆಸರು ಪಡೆದಿದ್ದಾರೆ.

2001–2002ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಶ್ರೀ ಚೇರ್ಕುಣ ಅವರಿಗೆ 'ಜಾನಪದ ಜ್ಞಾನ–ವಿಜ್ಞಾನ' ಪ್ರಶಸ್ತಿಯನ್ನು 5000 ನೀಡಿ ಗೌರವಿಸಿದೆ. ಮದ್ದೂರಿನ ಸೋಮನಹಳ್ಳಿಯ ಮಲ್ಲಯ್ಯ ಅವರ ಹೆಸರಿನಲ್ಲಿ ಎಸ್. ಎಂ. ಶಂಕರ್ 5000ರೂ ನೀಡಿ ಸನ್ಮಾನಿಸಿದರು. ಎಸ್.ಎಂ.ಕೃಷ್ಣ ಅವರು ಕಲಾಮಂದಿರದಲ್ಲಿ, ಹನುಮಂತನಗರದಲ್ಲಿ ಜಿ.ಮಾದೇಗೌಡರು ಸನ್ಮಾನಿಸಿದ್ದಾರೆ.

ಕಲಾವಿದ ಶ್ರೀ ಚೇರ್ಕುಣ ಅವರು ಗುರುವಾಗಿ ಹಲವಾರು ಊರುಗಳಲ್ಲಿ ಶಿಷ್ಯರನ್ನು ಪಡೆದಿದ್ದಾರೆ. ಇವರು ಗೋಪಾಲಪುರ, ಸಂತೆಕಸಲಗೆರೆ, ಈರೇಗೌಡನ ಕೊಪ್ಪಲು, ಅಜ್ಜಳ್ಳಿ, ಮಣಿಗೆರೆ, ಕಾಡುಕೊತ್ತನಹಳ್ಳಿ ಮೊದಲಾಗಿ ಗ್ರಾಮಾಂತರ ಪ್ರದೇಶದ ಯವಕರಿಗೆ ಪೂಜಾಕುಣಿತದ ತರಬೇತಿ ನೀಡಿದ್ದಾರೆ. ಈ ಯುವಕರೆಲ್ಲರೂ ಇಂದು ಪೂಜಾಕುಣಿತ ಪ್ರದರ್ಶನ ನೀಡಲು ಸಮರ್ಥರಾಗಿದ್ದಾರೆ.

ಶ್ರೀ ಚೇರ್ಕುಣ ಮತ್ತು ಅವರ ಮಕ್ಕಳು "ಶ್ರೀ ಉಮಾಮಹೇಶ್ವರಿ ಪೂಜಾಕುಣಿತ"ದ ಕಲಾತಂಡವನ್ನು ಕಟ್ಟಿ ಆಹ್ವಾನ ಬಂದ ಕಡೆ ಹೋಗಿ ಪ್ರದರ್ಶನ ನೀಡುತ್ತಾರೆ.

ಶ್ರೀ ಚೇರ್ಕುಣಯ್ಯ ಅವರ ಮಡದಿ ಸಾವಿತ್ರಮ್ಮ, ಇವರಿಗೆ ಸಿದ್ಧರಾಜು, ರವಿ ಇಬ್ಬರು ಗಂಡು ಮಕ್ಕಳೂ, ಶ್ರೀಮತಿ ಸವಿತಾ ಮಗಳೂ ಇದ್ದಾರೆ. ಸಿದ್ದರಾಜು ಅವರಿಗೆ 35 ವರ್ಷಗಳು, ರವಿಗೆ 22 ವರ್ಷಗಳಾಗಿವೆ.

ಚೇರ್ಕುಣಿ ಅವರಿಗೆ 20 ಗುಂಟೆ ತರಿ ಜಮೀನಿದೆ, ಮನೆ ಇದೆ, ಇವರ ಮೂರು ಮಕ್ಕಳೂ ಪೂಜಾಕುಣಿತದ ಕಲಾವಿದರಾಗಿದ್ದಾರೆ.

ಶ್ರೀ ಚೇರ್ಕುಣಯ್ಯ ಅವರಿಗೆ ಪೂಜಾಕುಣಿತವನ್ನು, ತಳಗವಾದಿಯ ತಮಟೆಕಲಾವಿದ ಹರಿಜನರ ದಿವಂಗತ ದೊಡ್ಡಹೈದ ಅವರು. ಗುರುಶ್ರೀದೊಡ್ಡಹೈದ ಅವರ ಬಗೆಗೆ ಚೇರ್ಕುಣಿ ಅವರಿಗೆ ಅಪಾರ ಗೌರವಭಾವ ಇಂದೂ ಇದೆ.

❖



## ಶ್ರೀ ಕರಿಯಪ್ಪ (ನೀಲಗಾರ)

ಮಳವಳ್ಳಿ ತಾಲ್ಲೂಕಿನ ಕಲ್ಲಾರೆಪುರದ ದಿವಂಗತ ಶ್ರೀ ಮಾದೇಗೌಡ ಮತ್ತು ಶ್ರೀಮತಿ ಬೆಣ್ಣೆ ಮಾದಮ್ಮ ಅವರ ಪುತ್ರ ಶ್ರೀ ಕರಿಯಪ್ಪ. ಅವರು ತಂಬೂರಿ ಹಿಡಿದು ಹಾಡಿ ನೀಲಗಾರ ಎನ್ನಿಸಿಕೊಂಡರು.

ಶ್ರೀ ಕರಿಯಪ್ಪನವರ ಮಡದಿ ಶ್ರೀಮತಿ ಚಿಕ್ಕತಾಯಮ್ಮ. ಇವರಿಗೆ 22 ವರ್ಷದ ಶಿಮಾಧು ಮತ್ತು 18 ವರ್ಷದ ವಸಂತ ಮಕ್ಕಳಿದ್ದಾರೆ. ಮೊದಲನೆಯವರು 7ನೇ ತರಗತಿ, ಎರಡನೆಯವರು 5ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ.

ಕರಿಯಪ್ಪನವರು ಕಂಸಾಳೆ ಮಹದೇವಯ್ಯನವರ ತಮ್ಮ ಹಾಗೂ ಶಿಷ್ಯ ಶ್ರೀ ಮಹದೇವ ಸ್ವಾಮಿ ಅವರ ಗುರು.

ಶ್ರೀ ಕರಿಯಪ್ಪನವರು ತಂಬೂರಿ ವಾದ್ಯ ನುಡಿಸುತ್ತಾ ಮಹದೇಶ್ವರ, ಸಿದ್ದಪ್ಪಾಜಿ, ಮಡಿವಾಳ ಮಾಚಪ್ಪ, ನಂಜುಂಡೇಶ್ವರ, ಮೈದಾಳ ರಾಮಣ್ಣ, ರಾಚಪ್ಪಾಜಿ, ಮಂಟೇಸ್ವಾಮಿ, ಜೋಗಿ ಹಾಡು, ಸಂಕಮ್ಮನ ಕಥೆ, ವಂಶವೃಕ್ಷಕ್ಕೆ ಸಂಬಂಧಿಸಿದಂತೆ ಮನೆ ಮನೆಗೆ ಹೋಗಿ ಹೊಗಳಿ ಹಾಡುತ್ತಾರೆ.

ಶ್ರೀ ಕರಿಯಪ್ಪನವರು ಕುರುಬ ಜನಾಂಗಕ್ಕೆ ಸೇರಿದವರು. ಇವರಿಗೆ ಸುಮಾರು 52 ವರ್ಷಗಳ ಮೇಲಾಗಿದೆ. ❖



## ಚಿಕ್ಕಾಡೆ ಹೊನ್ನಮ್ಮ (ಸೋಬಾನೆ)

ಸೋಬಾನೆ ಪದದ ಅಜ್ಜಿ ಎಂದೇ ಪ್ರಸಿದ್ಧರಾಗಿರುವ ಚಿಕ್ಕಾಡೆಯ ಹೊನ್ನಮ್ಮನವರು ಮೂಲ ಧಾಟಿಯಲ್ಲಿ ಬಹಳ ಇಂಪಾಗಿ ಜನಪದ ಗೀತೆ, ಸೋಬಾನೆ ಪದಗಳನ್ನು ಹಾಡುತ್ತಾರೆ. ಇವರ ಕಂಠಶ್ರೀಯಿಂದ ಪದಗಳನ್ನು ಒಮ್ಮೆ ಕೇಳಿದರೆ ಮತ್ತೆ ಕೇಳಬೇಕೆನಿಸುವಷ್ಟು ಇಂಪಾಗಿ ಹಾಡುತ್ತಾರೆ.

ಹರಳಹಳ್ಳಿಯ ಶ್ರೀ ಹೊನ್ನಮ್ಮ ಏಳನೆಯ ವಯಸ್ಸಿಗೆ ಚಿಕ್ಕಾಡೆ ಚನ್ನಯ್ಯನವರ ಮನೆಯೊಡತಿಯಾಗಿ ಅವರ ಬಾಳು ಮತ್ತು ಮನೆಯನ್ನು ಬೆಳಗಲು ಬಂದರು. ಇವರಿಗೆ ಈಗ (90) ವರ್ಷಗಳಾಗಿವೆ. ಇಷ್ಟು ದೀರ್ಘ ಕಾಲದಲ್ಲಿ ತಮ್ಮ ಬದುಕಿನಲ್ಲಿ ಕಂಡುಂಡ ಕಷ್ಟ ಕಾರ್ಪಣ್ಯಗಳ ಕುರುಹಾಗಿ ಮುಖದ ತುಂಬ ನೆರಿಗೆಗಳಿವೆ. ಇವರಿಗೆ ಆರು ಮಕ್ಕಳಿದ್ದಾರೆ. (3 ಗಂಡು, 3 ಹೆಣ್ಣು) ಜೀವನಾನುಭವದ ಶ್ರೀಮಂತಿಕೆ ಇವರದ್ದು. ಚರ್ಮ ಸುಕ್ಕುಗಟ್ಟಿದ್ದರೂ ಇವರ ಕಂಠಶ್ರೀ ಕುಗ್ಗಿಲ್ಲ. ಅಳುವ ಮಕ್ಕಳನ್ನು ಕ್ಷಣಗಳಲ್ಲೇ ಸಂತೈಸಿ ಮಲಗಿಸುವ ಸಾಮರ್ಥ್ಯ ಇವರ ಹಾಡುಗಳಿಗಿವೆ. ಐದು ಜನ ಅಣ್ಣಂದಿರ ಅನಂತರ ಇವರು ಜನಿಸಿದರು. ಅಕ್ಷರ ಜ್ಞಾನ ಇವರಿಗಿಲ್ಲ.

ಕರ್ನಾಟಕ ಜಾನಪದ ಪರಿಷತ್ತಿನಲ್ಲಿ ಒಂದು ವಾರ ಕುಳಿತು ಹಾಡಿದ ಹಾಡುಗಳನ್ನೆಲ್ಲಾ ಧ್ವನಿ ಮುದ್ರಣ ಮಾಡಿದ್ದಾರೆ. ಹರಿಜನರಾದ ಇವರು ಹರಿಯ

ಕೃಪೆಗೆ ಪಾತ್ರರಾಗಿ ಇಂಥ ಕಂಠವನ್ನು ಪಡೆದಿದ್ದಾರೆನ್ನಿಸುತ್ತದೆ. ಶ್ರೀಮತಿ ಹೊನ್ನಮ್ಮನವರು ಪ್ರೀತಿಯಿಂದ– ಮಹದೇಶ್ವರ, ಸರಸ್ವತಿ, ಬಸವೇಶ್ವರ, ಸಿದ್ದಯ್ಯ, ಚಾಮುಂಡಿ, ಭೈರಪ್ಪ, ನಂಜಯ್ಯ, ಅಂಕನಾಥೇಶ್ವರ, ದೇವೀರಮ್ಮ, ಹುಚ್ಚಯ್ಯ, ಎಳೆನಾಗಮ್ಮ, ಉತ್ತರದೇವಿ, ಹೊಲೇರ ಹೈದ, ಬಳೆಗಾರ ಶೆಟ್ಟಿ, ದಳವಾಯಿ ಮದುವೆ ಪದ, ಬೀ ಸೋ ಪದ, ದೂರಿ ಪದ, ಒಗಟುಪದ, ಹೆಣ್ಣು ಮೈನೆರೆದಾಗ ಹಾಡುವ ಸಂತಸದ ಪದ, ಜೋಗುಳ– ಹೀಗೆ ಹಲವು ವೈವಿಧ್ಯಮಯ ಗೀತೆಗಳನ್ನೂ ಸೋಬಾನೆ ಪದಗಳನ್ನೂ ಇಂಪಾಗಿ ಹಾಡುವ ಸಾಮರ್ಥ್ಯವುಳ್ಳವರಾಗಿದ್ದಾರೆ. ಚಿಕ್ಕಾಡೆಯ ಶ್ರೀಮತಿ ಹೊನ್ನಮ್ಮನವರು. 'ಆತ್ಮ ಸಂತೋಷಕ್ಕಾಗಿ ಹಾಡುತ್ತಿದ್ದೇನೆ' ಎನ್ನುತ್ತಾರೆ. 'ಮರಿಯಣ್ಣ ನನ್ನ ಅಣ್ಣ– ಇವರೇ ನನ್ನ ಗುರು' ಎಂದು ಅಣ್ಣನನ್ನು ಸ್ಮರಿಸುತ್ತಾರೆ.

ಚಿಕ್ಕಾಡೆ ಹೊನ್ನಮ್ಮನವರು ಬೆಂಗಳೂರು, ಮೈಸೂರು ಆಕಾಶವಾಣಿಗಳಲ್ಲಿ ಹಲವಾರು ಸಾರಿ ಹಾಡಿದ್ದಾರೆ. ನಾಡಿಗೆಲ್ಲಾ ತಮ್ಮ ಕಂಠಶ್ರೀಯಿಂದ ಹೊಮ್ಮುವ ನಾದಲಹರಿಯನ್ನು ತೇಲಿಬಿಟ್ಟಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹಾಡಿದಾಗ ಇವರು ಒಂದು ಸೇರು ಅಕ್ಕಿ, ಒಂದು ಅಚ್ಚು ಬೆಲ್ಲ, ಒಂದು ತೆಂಗಿನಕಾಯಿ, ಎಲೆ ಅಡಿಕೆ ಮೇಲೆ ಅವರವರ ಶಕ್ತ್ಯಾನುಸಾರ ಇರಿಸಿದ ಕಾಣಿಕೆ ಹಣವನ್ನು ಗೌರವ ಸಂಭಾವನೆಯಾಗಿ ಪಡೆಯುತ್ತಾರೆ.

1999ರಲ್ಲಿ ನಡೆದ ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶದಲ್ಲಿ ಇವರನ್ನು ಸನ್ಮಾನಿಸಿದ್ದಾರೆ. ಜನದನಿ ಸಾಂಸ್ಕೃತಿಕ ಟ್ರಸ್ಟ್ (ರಿ.) ಮಂಡ್ಯ– ಇವರಿಂದ ಜೀಶಂಪ ಪ್ರಶಸ್ತಿ (10,000/–) ರೂ.ಗಳನ್ನು ಪಡೆದಿದ್ದಾರೆ.

ಚಿಕ್ಕಾಡೆ ಹೊನ್ನಮ್ಮನವರು ತಮ್ಮ ಇಳಿವಯಸ್ಸಿನಲ್ಲಿ ಸರಕಾರದಿಂದ ಏನಾದರೂ ನೆರವು ಬಂದೀತೆಂಬ ನಿರೀಕ್ಷೆಯಲ್ಲಿದ್ದಾರೆ. 'ರಾಜ್ಯೋತ್ಸವ ಪ್ರಶಸ್ತಿ' ಬರಲಿಲ್ಲ ಎಂಬ ಕೊರಗು ಇದೆ ಎನ್ನುತ್ತಾರೆ.

❖



## ಶ್ರೀಮತಿ ಚೆನ್ನಮ್ಮ – (ಸೋಬಾನೆ)

ಪಾಂಡವಪುರ ತಾಲ್ಲೂಕಿನ ಚಿಕ್ಕಾಡೆ ನಿವಾಸಿ ಶ್ರೀಮತಿ ಚೆನ್ನಮ್ಮ ಅವರು ಶ್ರೀ ಗವಿರಂಗಯ್ಯ ಅವರ ಪತ್ನಿ; ಮಡಿವಾಳ ಶೆಟ್ಟರು – 55 ವರ್ಷಗಳಾಗಿವೆ. ಅವಿದ್ಯಾವಂತೆಯಾದ ಈಕೆ ಹುಲ್ಲಿನ ಷೆಡ್‌ನಲ್ಲಿ ವಾಸಿಸುತ್ತಿದ್ದಾರೆ. ಜಮೀನು ಇಲ್ಲ.

ಹರಿಜನರ ಚಿಕ್ಕಾಡೆ ಹೊನ್ನಮ್ಮ ಇವರಿಗೆ ಸೋಬಾನೆ ಪದಗಳನ್ನು ಕಲಿಸಿದ ಗುರು – ಎಂದು ಹೆಮ್ಮೆಯಿಂದ ಹೇಳುತ್ತಾರೆ. ಚೆನ್ನಮ್ಮನವರು ಬಾಲಕಿಯಾಗಿದ್ದಾಗಿನಿಂದಲೂ ಪದಗಳೆಂದರೆ ಇಷ್ಟ, ಜನಪದ ಗೀತೆಗಳನ್ನು ಕಲಿಯಬೇಕೆಂಬ ಇವರ ಆಕಾಂಕ್ಷೆಯನ್ನು ಈಡೇರಿಸಿದವರು ಶ್ರೀಮತಿ ಚಿಕ್ಕಾಡೆ ಹೊನ್ನಮ್ಮನವರು.

ಶ್ರೀಮತಿ ಚೆನ್ನಮ್ಮನವರು ಜನಪದ ಗೀತೆ, ಸೋಬಾನೆ ಪದ, ತತ್ವಪದಗಳನ್ನು ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದ ಮೇಳಗಳಲ್ಲಿ ಹಾಡಿದ್ದಾರೆ.

ಚೆನ್ನಮ್ಮ – ಗವಿರಂಗಯ್ಯ ಅವರಿಗೆ ಒಬ್ಬಳು ಮಗಳು, ಒಬ್ಬ ಮಗ ಇದ್ದಾನೆ. ಚೆನ್ನಮ್ಮ ಕೂಲಿ ಕೆಲಸ ಮಾಡುತ್ತ, ಬಲ್ಲವರಿಂದ ಒಂದೊಂದು ಜನಪದ ಗೀತೆಯನ್ನು ಉತ್ಸಾಹದಿಂದ ಕಲಿತು ಹಾಡುತ್ತಿದ್ದಾರೆ.

ಮಲ್ಲೈ ಮಹದೇಶ್ವರ ಜನಪದ ಭಕ್ತಿಗೀತೆಗಳು, ರೇಣುಕಾಚಾರ್ಯ, ಶಂಕರ, ಶಿಶುನಾಳ ಶರೀಫರ ತತ್ವಪದಗಳನ್ನು ಹಾಡುತ್ತಾರೆ.

ಮಂಟೇಲಿಂಗ, ಬೈರವೇಶ್ವರ, ಶಿವಶರಣರ ಮೇಲಿನ ಹಾಡುಗಳನ್ನು ಅನೇಕ ಮಠಗಳ ಮೇಳದಲ್ಲಿ ಹಾಡಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಕಲಾವಿದರಾಗಿ ಪ್ರಜ್ವಲಿಸಿದರೂ, ನಮಗೆ ಯಾವ ಸ್ಥಾನ – ಮಾನವೂ ದೊರೆತಿಲ್ಲವೆಂದು ನೊಂದುಕೊಳ್ಳುತ್ತಾರೆ ಚೆನ್ನಮ್ಮನವರು.

❖



## ಶ್ರೀ ಸಿ. ಅಂಕಯ್ಯ – (ತತ್ತ್ವಪದಗಾಯಕ)

ಪಾಂಡವಪುರ ತಾಲ್ಲೂಕಿನ ಚಿಕ್ಕಾಡೆ ಗ್ರಾಮದ ಹರಿಜನರ ಸಿ. ಅಂಕಯ್ಯನವರು ಚಿಕ್ಕಾಡೆ ಹೊನ್ನಮ್ಮನವರ ಮಗ – ಇವರಿಗೆ ಐವತ್ತೈದು (55) ವರ್ಷಗಳಾಗಿವೆ. ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳಿದ್ದಾರೆ. ಷೀಟಿನ ಮನೆಯಲ್ಲಿ ವಾಸಿಸುತ್ತಿದ್ದಾರೆ. ಜಮೀನು ಇಲ್ಲದ ಇವರು ಕೂಲಿ ಮಾಡಿ ಜೀವನ ನಡೆಸುತ್ತಿರುವ ಅವಿದ್ಯಾವಂತರು.

ತತ್ತ್ವಪದ, ಶನಿ ಕಥೆ – ಮೊದಲಾಗಿ ಹಾಡುತ್ತಾರೆ, ತತ್ವ ಪದಗಳನ್ನು ಹಾಡುವುದರಲ್ಲಿ ಹೆಚ್ಚು ಆಸಕ್ತಿವುಳ್ಳವರು. ಸುತ್ತೂರು. ಕಪ್ಪಡಿ, ಮುರುಕನಹಳ್ಳಿ, ನೆಲಮನೆ, ಚಿಕ್ಕಾಡೆ ರಾಮಮಂದಿರ, ಕೊಡಗಹಳ್ಳಿ ಶ್ರೀ ರಾಮಲಿಂಗೇಶ್ವರ ಸನ್ನಿಧಿಯಲ್ಲಿ ಹಾಡಿದ್ದಾರೆ.

ಸಾವು ಸಂಭವಿಸಿದ ಮನೆಯವರ ಆಹ್ವಾನದ ಮೇರೆಗೆ ಹೋಗಿ ಗ್ರಾಮಾಂತರ ಪ್ರದೇಶಗಳಲ್ಲಿ ತತ್ತ್ವಪದಗಳನ್ನು ಹಾಡುವ ಹವ್ಯಾಸ ಇವರಿಗಿದೆ.

ಶ್ರೀ ಸಿ.ಅಂಕಯ್ಯನವರಿಗೆ ತತ್ತ್ವಪದಗಳನ್ನು ಕಲಿಸಿಕೊಟ್ಟ ಗುರು ಚಂದಗಾಲಿನ ಶ್ರೀ ಜೆ. ಬೋರಯ್ಯ ಅವರು. ಇವರಿಂದ ಶಿಶುನಾಳ ಶರೀಫರ ತತ್ವ, ಶಂಕರರ ತತ್ವ ಕಲಿತಿದ್ದಾರೆ.

ಸಿ. ಅಂಕಯ್ಯನವರು ಮಹದೇಶ್ವರ ಜನಪದ ಗೀತೆಗಳನ್ನು ಸೊಗಸಾಗಿ ಹಾಡುತ್ತಾರೆ.

## ಶ್ರೀ ಲಿಂಗದ ವೀರಪ್ಪ (ವೀರಭದ್ರನ ಕುಣಿತ)

ಪಾಂಡವಪುರ ತಾಲ್ಲೂಕಿನ ಚಿನಕುರಳಿ ಹೋಬಳಿಯ ದೊಡ್ಡಬೋಗನ ಹಳ್ಳಿಯ ಶ್ರೀ ಸಿದ್ದವೀರಪ್ಪ ಮತ್ತು ಶ್ರೀಮತಿ ಗೌರಮ್ಮನವರ ಮಗನಾಗಿ ದಿನಾಂಕ 25.5.1937ರಲ್ಲಿ ಶ್ರೀ ಲಿಂಗದ ವೀರಪ್ಪ ಜನಿಸಿದರು. ಇವರಿಗೆ 73 ವರ್ಷಗಳಾಗಿವೆ.

ಶಾಲಾ ಶಿಕ್ಷಕರಾದ ಶ್ರೀ ಆರ್. ಅಂಕೇಗೌಡರ ಮಾರ್ಗದರ್ಶನದಲ್ಲಿ ಶ್ರೀ ಲಿಂಗದ ವೀರಪಾಪಣ್ಣನವರು ವೀರಭದ್ರನ ಕುಣಿತದಲ್ಲಿ ಆಸಕ್ತರಾಗಿದ್ದ ಶ್ರೀ ಲಿಂಗದ ವೀರಪ್ಪನವರಿಗೆ ವೀರಭದ್ರನ ಕುಣಿತ ಕಲಿಸುವ ಗುರುವಾದರು. ಲಿಂಗದ ವೀರಪಾಪಣ್ಣನವರು ಗತಿಸಿದ್ದಾರೆ. ಆದರೆ ಅವರು ಕಲಿಸಿದ ಕಲೆಯನ್ನು ಶಿಷ್ಯ ಲಿಂಗದ ವೀರಪ್ಪನವರು ಎತ್ತಿ ಹಿಡಿದರು. ವೀರಭದ್ರನ ನೃತ್ಯ ಕಲೆಯಲ್ಲಿ ಸೈ ಎನಿಸಿಕೊಂಡ ಶ್ರೀ ಲಿಂಗದ ವೀರಪ್ಪನವರು ಮಂಡ್ಯ ಜಿಲ್ಲೆಯ ಹಿರಿಯ ಕಲಾವಿದರಲ್ಲಿ ಗಮನಾರ್ಹರಾಗಿದ್ದಾರೆ.

ಶ್ರೀ ಲಿಂಗದ ವೀರಪ್ಪನವರು ಮೊದಲು ಶಾಲಾ ಶಿಕ್ಷಕರಾಗಿ ಚಿನಕುರಳಿಯಲ್ಲಿ ನಾಲ್ಕು ವರ್ಷಗಳ ಸೇವೆ ಸಲ್ಲಿಸಿದ್ದರು. ಇವರು 8ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ.

ಶ್ರೀ ಲಿಂಗದ ವೀರಪ್ಪನವರು ಪೂರ್ಣಪ್ರಮಾಣದಲ್ಲಿ ವೀರಭದ್ರನ ನೃತ್ಯ ಕಲಾವಿದರಾಗಿ ಕಲಾ ಸೇವೆಯಲ್ಲಿ ತೊಡಗಿಕೊಂಡರು. ಜನಪದ ತಮಟೆ ವಾದನದ ತಾಳಕ್ಕೆ ವೀರಾವೇಶದಿಂದ ಕುಣಿಯುವ ಕಲಾವಿದರಲ್ಲಿ ಗಮನಾರ್ಹರಾದರು. ಈಗ

ಇವರಿಗೆ 72 ವರ್ಷ ವಯಸ್ಸಾಗಿದೆ. ಮನಸ್ಸು ಮಾಡಿದರೆ ಯುವಕರೂ ನಾಚುವಂತೆ ಹುಮ್ಮಸ್ಸಿನಿಂದ ವೀರಭದ್ರನ ಕುಣಿತವನ್ನು ತಲ್ಲೀನತೆಯಿಂದ ಅಭಿನಯಿಸಲೂಬಲ್ಲರು.

ಲಿಂಗದ ವೀರಪ್ಪನವರ ಧರ್ಮಪತ್ನಿ ಶ್ರೀಮತಿ ಭದ್ರಕಾಳಮ್ಮನವರು ಇವರ ಕಲೆಗೆ ಉತ್ತೇಜನ ನೀಡಿದರು. ಇವರು ಶಿವಾರ್ಚಕ (ತಮ್ಮಡಿ)ರು.

ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಹಬ್ಬಗಳಲ್ಲಿ, ತಮ್ಮ ಕುಳಗಳ ಗೃಹಪ್ರವೇಶದಲ್ಲಿ ವೀರಭದ್ರನ ಕುಣಿತವನ್ನು ಲಿಂಗದ ವೀರಪ್ಪನವರು ಪ್ರದರ್ಶಿಸುತ್ತಿದ್ದರು.

ಮೈಸೂರು ದಸರಾ ಉತ್ಸವದಲ್ಲಿ ಅರಮನೆ ವೇದಿಕೆಯಲ್ಲಿ ಒಂದು ಗಂಟೆ ಅವಧಿಗೆ ಇಬ್ಬರು ವೀರಗಾಸೆ ಕಲಾವಿದರೊಡನೆ ಇವರು ವೀರಭದ್ರನ ಕುಣಿತವನ್ನು ಪ್ರದರ್ಶಿಸಿದಾಗ ಜನರ ಮೆಚ್ಚುಗೆ ಪಡೆದುದಲ್ಲದೆ, ಪ್ರತಿಕಲಾವಿದರಿಗೆ 1750 ರೂ. ಸಂಭಾವನೆ ನೀಡಿದರು. ಅರಮನೆ ಆಡಳಿತ ಅಧಿಕಾರಿಗಳಿಂದ 1966, 1967, 1968 ರವರೆಗೆ ಸಂಭಾವನೆ ಪಡೆದರು.

ರಂಭಾಪುರಿ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ, ಹಾಸನ ಜಿಲ್ಲಾ ಅರಕಲುಗೂಡು, ಕೇರಳಾಪುರ, ತುಮಕೂರು ಜಿಲ್ಲೆಯ ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಸನ್ನಿಧಿಯಲ್ಲಿ ನಿರಂತರ ಮೂರು ವರ್ಷಗಳು, ಶಿವಮೊಗ್ಗ ಜಿಲ್ಲೆ, ಶಿರಸಿ ಕಡೆಕಲ್ಲು ಶ್ರೀ ಬಸವೇಶ್ವರ ಜಾತ್ರೆ, ಚಾಮರಾಜನಗರದ ವೀರಭದ್ರೇಶ್ವರ ಉತ್ಸವ – ಮೊದಲಾದ ಕಡೆಗಳಲ್ಲಿ ಆಹ್ವಾನದ ಮೇರೆಗೆ ಹೋಗಿ ಪ್ರದರ್ಶನ ನೀಡಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. 11.2.1994ರಿಂದ 13.2.1994 ರವರೆಗೆ ಮಂಡ್ಯ ನಗರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಶ್ರೀ ಚದುರಂಗ ಅವರಿಂದ ವೀರಭದ್ರನ ಕುಣಿತಕ್ಕಾಗಿ ಅಭಿನಂದನಾ ಪತ್ರ ಪಡೆದಿದ್ದಾರೆ.

31.3.1982 ರಲ್ಲಿ ನೆಹರು ಯುವ ಕೇಂದ್ರ ಮಂಡ್ಯ, ಇಂಡುವಾಳಿನಲ್ಲಿ ನಡೆದ ಜಾನಪದ ಕಲಾ ಮೇಳದಲ್ಲಿ ಸಮನ್ವಯಾಧಿಕಾರಿ ಶ್ರೀ ಎಚ್. ಎಸ್. ಸುರೇಶ್ ಅವರಿಂದ 13.7.1997ರಲ್ಲಿ ಪ್ರಶಸ್ತಿ ಪತ್ರ ಪಡೆದಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಮಂಡ್ಯ ಜಿಲ್ಲಾ ಜನಪದ ಕಲಾ ಮೇಳ, ಶ್ರೀ ಆತ್ಮಲಿಂಗೇಶ್ವರ ಕ್ಷೇತ್ರದಲ್ಲಿ ಡಾ. ಎಚ್. ಜೆ. ಲಕ್ಕಪ್ಪಗೌಡರಿಂದ ಪ್ರಶಸ್ತಿ, 1997ರಂದು ಮದ್ದೂರಿನಲ್ಲಿ ನಡೆದ ಅರ್ಜುನಪುರಿ ಉತ್ಸವದಲ್ಲಿ ಅಭಿನಂದನಾ ಪತ್ರ, 3.11.1985ರಲ್ಲಿ ಪಾಂಡವಪುರದಲ್ಲಿ ನಡೆದ ತಾಲ್ಲೂಕು ಮಟ್ಟದ ಯುವಜನ ಮೇಳದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಂದ ಪ್ರಶಸ್ತಿ ಪತ್ರ, ಬೆಂಗಳೂರಿನ ಎ.ಕೆ.ಎಂ. ಕಲಾವಿದರಿಂದ 25,

26, 27.10.1999 ನವದೆಹಲಿ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿ ಹೋಗಿ ಪ್ರದರ್ಶನ ನೀಡಿದ್ದಾರೆ.

11.4.1997. ರಲ್ಲಿ ನಾಲ್ಕನೇ ಅಂತರರಾಷ್ಟ್ರೀಯ ಕ್ರೀಡಾಕೂಟ, ರಾಜ್ಯ ಯುವಕೇಂದ್ರ, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಮೇಲುಕೋಟೆ ರಥಸಪ್ತಮಿ, ಜಾನಪದ ಜಾತ್ರೆ ಮೊದಲಾದ ಕಡೆಗಳಲ್ಲಿ ಭಾಗವಹಿಸಿ ಪ್ರದರ್ಶನ ನೀಡಿದ್ದಾರೆ.

ದಿನಾಂಕ : 1.11.2008 ರಂದು ಜಿಲ್ಲಾ ಆಡಳಿತ ಮಂಡ್ಯ ಜಿಲ್ಲೆ, ಮಂಡ್ಯದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ವೀರಭದ್ರನ ಕುಣಿತದ ಶ್ರೀಲಿಂಗದ ವೀರಣ್ಣನವರನ್ನು ಗೌರವಿಸಿದೆ.

❖

## ಶ್ರೀ ಡಿ.ಎಂ. ಮಹೇಶ್ (ಕೋಲಾಟ)

ಚಿಕ್ಕ ಮರಿಗೌಡನ ದೊಡ್ಡಿಯ ಚಿಕ್ಕಮಾಯಿಗೌಡರ ಮಗ ಡಿ.ಎಂ. ಮಹೇಶ್ ಅವರು ಉದಯೋನ್ಮುಖ ಕಲಾವಿದ. ಕೋಲಾಟದಲ್ಲಿ ಗುರುತಿಸಿಕೊಂಡಿದ್ದಾರೆ. 6,12,18 ಜನ ಸೇರಿ ಕೋಲಾಟವನ್ನು ಅದಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ.

ಶ್ರೀ ಡಿ.ಎಂ. ಮಹೇಶ್ ಅವರು ದೊಣ್ಣೆವರಸೆಯಲ್ಲೂ ತಮ್ಮ ಕೈಚಳಕವನ್ನು ತೋರಿಸುತ್ತಾರೆ. ಎಂಟು ಜನ ಸೇರಿ ದೊಣ್ಣೆವರಸೆಯನ್ನು ಪ್ರದರ್ಶಿಸುತ್ತಾರೆ. ಒಕ್ಕಲಿಗರಾದ ಇವರು 2ನೇ ತರಗತಿವರೆಗೆ ಮಾತ್ರ ವ್ಯಾಸಂಗ ಮಾಡಿದ್ದಾರೆ. ಇವರಿಗೆ 51 ವರ್ಷವಾಗಿದೆ, ಇವರ ಪತ್ನಿ ಪುಟ್ಟಲಕ್ಷ್ಮಿ–ಅನಕ್ಷರಸ್ಥೆ. ಎರಡು ಹೆಣ್ಣು ಮಕ್ಕಳಿದ್ದಾರೆ. ಇವರಿಗೆ ಜಮೀನು ಇಲ್ಲ.

ಶ್ರೀ ಮಹೇಶ್ ಅವರು ಮಹದೇಶ್ವರನ ಜನಪದ ಗೀತೆಗಳನ್ನು ಹಾಡುತ್ತಾರೆ. ಇವರು ಹೊಸಹಳ್ಳಿಯ ಜ್ಞಾನಾನಂದ ಪೀಠದ ಸ್ವಾಮಿ ರೇವಣ್ಣ ಅವರಿಂದ ದೀಕ್ಷೆ ಪಡೆದಿದ್ದಾರೆ. ರೇಣುಕ ಸಿದ್ದೇಶ್ವರ ಮೇಲೆ ತತ್ತ್ವಪದಗಳನ್ನು ಹಾಡುತ್ತಾರೆ. ಇದುವರೆಗೂ ಇವರು ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಕಲಾಪ್ರದರ್ಶನವನ್ನು ನೀಡಿದ್ದಾರೆ.

❖

## ಶ್ರೀ ಚಿಕ್ಕೇಗೌಡ (ರಂಗದ ಕುಣಿತ)

ಕೆ.ಎಂ. ದೊಡ್ಡಿಯ ಸಮೀಪವಿರುವ ಮಣಿಗೆರೆಯ ಚಿಕ್ಕೇಗೌಡರಿಗೆ ಈಗ ಎಪ್ಪತ್ತೊಂದು(71) ವರ್ಷ ವಯಸ್ಸಾಗಿದೆ. ವಿದ್ಯೆ ಇಲ್ಲದ ಇವರು ಒಕ್ಕಲಿಗರು. ಇವರ ಮಡದಿ ಶ್ರೀಮತಿ ಸಣ್ಣಮ್ಮನವರು 6ನೇ ತರಗತಿ ಓದಿದ್ದಾರೆ. ಶ್ರೀ ಚಿಕ್ಕೇಗೌಡ – ಸಣ್ಣಮ್ಮ ದಂಪತಿಗಳಿಗೆ ಒಬ್ಬನೇ ಮಗ–ಎಸ್.ಎಸ್.ಎಲ್.ಸಿವರೆಗೆ ವ್ಯಾಸಂಗ ಮಾಡಿದ್ದಾರೆ. ನಾಲ್ಕು ಜನ ಹೆಣ್ಣು ಮಕ್ಕಳಿದ್ದು, ಎಲ್ಲರಿಗೂ ವಿವಾಹ ಮಾಡಿದ್ದಾರೆ. ಒಬ್ಬನೇ ಮಗನಾದ ಶ್ರೀ ಶಿವಲಿಂಗೇ ಗೌಡರಿಗೆ ಒಂದು ಹೆಣ್ಣು ಒಂದು ಗಂಡು ಮಗುವಿದೆ.

ಶ್ರೀ ಚಿಕ್ಕೇಗೌಡರಿಗೆ ರಂಗದ ಕುಣಿತವೆಂದರೆ ಅಚ್ಚುಮೆಚ್ಚು. ರಂಗದ ಹಾಡು ತತ್ತ್ವಪದಗಳನ್ನು ಬಲ್ಲರು.

ಶ್ರೀ ಚಿಕ್ಕೇಗೌಡರಿಗೆ ರಂಗದ ಕುಣಿತ ಅದರಲ್ಲೂ ಮೂರು ಹೆಜ್ಜೆ ಕುಣಿತ ಇವರಿಗೆ ಪ್ರಿಯವಾದ ಕಲೆ.

ಇವರು ಜನಪದ ಗೀತೆಗಳನ್ನು ಹಾಡುತ್ತಾರೆ. 1.ಬಿಳಿಗಿರಿರಂಗ, 2. ಮಾರವ್ವ 3.ಕಬ್ಬಾಳಮ್ಮ ಮೊದಲಾದ ದೇವರನ್ನು ಕುರಿತು ಹಾಡುತ್ತಾರೆ. 1. ರಂಗಯ್ಯಬಾರೋ ರಂಗಪ್ಪ ಬಾರೋ, 2. ಮಾರವ್ವ ಬಾ, ಮಾರವ್ವನ ಗುಡಿಗೆ ತಳಿರು ಬಂದೋ, 3. ಕಬ್ಬಾಳಮ್ಮನಿಗೆ ಕಬ್ಬಿನ ಉಯ್ಯಾಲೆ ಎಂದು ಮೇಲಿನ ಮೂರು ದೇವರ ಬಗೆಗೂ ಇಂಪಾಗಿ ಹಾಡುತ್ತಾರೆ. ❖

## ಕನ್ನಲಿ ಶ್ರೀಮಂಚಯ್ಯ (ಮರಯ್ಯ) [ತಮಟೆ]

ಮದ್ದೂರು ತಾಲ್ಲೂಕು ಕನ್ನಲಿ ಗ್ರಾಮದ ಮಂಚಯ್ಯನವರು ತಮಟೆ ಮತ್ತು ನಗಾರಿ ಬಾರಿಸುವ ಕಲೆಯಲ್ಲಿ ತಮ್ಮದೇ ಆದ ಛಾಪನ್ನೊತ್ತಿದ್ದಾರೆ. ಶ್ರೀಕುಂಟಯ್ಯ ಮತ್ತು ಶ್ರೀಮತಿ ಮರಲಿಂಗಮ್ಮ ದಂಪತಿಗಳ ಪುತ್ರ ಮರಯ್ಯ, ಸುಮಾರು 63 ವಯಸ್ಸಿನವರು, ಅನೇಕ ಶಿಷ್ಯರನ್ನು ತರಬೇತಿಗೊಳಿಸಿದ್ದಾರೆ. ತಂದೆಯವರಿಂದ ತಮಟೆ ಮತ್ತು ನಗಾರಿ ಬಾರಿಸುವ ಕಲೆ ಅನುವಂಶಿಕವಾಗಿ ಬಂದಿದೆ. ಹರಿಜನರಾದ ಇವರು ತಮಟೆಯನ್ನು ಹರಿಜನರೇ ಬಡಿಯಬೇಕೆಂದೇನಿಲ್ಲ, ಯಾರು ಬೇಕಾದರೂ ಬನ್ನಿ ಕಲಿಸ್ತೀನಿ ಎಂದು ಕರೆ ಕೊಟ್ಟು ಈ ಕಲೆಯನ್ನು ಅನ್ಯಜನಾಂಗದವರಿಗೂ ಕಲಿಸಿದ್ದಾರೆ.

ಶ್ರೀಮರಯ್ಯ ಅವರ ವೃತ್ತಿ ಕೃಷಿ, ತಮಟೆ ಕಲೆ ಇವರ ಹವ್ಯಾಸ. ತಮಟೆ ಶಬ್ದ ಇಲ್ಲದೇ ಊರುಗಳಲ್ಲಿ ಯಾವ ಹಬ್ಬಗಳೂ ಆಗುವುದಿಲ್ಲ ಎನ್ನುತ್ತಾರೆ.

ಮದ್ದೂರಿನ ಜನಪದ ಮೇಳದಲ್ಲಿ ತಮಟೆ ಮತ್ತು ನಗಾರಿ ಬಾರಿಸುವ ಸ್ಪರ್ಧೆಯಲ್ಲಿ ಇವರು ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ.

❖

## ಶ್ರೀ ಸಿದ್ದಯ್ಯ (ಪೂಜಾಕುಣಿತ)

ಶ್ರೀಸಿದ್ದಯ್ಯನವರು ಬೋಯಿ ಜನಾಂಗದ ಶ್ರೀಕುಂಡಸಿದ್ದಬೋತಿ ಮತ್ತು ತಿಮ್ಮಮ್ಮನವರ ಮಗ ತಂದೆ ಪೂಜಾಕುಣಿತದಲ್ಲಿ ಪ್ರಸಿದ್ಧ ಪಡೆದಿದ್ದರಂತೆ, ಸಿದ್ದಯ್ಯ ತೈಲೂರು ಪಟ್ಟಲದಮ್ಮನ ತಳಿಕಟ್ಟಿ ಅಲಂಕರಿಸಿ ಪೂಜೆ ಹೊತ್ತು ಕುಣಿಯುತ್ತಾರೆ. ಇವರಿಗೆ ಸುಮಾರು ಅರವತ್ತು ವರ್ಷ ವಯಸ್ಸಾಗಿದೆ.

❖

## ಶ್ರೀ ಬಸವೇಗೌಡ (ಪಟಾಕುಣಿತ)

ಎಲೆಕೊಪ್ಪದ ಶ್ರೀ ರಂಗೇಗೌಡ ಮತ್ತು ಶ್ರೀಮತಿ ಕೆಂಪಮ್ಮನವರ ಮಗ ಶ್ರೀ ಬಸವೇಗೌಡರು. ಇವರಿಗೆ ಈಗ 76 ವರ್ಷಗಳ ಮೇಲಾಗಿದೆ. ಇವರು ತಮ್ಮ ತಂದೆಯವರಿಂದ ಪಟಕುಣಿತವನ್ನು ಕಲಿತು ಕಾಲಿಗೆ ಗೆಜ್ಜೆ ಕಟ್ಟಿ ಪಟ ಹಿಡಿದು ಗುಂಪಿನಲ್ಲಿ ಒಬ್ಬರಾಗಿ ತಾರುಣ್ಯದಲ್ಲೇ ಕುಣಿಯಲಾರಂಬಿಸಿದ ಹಿರಿಯ ಕಲಾವಿದರಿವರು.

ಇವರು ಭಾಗವತ ಸಂಪ್ರದಾಯದ ಕಥೆಗಳನ್ನು, ಹಾಡುಗಳನ್ನು ಒಂದು ಹಗಲು ಒಂದು ಇರುಳು ದೀರ್ಘಕಾಲ ಹೇಳುವ-ಹಾಡುವಷ್ಟು ಸಾಹಿತ್ಯ ಇವರಲ್ಲಿದೆ. ತಾಯಿ ಕೆಂಪಮ್ಮ ಅವರು ಜನಪದ ಗೀತೆಗಳನ್ನು ಹಾಡುವುದರಲ್ಲಿ ನಿಪುಣರಂತೆ, ತಾಯಿಯಿಂದ ಶ್ರೀ ಬಸವೇಗೌಡರಿಗೆ ಕಥಿಸುವ ಹಾಡುವ ನೈಪುಣ್ಯವೂ ತಂದೆಯಿಂದ ಕುಣಿಯುವ ಕಲೆಯೂ ಇವರಿಗೆ ರಕ್ತಗತವಾಗಿ ಬಂದಿದೆ.

ಆದಿಚುಂಚನಗಿರಿ ಕ್ಷೇತ್ರ ಇವರ ಕಲೆಗೆ ಪ್ರೋತ್ಸಾಹ ನೀಡಿದೆ. ಶ್ರೀ ಬಸವೇಗೌಡರು ವಿಶ್ವಕನ್ನಡ ಸಮ್ಮೇಳನ ಹಂಪಿಉತ್ಸವ, ಕಾವೇರಿ ಉತ್ಸವ, ಜಾನಪದ

ಲೋಕ, ಆತ್ಮಲಿಂಗೇಶ್ವರ ಕ್ಷೇತ್ರ, 4ನೇ ರಾಷ್ಟ್ರೀಯ ಕ್ರೀಡಾ ಕೂಟ, ಪ್ರದರ್ಶನ ನೀಡಿ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

ಇವರ ಭಾಗವಂತಿಕೆ ಹಾಡುಗಳು ಬೆಂಗಳೂರು ಆಕಾಶವಾಣಿಯಿಂದ ಪ್ರಸಾರಗೊಂಡಿವೆ.

❖

## ಶ್ರೀ ಬಿ.ಕೆ ರಾಮಣ್ಣ (ಪಟಾ ಕುಣಿತ)

ಬೈರಸಂದ್ರದ ಶ್ರೀಕರೀಗೌಡ ಮತ್ತು ಶ್ರೀಮತಿ ಲಕ್ಷ್ಮಮ್ಮನವರ ಪುತ್ರ ಶ್ರೀ ಬಿ.ಕೆ ರಾಮಣ್ಣನವರು ತಮ್ಮ 16ನೇ ವಯಸ್ಸಿನಲ್ಲಿ ಒಂದು ಸಣ್ಣ ಪಟವನ್ನು ತಾನೇ ತಯಾರಿಸಿ ಹಿರಿಯರೊಡನೆ ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯಲಾರಂಭಿಸಿದರು.

ಶ್ರೀ ರಾಮಣ್ಣನವರು ಬಿದಿರಿನ ಜವಳಿ ಪಟವನ್ನು ಹಿಡಿದು ಕುಣಿಯಲು ಅಭ್ಯಾಸ ಮಾಡಿ, ಹೆಗಲಿಗೆ ಅಡ್ಡಲಾಗಿ ಇಳಿಬಿಟ್ಟ ಗಟ್ಟಿ ಬಟ್ಟೆಯ 'ನವಾರ'ದಲ್ಲಿ ಸಿಕ್ಕಿಸಿದ ಪಟವನ್ನು ಬಲಗೈಲಿ ಹಿಡಿದು ತಮಟೆ, ನಗಾರಿಯ ಶಬ್ದಕ್ಕೆ ಅನುಗುಣವಾಗಿ ಕುಣಿಯತೊಡಗಿ ಜನರ ಮೆಚ್ಚುಗೆ ಗಳಿಸಿದರು. ಇವರಿಗೆ 65 ವರ್ಷಗಳ ಮೇಲಾಗಿದೆ.

1968 ರಲ್ಲಿ ಮಂಗಳೂರಿನಲ್ಲಿ ನಡೆದ ಜಾನಪದ ಮೇಳಕ್ಕೆ ಶ್ರೀ ಜೀಶಂಪ ಅವರು ಇವರನ್ನು ಕರೆದುಕೊಂಡು ಹೋಗಿ ಇವರಿಂದ ಪಟಾಕುಣಿತದ ಪ್ರದರ್ಶನ ನೀಡಿಸಿದರಂತೆ.

ರಾಮಣ್ಣನವರು-ಮೈಸೂರು ದಸರಾ, ಬೆಂಗಳೂರಿನ ಕನ್ನಡ ರಾಜ್ಯೋತ್ಸವ, ರಾಜ್ಯ ಮಟ್ಟದ ಜಾನಪದ ಸಮ್ಮೇಳನ-ಬೆಂಗಳೂರು, ಮಂಡ್ಯ, ಮದ್ದೂರು- ಇಲ್ಲೆಲ್ಲಾ ತಮ್ಮ ಪಟಾಕುಣಿತದ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದಿದ್ದಾರೆ. ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ನೃತ್ಯ, ಕೊಡಗಿನಲ್ಲಿ ನಡೆದ ವಿಭಾಗದ ಜನಪದ ಕುಣಿತದಲ್ಲೂ ಪ್ರಥಮ ಸ್ಥಾನ ಪಡೆದಿದ್ದಾರೆ. 1985ರಲ್ಲಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ, 1986ರಲ್ಲಿ ಬೆಂಗಳೂರಿನಲ್ಲಿ ನಡೆದ ಸಾರ್ಕ್ ಸಭೆಯಲ್ಲೂ ವಿದೇಶಿಯರ ಮುಂದೆ ಪ್ರದರ್ಶನ ನೀಡಿದ ಹೆಗ್ಗಳಿಕೆ ರಾಮಣ್ಣನವರದು.

ಶ್ರೀ ಬಿ.ಕೆ.ರಾಮಣ್ಣನವರ ಪತ್ನಿ ಶ್ರೀಮತಿ ಕಮಲಮ್ಮನವರು ಈ ದಂಪತಿಗಳಿಗೆ ನಾಲ್ಕು ಜನ ಹೆಣ್ಣುಮಕ್ಕಳು, ಒಬ್ಬ ಮಗನಿದ್ದಾನೆ. ಶ್ರೀ ರಾಮಣ್ಣನವರು ಒಕ್ಕಲಿಗರು, ಕೃಷಿಜೀವಿ. ಇವರಿಗೆ ಅರವತ್ತೈದು ವರ್ಷಗಳಾಗಿವೆ. ಇವರಿಗೆ ಜಾನಪದ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ.

❖

## ಶ್ರೀ ಚಿಕ್ಕೀರಯ್ಯ (ಪಾಳೇಗಾರನ ವೇಷ)

ನಾಗಮಂಗಲ ತಾಲ್ಲೂಕಿನ ಬ್ಯಾಲದ ಕೆರೆಯ ಚಿಕ್ಕೀರಯ್ಯ ಜಾಂಬವಂತ ಕುಲದವನು. ಪಾಳೆಯಗಾರನ ವೇಷ ಹಾಕಿ ಹುಲಿಯಂತೆ ಘರ್ಜಿಸುತ್ತಾ ತಮಟೆಯ ಏಟಿಗೆ ತಕ್ಕಂತೆ ಗತ್ತಿನಿಂದ ಹೆಜ್ಜೆ ಇರಿಸಿ ನಡೆಯುವ ಗಂಡು ಕಲೆಯು ತಂದೆ ಯಿಂದ ಮಗನಿಗೆ ಅನುವಂಶಿಕವಾಗಿ ಬಂದದ್ದು.

ಈ ಕಲೆಗೆ ಗಟ್ಟಿಮುಟ್ಟಾದ ಶರೀರ ಮುಖ್ಯ. ಆದರೆ ಚಿಕ್ಕೀರಯ್ಯನವರಿಗೆ ಹೇಳಿಕೊಳ್ಳುವ ಮೈಕಟ್ಟಿಲ್ಲ. ಸಣ್ಣಗಿದ್ದರೂ ಆರ್ಭಟ, ಗತ್ತುಗಾರಿಕೆಗೆ ಕಡಿಮೆ ಇಲ್ಲ. ತಮ್ಮ ಜನ್ಮ ಸ್ಥಳದಲ್ಲೇ ಈ ಕಲೆಯನ್ನು ಕಲಿತು ಪ್ರೇಕ್ಷಕರು ಬೆಚ್ಚಿ ಬೀಳುವಂತೆ ನಟಿಸುವ ಕಲೆ ಕರಗತವಾಗಿದೆ.

ಪಾಳೇಗಾರನ ವೇಷವನ್ನಷ್ಟೇ ಹಾಕಿ ತಮ್ಮ ಕಲಾ ನೈಪುಣ್ಯವನ್ನು ಪ್ರದರ್ಶಿಸುವುದರ ಜೊತೆಗೆ ಇವರು ಉತ್ತಮವಾಗಿ ಜೋಗಿ ಹಾಡನ್ನು ಹಾಡುತ್ತಾರೆ. ತನ್ನ ಕಲೆಯನ್ನು ತನ್ನ ಮಕ್ಕಳಿಗೂ ಕಲಿಸುವ ಆಸೆ ಇವರದ್ದಾಗಿದೆ. ಇವರಿಗೆ ಈಗ 70 ವರ್ಷಗಳ ಮೇಲಾಗಿದೆ.

❖

## ಶ್ರೀ ಗಂಗಣ್ಣ (ಕೋಲಾಟ)

ಕೋಲಾಟ ಮತ್ತು ಕೋಲಾಟದ ಹಾಡುಗಳನ್ನೇ ತಮ್ಮ ಉಸಿರಾಗಿಸಿ ಕೊಂಡಿರುವ ಗಂಗಣ್ಣನವರು ಮಾಯಗೋನಹಳ್ಳಿವರು. ಇವರಿಗೆ ಈಗ 54 ವರ್ಷಗಳಾಗಿವೆ. ಶ್ರೀ ಗಂಗಣ್ಣನವರು ಚಿಕ್ಕಂದಿನಿಂದಲೂ ಕೋಲಾಟದ ಬಗೆಗೆ ಅಪಾರ ಅಭಿಮಾನವುಳ್ಳವರಾಗಿದ್ದರು.

ಶ್ರೀ ಗಂಗಣ್ಣನವರು ತಮ್ಮ 22ರ ಹರಯದಲ್ಲಿ ಮಾನಸ ಗಂಗೋತ್ರಿಯ ವಿದ್ಯಾರ್ಥಿಗಳಿಗೆ ಕೋಲಾಟದ ಶಿಕ್ಷಕರಾದರು. ಅನಂತರ ಮಂಡ್ಯದ ಪಿ.ಇ.ಎಸ್.ಕಾಲೇಜಿನ ವಿದ್ಯಾರ್ಥಿಗಳಿಗೆ ಕೋಲಾಟದ ಶಿಕ್ಷಣ ನೀಡಿದರು. ಹಲವರಿಗೆ ಕೋಲಾಟದ ಗುರುವಾದ ಗಂಗಣ್ಣ ಅನಕ್ಷರಸ್ಥರು.

ಶ್ರೀ ಗಂಗಣ್ಣನವರು ಕೋಲಾಟದ ಪ್ರದರ್ಶನವನ್ನು "ವಿಶ್ವ ಕನ್ನಡ ಸಮ್ಮೇಳನ ದಸರಾ ಮೆರವಣಿಗೆ, ಉಡುಪಿ, ಧರ್ಮಸ್ಥಳ, ಬೇಲೂರು, ಹಳೆಬೀಡು, ಊಟಿ,

ಜಾನಪದ ಲೋಕ, ಹಾಸನ, ಚಿಕ್ಕಮಗಳೂರು" ಮೊದಲಾದ ಕಡೆ 14 ಜನರ ತಮ್ಮ ತಂಡದೊಡನೆ ನೀಡಿದ್ದಾರೆ. ಇವರು ಹದಿಮೂರು ವರಸೆ ಕೋಲನ್ನು ಹಾಕುತ್ತಾ ಇಂಪಾಗಿ ಹಾಡುತ್ತಾರೆ. 1999ರಲ್ಲಿ ಮಂಡ್ಯದಲ್ಲಿ ನಡೆದ ಜನಪದ ಕಲಾವಿದರ ಸಮಾವೇಶದಲ್ಲಿ ಇವರನ್ನು ಸನ್ಮಾನಿಸಿದ್ದಾರೆ.

❖

## ಶ್ರೀ ಎಂ. ಮಹದೇವ ಸ್ವಾಮಿ (ನೀಲಗಾರ ಮೇಳ)

ಕೃಷ್ಣಾಪುರ ಗ್ರಾಮದ ಶ್ರೀ ಮಾದಯ್ಯ ಮತ್ತು ಶ್ರೀಮತಿ ಮಂಚಮ್ಮ ದಂಪತಿಗಳ ಮಗನಾಗಿ ಮಹದೇವ ಸ್ವಾಮಿ ಜನಿಸಿದರು. ಇವರು ಇಂದು ಕೀರ್ತಿನಗರದಲ್ಲಿ ವಾಸಿಸುತ್ತಿದ್ದಾರೆ. ಬಾಲ್ಯದಲ್ಲಿಯೇ ಜನಪದ ಗೀತೆಗಳ ಬಗೆಗೆ ತೀವ್ರ ಆಸಕ್ತರಾಗಿ ಜನಪದ ಗೀತೆಗಳನ್ನು ಹಾಡುವ ಅಬ್ಯಾಸದಲ್ಲಿ ತೊಡಗಿದರು. ಇವರಿಗೆ ಗುರುವಾದವರು ಪೂರಿಗಾಲಿಯ ಬೊಮ್ಮೇಗೌಡ ಮತ್ತು ಉಳ್ಳಂಬಳ್ಳಿ ಮಾದಪ್ಪನವರು. ಇವರಿಂದ ವಿದ್ಯೆ ಕಲಿತು ಎಂ. ಮಹದೇವ ಸ್ವಾಮಿಯವರು ಜನಪದ ಗೀತೆ ಗಾಯಕರಾಗಿ ಸಾಧನೆ ಮಾಡಿ ಸಿದ್ಧಿ ಪಡೆದ ಜನಪದ ಕಲಾವಿದರು. ಇವರಿಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಮಗಳಿದ್ದಾಳೆ. ಪಿ.ಯು.ಸಿ ವ್ಯಾಸಂಗ ಮಾಡಿದ್ದಾರೆ. ಈಕೆಗೆ ವಿವಾಹವಾಗಿದೆ. ಹಿರಿಯ ಮಗನಿಗೂ ವಿವಾಹವಾಗಿದೆ.

ಶ್ರೀ ಎಂ. ಮಹದೇವಸ್ವಾಮಿಯವರು 30ವರ್ಷಗಳಿಂದ ಜನಪದ ಗೀತೆಗಾಯನ ಲೋಕದ ಕೋಗಿಲೆಯಾಗಿ ಹಾಡಿ ಪ್ರಸಿದ್ಧಿ ಪಡೆದಿದ್ದಾರೆ. ಹಾಡುವುದೇ ಇವರ ವೃತ್ತಿಯಾಗಿದೆ. ಇವರು ಹಲವಾರು ಜನಪದ ಕಥೆಗಳನ್ನು ಗೀತೆರೂಪದಲ್ಲಿ ಹಾಡಬಲ್ಲ ವೃತ್ತಿಗಾಯಕರು. ಮಂಟೇಸ್ವಾಮಿ, ಮಹದೇಶ್ವರ, ಮೈದಾಳರಾಮ, ಅರ್ಜುನ ಜೋಗಿ ಹಾಡು, ಚೆನ್ನಿರಾಮ, ನಂಜುಂಡೇಶ್ವರ, ಗಂಗೆ–ಗೌರಿ, ಬಾಲನಾಗಮ್ಮ, ರಂಗಸ್ವಾಮಿ, ಲಿಂಗರಾಜಮ್ಮ, ದೊಡ್ಡಬಸವಣ್ಣ, ಪಿರಿಯಾಪಟ್ಟಣದ ಕಾಳಗ, ನೀಲವೇಣಿ ಮೊದಲಾದ ಕಥನ ಗೀತೆಗಳನ್ನು ನಿರಂತರವಾಗಿ ಹಾಡುತ್ತಾರೆ. ಜನಪದವಾದ್ಯ ತಂಬೂರಿ ನುಡಿಸುವುದರಲ್ಲಿ ಎತ್ತಿದ ಕೈ. ಇವರ ಕಂಠದಿಂದ ಹೊರಡುವ ಇಂಪಾದ ಧ್ವನಿಯಿಂದ ಹಾಡುಗಳನ್ನು ಕೇಳುವುದೇ ರಸಾನ್ವಿತವಾಗಿರುತ್ತದೆ. ಇವರಿಗೆ 60 ವರ್ಷ ಸಮೀಪಿಸುತ್ತಿದೆ.

ಶ್ರೀ ಮಹದೇವಯ್ಯನವರು ಎಸ್.ಎಸ್, ಎಲ್,ಸಿ ವರೆಗೆ ವ್ಯಾಸಂಗ ಮಾಡಿದ್ದಾರೆ. ಇವರು ಹರಿಜನರು.

ಈ ಗಾಯನ ಕೋಗಿಲಿಗೆ ಹಲವಾರು ಬಿರುದು ಸನ್ಮಾನಗಳು ದೊರೆತಿವೆ. ದಿನಾಂಕ 1.1.1998 ರಂದು ಮಂಡ್ಯ ಜಿಲ್ಲಾ ಆಡಳಿತವು ರಾಜ್ಯೋತ್ಸವ ಪ್ರಶಸ್ತಿ ನೀಡಿದೆ.

ಶ್ರೀ ಎಂ. ಮಹದೇವಸ್ವಾಮಿಯವರು ಹಂಪೆ ಉತ್ಸವ, ಬೆಂಗಳೂರು ಕಲಾಕ್ಷೇತ್ರ ಮೈಸೂರು, ಮಹದೇಶ್ವರ ಬೆಟ್ಟ ಮೊದಲಾದ ಕಡೆಗಳಲ್ಲಿ ಜನಪದ ಕಥನಗೀತೆಗಳನ್ನು ವಾದ್ಯನುಡಿಸುತ್ತಾ ಸುಶ್ರಾವ್ಯವಾಗಿ ಹಾಡಿ ಜನರ ಪ್ರೀತಿ ಗೌರವಕ್ಕೆ ಪಾತ್ರರಾಗಿ ಮಂಡ್ಯ ಜಿಲ್ಲೆಯ ಹಿರಿಮೆಯನ್ನು ವೃದ್ಧಿಸಿದ್ದಾರೆ. ಇಂಥ ಕಲಾವಿದರಿಗೆ ಮಾಸಾಶನ ಬರುತ್ತಿಲ್ಲ.

ಇವರ ಕಂಠ ಶ್ರೀಯಿಂದ ಹಲವಾರು ಧ್ವನಿ ಸುರುಳಿಗಳು ಬಂದಿವೆ. ತವರಿನ ಋಣ, ತವರಿನ ಕುಡಿ, ತವರಿನ ತಾಯಿ, ಮಹದೇವನ ಸಹಕಾರ, ಮೈಸೂರು ಮಾವ ಇವು ಜನಪ್ರಿಯವಾಗಿರುವ ಧ್ವನಿ ಸುರಳಿ(ಕ್ಯಾಸೆಟ್)ಗಳು. ಈ ಪ್ರತಿಭಾವಂತನ ಕಲಾ ನೈಪುಣ್ಯವನ್ನು ಮೆಚ್ಚಿ 1999ರಲ್ಲಿ ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶದಲ್ಲಿ ಸನ್ಮಾನಿಸಿರುವುದು ಸ್ತುತ್ಯಕಾರ್ಯ.

❖

## ಶ್ರೀ ಕಾಳೀರಯ್ಯ ತಳಗವಾದಿ (ಕತ್ತಿವರಸೆ, ದೊಣ್ಣೆವರಸ)

ತಳಗವಾದಿಯ ಶ್ರೀ ಉರಿಸಿಂಗಯ್ಯ ಶ್ರೀಮತಿ ತೊಳಸಮ್ಮ ದಂಪತಿಗಳ ಸುಪುತ್ರ ಶ್ರೀ ಕಾಳೀರಯ್ಯನವರಿಗೆ ಈಗ 60 ವರ್ಷಗಳ ಮೇಲೆ ವಯಸ್ಸಾಗಿದೆ.

ಕತ್ತಿ ವರಸೆಯು ಒಂದು ಯುದ್ಧ ಕಲೆ, ಮೂರು ಅಡಿ ಉದ್ದದ ಕತ್ತಿಯನ್ನು ಹಿಡಿದು ನೆಲದಿಂದ ಮೇಲೆ ಚಿಮ್ಮಿ ಎಡ ಬಲ ಮೇಲೆ ಕೆಳಗೆ ಝಳುಪಿಸುವ ಅಪಾಯಕಾರಿ ವರಸೆಗಳನ್ನು ಪ್ರದರ್ಶಿಸುವವನಿಗೆ ಎಂಟೆದೆಬೇಕು.

ಶ್ರೀ ಕಾಳೀರಯ್ಯ ಅವರು ಹತ್ತನೆ ವಯಸ್ಸಿನಲ್ಲಿಯೇ ಈ ರುದ್ರಕಲೆಗೆ ಮಾರುಹೋಗಿ ಅದನ್ನು ಕಲಿತ ಉತ್ತಮ ಕಲಾವಿದ. ಈ ಕಲೆ ಅನವಂಶಿಕವಾಗಿ ಬಂದದ್ದು. 8ನೇ ತರಗತಿವರೆಗೆ ವ್ಯಾಸಂಗ ಮಾಡಿರುವ ಇವರು ನಿತ್ಯ ಕತ್ತಿವರಸೆ ಅಭ್ಯಾಸವನ್ನು ಮಾಡುತ್ತಾರಂತೆ. ಅಭ್ಯಾಸ ಬಲದಿಂದಲೇ ಕತ್ತಿವರಸೆಯ ಜೊತೆಗೆ

ದೊಣ್ಣೆವರಸೆ, ಕೊಡಲಿ ವರಸೆ, ಬೆಂಕಿ ಭರಾಟೆ, ಹುಲಿವೇಷ ಮೊದಲಾದ ವೀರೋಚಿತವಾದ ಕಲೆಗಳನ್ನು ಕರಗತಮಾಡಿಕೊಂಡು ಪ್ರದರ್ಶನ ನೀಡುತ್ತಾರೆ.

ತಳಗವಾದಿಯ ಶ್ರೀ ಕಾಳೀರಯ್ಯನವರು 'ಉಮಾಮಹೇಶ್ವರಿ ಜನಪದ ಕಲಾ ತಂಡ'ವನ್ನು ಕಟ್ಟಿ ಯುವಕರನ್ನು ಪ್ರೋತ್ಸಾಹಿಸುತ್ತಿದ್ದಾರೆ.

ಕಾಳೀರಯ್ಯನವರು ಕಲಿತ ವೀರೋಚಿತ ಗಂಡು ಕಲೆಗಳನ್ನು ಪಾಂಡಿಚೇರಿ, ಅಂಡಮಾನ್ ನಿಕೋಬಾರ್, ಬೆಂಗಳೂರು ಮೊದಲಾಗಿ ರಾಜ್ಯ, ಹೊರರಾಷ್ಟ್ರಗಳಲ್ಲೂ ಪ್ರದರ್ಶಿಸಿ ಜನರ ಮೆಚ್ಚುಗೆ ಗಳಿಸಿ ಅಪರೂಪದ ಜನಪದ ಕಲೆಗಳನ್ನು ಉಳಿಸಿದ್ದಾರೆ.

ಕರ್ನಾಟಕ ಜನಪದ ಕಲಾಮೇಳ 1986, ಮಂಡ್ಯಜಿಲ್ಲಾ ಜನಪದ ಕಲಾವಿದರ ಸಮಾವೇಶ 1999 ರಲ್ಲಿ ಪ್ರದರ್ಶನ ನೀಡಿದ್ದಾರೆ. ಇವರನ್ನು ಕರ್ನಾಟಕ ಜಾನಪದ ಟ್ರಸ್ಟ್, ಆದಿಚುಂಚನಗಿರಿ ಮಠ ಪ್ರಶಸ್ತಿ ನೀಡಿ ಗೌರವಿಸಿದೆ.

ರಾಜ್ಯ, ಹೊರ ರಾಜ್ಯ, ಹೊರರಾಷ್ಟ್ರಗಳಲ್ಲಿ ಜನಪದ ಕಲೆಗಳನ್ನು ಮೆರೆಸಿರುವ ಶ್ರೀ ಕಾಳೀರಯ್ಯನವರನ್ನು ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶದಲ್ಲಿ ಸನ್ಮಾನಿಸಿದ್ದಾರೆ.

❖

## ಶ್ರೀಮತಿ ನರಸಮ್ಮ (ಸೋಬಾನೆ)

ಪಾಂಡವಪುರ ತಾಲ್ಲೂಕಿನ ಮಾದೇಶ್ವರ ಗ್ರಾಮದ ಹರಿಜನರ ನರಸಮ್ಮ ಅವರು ಸೋಬಾನೆ ಪದಗಳನ್ನು ಹಾಡುತ್ತಾರೆ. ಇವರಿಗೆ 65 ವರ್ಷಗಳ ಮೇಲಾಗಿದೆ. ಗಂಡ ಕುಳ್ಳಯ್ಯ ಅವರಿಗೆ 80 ವರ್ಷಗಳಾಗಿದೆ. ಈ ದಂಪತಿಗಳಿಗೆ 40 ವರ್ಷದ ನಾಗರತ್ನ, 35 ವರ್ಷದ ಕೃಷ್ಣ, 28 ವರ್ಷದ ಭಾಗ್ಯ – ಮಕ್ಕಳಿದ್ದಾರೆ.

ಅರ್ಧ ಎಕರೆ ಹೊಲವಿದೆ. ನರಸಮ್ಮನವರ ಗುರು ತಾಯಿ ಮಾಯಮ್ಮ. ನರಸಮ್ಮನವರು 30 ವರ್ಷಗಳಿಂದಲೂ ಹಾಡುತ್ತಿದ್ದಾರೆ. ಸೋಬಾನೆಯ ಪದಗಳನ್ನು ಮುಖ್ಯವಾಗಿ ಹಾಡುತ್ತಾರೆ. ಚಲುವರಾಯಸ್ವಾಮಿ, ಮಾದೇಶ್ವರ, ಹುಚ್ಚಮ್ಮ, ಉತ್ತರದೇವಿ, ಅಣ್ಣ– ತಮ್ಮಂದಿರ ಹಾಡು, ಬೀಸುವ ಪದಗಳು, ದೂರಿಪದ ಮೊದಲಾದ ಗೀತೆಗಳನ್ನು ಆಕಾಶವಾಣಿಯಲ್ಲಿ ಹಾಡಿದ್ದಾರೆ.

ನರಸಮ್ಮನವರ ಗೀತೆ ಗಾಯನವನ್ನು ಮೆಚ್ಚಿ–ಲಕ್ಷ್ಮೀ ಸಾಗರ, ಹರಳಕುಪ್ಪೆ ಮಂಡ್ಯಜಿಲ್ಲಾಡಳಿತ, ಮೈಸೂರು ಅರಮನೆ, ಚುಂಚನಗಿರಿ, ಮಂಡ್ಯದ ರೇಷ್ಮೆ

ಇಲಾಖೆ, ಬೆಂಗಳೂರು ಜನಪದ ಲೋಕ, ಪಾಂಡವಪುರ– ಮೊದಲಾದ ಸ್ಥಳಗಳಲ್ಲಿ ಸನ್ಮಾನಿಸಿದ್ದಾರೆ.

❖

## ಶ್ರೀಮತಿ ಬೋರಮ್ಮ (ಸೋಬಾನೆ)

ಮಹದೇಶ್ವರ ಗ್ರಾಮದ ಹರಿಜನರ ಶ್ರೀಮತಿ ಬೋರಮ್ಮ ಅವರಿಗೆ 70 ವರ್ಷಗಳಾಗಿವೆ. ಈ ಕೆಯ ಪತಿ ಪಟಸ್ವಾಮಯ್ಯ ತೀರಿಕೊಂಡಿದ್ದಾರೆ. 40 ವರ್ಷಗಳ ಮಗ ಬೆಟ್ಟಸ್ವಾಮಯ್ಯ, 35 ವರ್ಷಗಳ ಚಲುವ, 30 ವರ್ಷಗಳ ಮಾದೇವ – ಇವರು ಅರ್ಧ ಎಕರೆ ಜಮೀನಿನಲ್ಲಿ (ಹೊಲ) ದುಡಿಯುತ್ತಾರೆ; ಬಡತನದ ಬಾಳು.

ಶ್ರೀಮತಿ ಬೋರಮ್ಮ ಅವರು ಸೋಬಾನೆ ಪದ, ಚಲುವರಾಯಸ್ವಾಮಿ ಮಾದೇಶ್ವರ ಕಂಬದಮ್ಮ, ಭೈರವೇಶ್ವರ ಜನಪದ ಗೀತೆಗಳನ್ನು ಹಾಡುತ್ತಾರೆ. ರಾಗಿ ಕಲ್ಲಿನ ಪದ, ಜೋಗುಳದ ಪದ, ಅಕ್ಕ – ತಂಗಿಯರ ಪದ, ತಂದೆ – ತಾಯಯ ಮೇಲೆ ಹಾಡುತ್ತಾರೆ.

ಇವರ ಹಾಡುಗಾರಿಕೆಯನ್ನು ಮೆಚ್ಚಿದ ಜನತೆ, ಸಂಘ ಸಂಸ್ಥೆಗಳು ಸನ್ಮಾನಿಸಿವೆ: ಅರಳಕುಪ್ಪೆ, ಲಕ್ಷ್ಮೀಸಾಗರ, ಪಾಂಡವಪುರ, ಮಂಡ್ಯ, ಮೈಸೂರು ಬೆಂಗಳೂರು, ಚುಂಚನಗಿರಿ, ಜನಪದ ಲೋಕ. ಹಾಡುವ ಹಕ್ಕಿ ಬೋರಮ್ಮ ಅವರು ಇಂದೂ ಲವಲವಿಕೆಯಿಂದ ಹಾಡುತ್ತಾರೆ.

❖

## ಶ್ರೀಮತಿ ಸರೋಜಮ್ಮ (ಸೋಬಾನೆ)

ಪಾಂಡವಪುರ ತಾಲ್ಲೂಕಿನ ಕೆರೆ ತೊಣ್ಣೂರಿನ 65 ವರ್ಷಧ ನಂಜುಂಡೇಗೌಡರ ಧರ್ಮಪತ್ನಿ ಶ್ರೀಮತಿ ಸರೋಜಮ್ಮ ಅವರಿಗೆ 52 (ಐವತ್ತೆರಡು) ವರ್ಷಗಳಾಗಿವೆ. ಒಕ್ಕಲಿಗರಾದ ಇವರ ಕಸುಬು ವ್ಯವಸಾಯ. 30 ವರ್ಷದ ಲೋಕೇಶ, 27 ವರ್ಷದ ಶ್ರೀಕಂಠ ಇವರ ಮಕ್ಕಳು

ಇವರಿಗೆ ಒಂದು ಎಕರೆ ಹೊಲವಿದೆ. ಸಾಧಾರಣವಾದ ಮನೆ ಇದೆ. ಸರೋಜಮ್ಮ ಅವರ ತಂದೆ ಸಣ್ಣೇಗೌಡರು ತೀರಿಕೊಂಡಿದ್ದಾರೆ; ತಾಯಿ 90 ವರ್ಷದ ಕೆಂಪಮ್ಮ ಇದ್ದಾರೆ.

ವ್ಯವಸಾಯದ ಜೊತೆಗೆ ಸೋಬಾನೆ ಪದಗಳನ್ನು ಹಾಡುತ್ತ ಬದುಕಿನ ನೋವನ್ನು ನುಂಗಿಕೊಂಡಿದ್ದಾರೆ.

ಸೋಬಾನೆ ಪದಗಳನ್ನು ಲಕ್ಷ್ಮಿಸಾಗರದ ಕೃಷ್ಣೆಗೌಡ ಮತ್ತು ಹೆಗ್ಗಡ ಹಳ್ಳಿ ಕೃಷ್ಣೇಗೌಡರಿಂದ ಕಲಿತುದಾಗಿ, ಅವರೇ ನನ್ನ ಗುರುಗಳು ಎನ್ನುತ್ತಾರೆ.

ಶ್ರೀಮತಿ ಸರೋಜಮ್ಮ ಅವರು – ಸೋಬಾನೆ, ಹನುಮಂತರಾಯ, ಚೌಡಮ್ಮ, ಭೈರವನ ಮೇಲೆ ಸುಶ್ರಾವ್ಯವಾಗಿ ಹಾಡುತ್ತಾರೆ. ರಾಗಿಕಲ್ಲಿನ ಪದ, ಜೋಗುಳದ ಪದ, ದೂರಿಪದ, ಮಾದೇಶ್ವರ, ದೇವರ ಹೂ ಹೊಂಬಾಳೆ ಪದಗಳನ್ನೂ ಹಾಡುತ್ತಾರೆ. ಇವರು ಕಳೆದ 20 ವರ್ಷಗಳಿಂದಲೂ ಹಾಡುತ್ತಿದ್ದಾರೆ.

ಇವರು ಜನಪದ ಲೋಕ, ಭೋವಿ ಮಠ, ಚುಂಚನಗಿರಿ, ಹನಕೆರೆ, ಬೆಂಗಳೂರು, ಮೈಸೂರು, ಮೇಲುಕೋಟೆ, ಮಂಡ್ಯ, ತುಮಕೂರು, ಮೊದಲಾದ ಕಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇದುವರೆಗೆ ಇವರಿಗೆ ಸನ್ಮಾನ ಪ್ರಶಸ್ತಿ ಬಂದಿಲ್ಲ.

❖

## ಶ್ರೀಮತಿ ಪುಟ್ಟಲಿಂಗಮ್ಮ (ಜನಪದ ಗೀತೆ ಗಾಯಕಿ)

ಶ್ರೀರಂಗಪಟ್ಟಣದ ತಾಲ್ಲೂಕಿನ ಸಬ್ಬನ ಕಪ್ಪೆಯ ಪುಟ್ಟಲಿಂಗಮ್ಮನವರಿಗೆ 60 ವರ್ಷಗಳಾಗಿವೆ, ಇವರ ಗಂಡ ಶ್ರೀದಾಸಯ್ಯ ಅವರಿಗೆ 70ವರ್ಷಗಳಾಗಿವೆ. ಇವರಿಗೆ ವೃದ್ಧಾಪ್ಯವೇತನ ಬರುತ್ತಿದೆ. ದಂಪತಿಗಳಿಬ್ಬರೂ ಅವಿದ್ಯಾವಂತರು, ಹರಿಜನರು. ಇವರ ನಾಲ್ಕು ಮಕ್ಕಳಲ್ಲಿ ಇಬ್ಬರು ಗಂಡು ತೀರಿಕೊಂಡಿದ್ದಾರೆ. ಇವರಿಗೆ ಮಕ್ಕಳಿದ್ದಾರೆ. ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಮೊದಲ ಮಗಳಿಗೆ 2 ಗಂಡು, ಒಂದು ಹೆಣ್ಣು ಮಗುವಿದೆ. ಎರಡನೆಯ ಮಗಳಿಗೂ 2 ಗಂಡು ಒಂದು ಹೆಣ್ಣು ಮಗು ಇದೆ.

ಶ್ರೀಮತಿ ಪುಟ್ಟಲಿಂಗಮ್ಮ ನಾಲ್ಕು ಜನರ ತಂಡವನ್ನು ಕಟ್ಟಿದ್ದಾರೆ, ಒಟ್ಟಾಗಿ ಕಾರ್ಯಕ್ರಮ ನೀಡುತ್ತಾರೆ. ಪುಟ್ಟಲಿಂಗಮ್ಮನವರು ಮೂಲಧಾಟಿಯಲ್ಲಿ ಜನಪದ ಗೀತೆಗಳನ್ನು ಇಂಪಾಗಿ ಹಾಡುತ್ತಾರೆ.

1. ಸೋಬಾನೆ ಪದ, 2. ಕಾಳಮ್ಮ, ಗೌರಿ ಗಣೇಶ 3. ಮದುವೆಯಲ್ಲಿ ದೇವರು ತರುವ ಹಾಡು 4. ಚಾಮುಂಡೇಶ್ವರಿ 5. ಮೇಲುಕೋಟೆ ಚಲುವರಾಯ

6. ಮಲೆ ಮಹದೇಶ್ವರ 7. ನಾಟಿಪದಗಳು 8. ರಾಗಿ ಬೀಸುವ ಪದ 9. ಮಾರಮ್ಮನಿಗೆ ತಂಪು ತೋರುವ ಹಾಡು 10. ಜೋಗಿ– ಚುಂಚನಗಿರಿ ಭೈರವನ ಹಾಡು 11. ಸಂಕಮ್ಮನ ಹಾಡು ಮೊದಲಾದ ಗೀತೆಗಳನ್ನು ಹಾಡುತ್ತಾರೆ.

ಪುಟ್ಟಲಿಂಗಮ್ಮನವರು ಮೈಸೂರು ಮತ್ತು ಬೆಂಗಳೂರು ಆಕಾಶವಾಣಿ, ಮೈಸೂರು ವಸ್ತು ಪ್ರದರ್ಶನ, ಸುತ್ತೂರು ಮಠ, ಅಕ್ಕಿ ಹೆಬ್ಬಾಳು, ಕೆರೆ ತೊಣ್ಣೂರು, ಜಾನಪದ ಲೋಕ ಮೊದಲಾದ ಕಡೆಗಳಲ್ಲಿ ಹಾಡಿದ್ದಾರೆ.

ಮಂಡ್ಯಜಿಲ್ಲಾ ಆಡಳಿತ ಮತ್ತು ಅಕ್ಕಿ ಹೆಬ್ಬಾಳಿನಲ್ಲಿ ಶಾಲುಹೊದಿಸಿ ಸನ್ಮಾನಿಸಿದ್ದಾರೆ.

❖

## ಶ್ರೀಮತಿ ದೊಡ್ಡತಾಯಮ್ಮ (ಸೋಬಾನೆ)

ದೊಡ್ಡತಾಯಮ್ಮನವರು ಶ್ರೀರಂಗಪಟ್ಟಣ ತಾಲ್ಲೂಕಿನ ಸಬ್ಬನಕುಪ್ಪೆ ಗ್ರಾಮದವರು–ಹರಿಜನರು; 75 ವರ್ಷದ ಶ್ರೀತಿಮ್ಮರಾಜು ಇವರ ಪತಿ. ದೊಡ್ಡತಾಯಮ್ಮ ಅವರಿಗೆ 60 ವರ್ಷಗಳಾಗಿವೆ, ಅವಿದ್ಯಾವಂತೆ.

ಇವರಿಗೆ ಎರಡು ಹೆಣ್ಣು ಮಕ್ಕಳಿದ್ದಾರೆ. ರೇಣುಕಾ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿ ಚಾಮರಾಜನಗರದ ಶಿವಮಲ್ಲುವಿನೊಡನೆ ವಿವಾಹವಾಗಿ ಒಂದು ಗಂಡು, ಒಂದು ಹೆಣ್ಣು ಮಗು ಇದೆ. ಎರಡನೆಯ ಮಗಳು ಪಿ.ಯು.ಸಿ ವ್ಯಾಸಂಗ ಮಾಡಿದ್ದಾಳೆ.

ಶ್ರೀಮತಿ ದೊಡ್ಡತಾಯಮ್ಮ ಅವರು ಮೈಸೂರು ಆಕಾಶವಾಣಿ, ಜಾನಪದ ಲೋಕ, ಹನುಮಂತನಗರ, ಬೆಂಗಳೂರು ಆಕಾಶವಾಣಿ, ಮೇಲುಕೋಟೆ, ರಾಮನಗರಗಳಲ್ಲಿ ನಾಲ್ಕು ಜನರ ತಂಡ ಕಟ್ಟಿಕೊಂಡು ಮುಖ್ಯಗಾಯಕಿಯಾಗಿ ಹಾಡಿದ್ದಾರೆ.

❖

## ಹಿಂದಲ ಹಟ್ಟಿ ಶ್ರೀ ಚನ್ನೇಗೌಡ (ಬೆಂಕಿ ಭರಾಟೆ)

ಶ್ರೀ ರಂಗಪಟ್ಟಣ ತಾಲ್ಲೂಕಿನ ಅರಕರೆಯ ಹಿಂದಲಹಟ್ಟಿಯ ಶ್ರೀ ತಮ್ಮೇಗೌಡ ಮತ್ತು ಶ್ರೀಮತಿ ಸಿದ್ದಮ್ಮನವರ ಪುತ್ರ ಶ್ರೀ ಚನ್ನೇಗೌಡರು. ಇವರಿಗೆ ಈಗ ಎಪ್ಪತ್ತೆರಡು ವರ್ಷಗಳಾಗಿವೆ.

ಶ್ರೀಮತಿ ಸಿದ್ದಮ್ಮನವರು ಜನಪದ ವೈದ್ಯೆ-ಗಿಡಮೂಲಿಕೆಯ ಔಷಧ ಕೊಟ್ಟು ರೋಗ ನಿವಾರಣೆ ಮಾಡುವುದರಲ್ಲಿ ಸಿದ್ಧಹಸ್ತರು. ಇವರ ಮನೆ ಜಾನಪದ ಪರಿಸರದಿಂದ ಶೋಭಿಸುತ್ತದೆ. ಕುರಿ ಮಂದೆ, ದನ-ಕರು, ಕೋಳಿಗಳ ಕೂಗಾಟ ಇವೆಲ್ಲ ತುಂಬು ಸಂಸಾರವನ್ನು ಸೂಚಿಸುತ್ತವೆ.

ಅರಕೆರೆಯಲ್ಲಿ ಗರಡಿ ಮನೆಗಳಿವೆ. ಗರಡಿ ಸಾಮಿನಂತೆಯೇ ದೊಣ್ಣೆ ಸಾಮು ಒಂದು ಕಲೆಯಾಗಿ ಕಂಗೊಳಿಸುತ್ತದೆ. ಬೆಸ್ತಗೇರಿ, ಒಕ್ಕಲಿಗಗೇರಿಗಳಲ್ಲಿ ಗರಡಿಯ ಗುರುಗಳಿದ್ದಾರೆ. ಒಕ್ಕಲಿಗರ ಹೊಟ್ಟೇದಾಸನ ದ್ಯಾವೇಗೌಡ ದೊಣ್ಣೆವರಸೆಯಲ್ಲಿ ಅರಕೆರೆಯ ಸುತ್ತಲ ಪ್ರದೇಶದಲ್ಲಿ ಗುರುವಾಗಿ ಹೆಸರುಗಳಿಸಿದ್ದ.

ಅರಕೆರೆಯ ಹಿಂದಲ ಹಟ್ಟಿಯ ತಮ್ಮೇಗೌಡರ ಮಗ ಚನ್ನೇಗೌಡ ಹದಿನೈದು ವರ್ಷದವನಾಗಿದ್ದಾಗ, ಕುರಿಗಳನ್ನು ಮೇಯಿಸುತ್ತಿದ್ದಾಗ ಹೊಟ್ಟೆದಾಸನ ದೇವೇಗೌಡ ಕತ್ತಿವರಸೆ, ದೊಣ್ಣೆವರಸೆ ಬೆಂಕಿ ಭರಾಟೆ ಈ ಮೂರು ಕಲೆಗಳನ್ನು ಚನ್ನೇಗೌಡರಿಗೆ ಕಲಿಸಿದರಂತೆ. ಚನ್ನೇಗೌಡರು ಜನಪದ ಕಲೆಗಳನ್ನು ಕಲಿಸಿದ ಗುರು ದೇವೇಗೌಡರನ್ನು ಕೃತಜ್ಞತೆಯಿಂದ, ಗೌರವದಿಂದ ಈಗಲೂ ನೆನಪಿಸಿಕೊಳ್ಳುತ್ತಾರೆ. ಚನ್ನೇಗೌಡರು ಬೆಂಕಿ ಭರಾಟೆಯ ಪ್ರದರ್ಶನದಲ್ಲಿ ಪ್ರಸಿದ್ಧರು. ಕತ್ತಿ ವರಸೆ, ದೊಣ್ಣೆ ವರಸೆ, ಬೆಂಕಿ ಭರಾಟೆ ಈ ಮೂರು ಕಲೆಗಳಲ್ಲೂ ಸವ್ಯಸಾಚಿಎನ್ನಿಸಿಕೊಂಡಿದ್ದಾರೆ.

ಹಿಂದಲ ಹಟ್ಟಿ ಚನ್ನೇಗೌಡರ ತಮ್ಮ ಹಿಂದಲ ಹಟ್ಟಿ ಚೆನ್ನಸ್ವಾಮಿಯವರೂ ಜನಪದ ಕಲಾವಿದರೇ, ಅಣ್ಣನ ಹಾದಿಯಲ್ಲೇ ನಡೆದು ಬೆಂಕಿ ಭರಾಟೆ, ದೊಣ್ಣೆವರಸೆ, ಕತ್ತಿವರಸೆಗಳಲ್ಲಿ ಪರಿಣತರಾಗಿದ್ದಾರೆ.

ಶ್ರೀ ಚನ್ನೇಗೌಡರೊಡನೆ ಶ್ರೀ ದಮ್ಮಚೌಡಿ ಕೃಷ್ಣೇಗೌಡ, ಕುಣಜೀಗಿ ಪುಟ್ಟೇಗೌಡ, ಶ್ರೀ ಚಿನ್ನಸ್ವಾಮಿ ಇವರೆಲ್ಲ ಸ್ವಲ್ಪ ಹೆಚ್ಚು ಕಮ್ಮಿ ಒಂದೇ ಓರಗೆಯವರು, 45 ರಿಂದ 50 ವರ್ಷದವರಾಗಿದ್ದಾರೆ. ಬೆಂಕಿ ಭರಾಟೆ, ದೊಣ್ಣೆವರಸೆಯ ಪ್ರದರ್ಶನವನ್ನು ಜತೆಗೂಡಿ ನೀಡುತ್ತಾರೆ.

ಶ್ರೀ ಚನ್ನೇಗೌಡರು ಮತ್ತು ಅವರ ತಂಡವು ಮಂಡ್ಯ, ನಾಗಮಂಗಲ, ಆದಿಚುಂಚನಗಿರಿ, ಮೈಸೂರು, ಮಡಿಕೇರಿ, ಮದ್ದೂರು ಮೊದಲಾದ ಕಡೆಗಳಲ್ಲಿ

ಪ್ರದರ್ಶನ ನೀಡಿ ಯಶಸ್ವಿಯಾಗಿದ್ದಾರೆ, ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಹಬ್ಬ-ಹರಿದಿನಗಳಲ್ಲಿ ಆಹ್ವಾನದ ಮೇರೆಗೆ ಹೋಗಿ ತಾವು ಕಲಿತಿರುವ ಜನಪದ ಕಲೆಯ ಪ್ರದರ್ಶನ ನೀಡುತ್ತಾರೆ.

ಶ್ರೀ ಹಿಂದಲ ಹಟ್ಟಿ ಚನ್ನೇಗೌಡರಿಗೆ ವಯಸ್ಸಾಗಿರುವುದರಿಂದ ಈಗ ಪ್ರದರ್ಶನ ನೀಡಲಾರರು. ಬೆಂಕಿ ಭರಾಟೆ ಕಲೆಯನ್ನು ಈ ಪ್ರದೇಶದಲ್ಲಿ ಉಳಿಸಿ ಬೆಳೆಸುತ್ತಿರವವರು ಹಿಂದಲ ಹಟ್ಟಿ ಚನ್ನೇಗೌಡರು. ಗುರುವಾಗಿ ಅನೇಕರಿಗೆ ತಮ್ಮ ಕಲೆಯನ್ನು ಕಲಿಸಿ ತಂಡವನ್ನು ಪ್ರೋತ್ಸಾಹಿಸಿ ಮುನ್ನಡೆಸುತ್ತಿದ್ದಾರೆ.

ಬೆಂಕಿ ಭರಾಟೆಯ ತಂಡವನ್ನು ಇಂದು ಅರಕೆರೆಯ ಮೇಗಳ ಪೇಟೆಯ ಗರಡಿಯ ನೇತೃತ್ವವಹಿಸುವ ಶ್ರೀ ಪುಟ್ಟೇಗೌಡರು ಬೆಳೆಸುತ್ತಿದ್ದಾರೆ.

50 ವರ್ಷಗಳಿಂದ ಶ್ರೀ ಚನ್ನೇಗೌಡರು ಬೆಂಕಿ ಭರಾಟೆಯ ವೈವಿಧ್ಯಮಯವಾದ ಪ್ರದರ್ಶನಗಳನ್ನು ನೀಡಿದ್ದಾರೆ.

ಶ್ರೀ ಹಿಂದಲ ಹಟ್ಟಿ ಚನ್ನೇಗೌಡರು ಮಾಜಿ ಮುಖ್ಯಮಂತ್ರಿ ಶ್ರೀ ಆರ್.ಗುಂಡೂರಾವ್ ಅವರ ಸಮ್ಮುಖದಲ್ಲಿ ನೀಡಿದ ಪ್ರದರ್ಶನವನ್ನು ಈಗಲೂ ಹೆಮ್ಮೆಯಿಂದ ಸ್ಮರಿಸುತ್ತಾರೆ.

ಶ್ರೀ ಚನ್ನೇಗೌಡರ ಮೆಚ್ಚಿನ ಜನಪದ ಕಲೆಗಳಾದ ಕತ್ತಿವರಸೆ, ದೊಣ್ಣೆವರಸೆ, ಬೆಂಕಿ ಭರಾಟೆ ಪ್ರದರ್ಶನವನ್ನು ಮೆಚ್ಚಿ ಜನತೆ ಇವರನ್ನು ಪ್ರೀತಿ ಗೌರವದಿಂದ ಸನ್ಮಾನಿಸಿದ್ದಾರೆ. ಮದ್ದೂರು ತಾಲ್ಲೂಕಿನ ಹನುಮಂತನಗರದ ಶ್ರೀ ಆತ್ಮಲಿಂಗೇಶ್ವರ ಸಾನ್ನಿಧ್ಯದಲ್ಲಿ ಮತ್ತು ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶ (1999)ರಲ್ಲಿ ಆತ್ಮೀಯವಾಗಿ ಸನ್ಮಾನಿಸಿದ್ದಾರೆ.

## ಶ್ರೀ ಮೂಗಣ್ಣ (ಕೃಷ್ಣ)- (ಮರಗಾಲು ಕುಣಿತ)

ಶ್ರೀ ರಂಗಪಟ್ಟಣ ತಾಲ್ಲೂಕು ಅರಕೆರೆಯ ಹೊಸಹಟ್ಟಿಯ ಜವರೇಗೌಡರ ಮಗ ಮೂಗಣ್ಣ (ಕೃಷ್ಣ) ಗಮನಾರ್ಹ ಜನಪದ ಕಲಾವಿದ. ಈತ ಮರಗಾಲನ್ನು ಕಟ್ಟಿಕೊಂಡು ವಿವಿಧ ಭಂಗಿಯಲ್ಲಿ ನಡೆಯುತ್ತಾರೆ; ವಯಸ್ಸು 65 ಆಗಿದೆ.

ಆರಡಿ ಉದ್ದದ ದೊಣ್ಣೆಗೆ ಎರಡು ಕೊನೆಗಳಲ್ಲಿ ಕಬ್ಬಿಣದ ಕೊಂಡಿಗಳಿರುತ್ತವೆ. ಗಂಟೆಗಟ್ಟಲೆ ಸೀಮೆಎಣ್ಣೆಯಲ್ಲಿ ನೆನೆಸಿದ ಬಟ್ಟೆಯ ಸಿಂಬಿಗಳನ್ನು ತೂಗು ಹಾಕಿ, ಅವುಗಳಿಗೆ ಬೆಂಕಿ ಹಚ್ಚಿ ಎರಡು ಕೈಗಳಿಂದಲೂ ಆ ದೊಣ್ಣೆಯನ್ನು ತಿರುಗಿಸುತ್ತಾ

ಲಯಬದ್ಧವಾಗಿ ಹೆಜ್ಜೆ ಹಾಕುತ್ತಾ ವಿವಿಧ ದಿಕ್ಕುಗಳಲ್ಲೂ ಬರ್ರನೆ ತಿರುಗಿಸುತ್ತಾರೆ- ಮರಗಾಲು ಕಟ್ಟಿಕೊಂಡು ಶ್ರೀಮೂಗಣ್ಣ ಅವರು. ಐದು ಅಡಿ ವ್ಯಾಸದ ದುಂಡಾಗಿ ಬಗ್ಗಿಸಿದ ಕಬ್ಬಿಣದ ಚಕ್ರಕ್ಕೆ ಎರಡು ಕಬ್ಬಿಣದ ಕೋಲುಗಳನ್ನು ಅಡ್ಡವಾಗಿ ಸಿಕ್ಕಿಸಿರುತ್ತಾರೆ, ಇವುಗಳ ಕೊನೆಯಲ್ಲಿ ಕಬ್ಬಿಣದ ಕೊಂಡಿಗಳು, ಇವುಗಳಿಗೂ ಸೀಮೆ ಎಣ್ಣೆಯಲ್ಲಿ ನೆನೆಸಿದ ಬಟ್ಟೆಯ ಸಿಂಬಿಗಳನ್ನು ತೂಗಿಹಾಕಿರುತ್ತಾರೆ. ಬೆಂಕಿ ಭರಾಟೆಯು ರಾತ್ರಿ ವೇಳೆ ನಡೆಯುವ ಕಲೆ, ಈ ಚಕ್ರವನ್ನು ತಿರುಗಿಸುವ ಕೈಚಳಕ ಮೆಚ್ಚುವಂಥದ್ದು.

ಶ್ರೀ ಮೂಗಣ್ಣ ಅವರು ಬೆಂಕಿ ಭರಾಟೆಯನ್ನು ಮರಗಾಲು ಕಟ್ಟಿಕೊಂಡು ಪ್ರದರ್ಶಿಸುವ ಚಕ್ರದ ನಾಲ್ಕು ಮನೆಗಳನ್ನು ಕೈಚಳಕದಿಂದ ಬದಲಾಯಿಸುವಂತಯೇ ಪಾದಗಳ ನಡಿಗೆಯೂ ಬದಲಾಗುತ್ತದೆ, ಹೆಜ್ಜೆಗಳು ಬದಲಾದಂತೆ ಚಕ್ರ ತಿರುಗಿಸುವ ರೀತಿಯು ಬದಲಾಗುತ್ತದೆ. ಮರಗಾಲು ಕಟ್ಟಿಕೊಂಡು ಬೆಂಕಿಭರಾಟೆಯ ವೈವಿಧ್ಯಮಯ ಪ್ರದರ್ಶನವನ್ನು ನೀಡುವ ಸಾಮರ್ಥ್ಯ ಶ್ರೀ ಮೂಗಣ್ಣ (ಕೃಷ್ಣ) ಅವರಿಗಿದೆ. ಇವರ ಪ್ರದರ್ಶನವನ್ನು ಪ್ರೇಕ್ಷಕರು ಎವೆಯಿಕ್ಕದೆ ನೋಡುತ್ತಾರೆ.

ಅಖಿಲ ಕರ್ನಾಟಕ ಜನಪದ ಮೇಳ (1986) ಮತ್ತು ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶ (1999)ದಲ್ಲಿ ಶ್ರೀ ಮೂಗಣ್ಣನವರು ವಿಸ್ಮಯ-ಭಯ ಮೂಡಿಸುವ ಮರಗಾಲು ಕಟ್ಟಿಕೊಂಡು ಬೆಂಕಿ ಭರಾಟೆಯ ವೈವಿಧ್ಯತೆಯನ್ನು ಪ್ರದರ್ಶಿಸಿದರು.

❖

## ಶ್ರೀ ಭೂಮಿಗೌಡ (ಕೋಲಾಟ)

ಶ್ರೀ ಭೂಮಿಗೌಡ ಉರುಫ಼ ದಡೀಗೌಡ ಅವರು ಮಳವಳ್ಳಿ ತಾಲ್ಲೂಕಿನ ದೇವಿಪುರದವರು, ಇವರಿಗೀಗ 80 ವರ್ಷಗಳಾಗಿವೆ. ಇವರ ವೃತ್ತಿ ಕೃಷಿ; ಪ್ರವೃತ್ತಿ ಕೋಲಾಟ. ಈ ಕಲೆಯನ್ನು ಪ್ರಚಾರ ಮಾಡುವುದರೊಂದಿಗೆ ಅನೇಕ ಊರುಗಳಲ್ಲಿ ಯುವಕರಿಗೆ ತರಬೇತಿ ನೀಡಿದ್ದಾರೆ.

ಮಂಡ್ಯಜಿಲ್ಲೆಯ ಸಂತೆಕಸಲಗೆರೆ, ಅಂಚೆದೊಡ್ಡಿ, ನಿಡಘಟ್ಟ, ಆಲದಹಳ್ಳಿ, ಮಳವಳ್ಳಿ, ಗಾಜನೂರು, ನೆಲಮಾಕನಹಳ್ಳಿ, ಗುಳಘಟ್ಟ, ತಮ್ಮಡಹಳ್ಳಿ, ಬಿದರಹೊಸಹಳ್ಳಿ, ತಳಗವಾದಿ, ಬಿದರಹಳ್ಳಿ, ಯಲಾದಹಳ್ಳಿ, ಕ್ಯಾತಘಟ್ಟ, ಬೊಮ್ಮನದೊಡ್ಡಿ, ಬೆಳ್ಳೂರು, ಗುರುದೇವರ ಹಳ್ಳಿ, ದೊಡ್ಡರಸಿನಕೆರೆ, ಗೋಪನಹಳ್ಳಿ, ಮುಟ್ಟನಹಳ್ಳಿ, ಯಡಗನಹಳ್ಳಿ,

ಕಾಡುಕೊತ್ತನಹಳ್ಳಿ, ದುಗ್ಗನಹಳ್ಳಿ, ಮಾರ್ಕಾಲು, ಹಿಟ್ಟನಹಳ್ಳಿ ಕೊಪ್ಪಲು, ಕೊದೇನಕೊಪ್ಪಲು, ಸಬ್ಬನಹಳ್ಳಿ, ಬಸವನಹಳ್ಳಿ, ಹನಿಯಂಬಾಡಿ, ಕೊತ್ತತ್ತಿ, ತಡಗವಾಡಿ, ನೇರಳಕೆರೆ, ಕಿರಗಂದೂರು, ಸಿದ್ದಯ್ಯನ ಕೊಪ್ಪಲು, ಕೋಣನಹಳ್ಳಿ, ಮಂಡ್ಯ ಪೇಟೆ ಬೀದಿ – ಈ ಊರುಗಳ ಯುವಕರಿಗೆ ಕೋಲಾಟವನ್ನು ಕಲಿಸಿದ್ದಾರೆ.

ಈ ಪ್ರತಿಭಾವಂತ ಕೋಲಾಟದ ಕಲಾವಿದರು ಗ್ರಾಮಗಳಿಗೆ ಸೈಕಲ್‌ನಲ್ಲಿ ಪ್ರವಾಸ ಮಾಡಿ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಸೀಹಳ್ಳಿ, ಬನ್ನೂರು, ಮಾದಗಹಳ್ಳಿ ಮೊದಲಾದ ಕಡೆಗಳಲ್ಲಿ ಕೋಲಾಟದ ಗುರುವಾಗಿ ಕಲಾ ಸೇವೆ ಮಾಡಿರುವುದು ಶ್ಲಾಘನೀಯವಾದುದು, ಈ ಕಲಾವಿದ ಕೋಲಾಟದ 24 ಕುಣಿತದ ವರಸೆಗಳನ್ನು ಕರಗತಮಾಡಿಕೊಂಡಿದ್ದಾರೆ.

ಶ್ರೀ ಭೂಮಿಗೌಡರು ಕೋಲಾಟದ ಕಲಾವಿದರಷ್ಟೇ ಅಲ್ಲ, ಜನಪದ ಗೀತೆ ಗಾಯಕರೂ ಹೌದು. ಶ್ರೀ ಚೌಡಮ್ಮ, ಮಾದಪ್ಪ, ಚಲುವರಾಯಸ್ವಾಮಿ, ತಿರುಪತಿ ತಿಮ್ಮಪ್ಪ ಮೊದಲಾದ ದೇವರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಸೋಬಾನೆ ಪದಗಳನ್ನು ಇಂಪಾಗಿ ಹಾಡುತ್ತಾರೆ.

ಪ್ರದರ್ಶನ ಕಾರ್ಯಕ್ರಮ 1. ಶ್ರೀ ಭೂಮಿಗೌಡರು 1989ರ ದಸರಾ ಉತ್ಸವ, 2. ಮಂಡ್ಯದಲ್ಲಿ ನಡೆದ 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, 3. 1995ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನಡೆಸಿದ ಕೋಲಾಟ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿ, 4. 1982–84ರಲ್ಲಿ ಯುವಜನ ಮೇಳ, 5. 1997ರಲ್ಲಿ ಮಂಡ್ಯಜಿಲ್ಲಾ ಜಾನಪದ ಕಲಾಮೇಳ, 6. 1997ರ ದಸರಾ ಸಾಂಸ್ಕೃತಿಕ ಉತ್ಸವ 7. 1997ರ 4 ನೇ ರಾಷ್ಟ್ರೀಯ ಕ್ರೀಡಾಕೂಟದ ಮೆರವಣಿಗೆ 8. 1998ರಲ್ಲಿ ನಡೆದ ರಾಜ್ಯಮಟ್ಟದ ಜಾನಪದ ಸಮ್ಮೇಳನ 9. 1999ರಲ್ಲಿ ಮಂಡ್ಯದಲ್ಲಿ ನಡೆದ ಜಿಲ್ಲಾ ಜಾನಪದ ಕಲಾವಿದರ ಸಮಾವೇಶ 10. 1998ರ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರದರ್ಶನ ನೀಡಿ ತಮ್ಮ ಕಲಾನೈಪುಣ್ಯವನ್ನು ವ್ಯಕ್ತಪಡಿಸಿದ್ದಾರೆ.

❖

# ಕಲಾವಿದರ ವಿಳಾಸಗಳು

**ಶ್ರೀ ಪುಟ್ಟೇಗೌಡ**
ಕಾರಸವಾಡಿ, ಸಂತೆಕಸಲಗೆರೆ ಅಂಚೆ
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ
**ಫೋನ್: 08232 – 228375**

**ಸಿದ್ದಪ್ಪ ದೊಡ್ಡ ಬೊಕಳಯ್ಯ**
ಸಂತೆಕಸಲಗೆರೆ, ಮಂಡ್ಯಾತಾ, ಮಂಡ್ಯ ಜಿಲ್ಲೆ.

**ಕಲಾರತ್ನ ಎಚ್.ಎನ್. ಪರಶಿವಮೂರ್ತಿ**
ಹಳೆಬೂದನೂರು, ಮಂಡ್ಯ ತಾಲ್ಲೂಕು, ಜಿಲ್ಲೆ.
**ಮೊ. : 9945643949**

**ಶ್ರೀ ನಿಂಗಣ್ಣ.**
ಜನಪದ ಕಲಾವಿದ
ಹೊಸಹಳ್ಳಿ, ಮಂಡ್ಯನಗರ
**ಮೊ. : 9900848228**

**ಶ್ರೀ ಎಲ್. ಶಂಕರ್**
ಬಿನ್ ದಿವಂಗತ ಲಿಂಗಯ್ಯ, ಇಂಡುವಾಳು
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.

**ಅರ್ಚಕ ಗಂಗಾಧರ**
ಹೊನ್ನೆಮಡು, ಜಿ.ಮಲ್ಲಿಗೆರೆ ಅಂಚೆ,
ದುದ್ದ ಹೋಬಳಿ, ಮಂಡ್ಯ ತಾ. ಮಂಡ್ಯ ಜಿಲ್ಲೆ.

**ಶ್ರೀ ರಾಮಯ್ಯ**
ಬಿನ್ ಕುಂಡು ಬೋರೇಗೌಡ
ಕೀಲಾರ, ಮಂಡ್ಯ ತಾ, ಮಂಡ್ಯ ಜಿಲ್ಲೆ.
**ಮೊ : 9901217113**

**ಶ್ರೀ ಜಿ.ಸಿ ದೊಡ್ಡಹನುಮೇಗೌಡ**
ಬಿನ್ ಸಿಕ್ಕಹನುಮೇಗೌಡ, ಗೊರವಾಲೆ
ಮಂಡ್ಯ ತಾ, ಮಂಡ್ಯ ಜಿಲ್ಲೆ.
**ಮೊ : 9740038943**

**ಶ್ರೀ ಶೀನಪ್ಪ, ಮುದಗಂದೂರು**
ದುದ್ದಹೋಬಳಿ, ಮಂಡ್ಯ ತಾ. ಮಂಡ್ಯ ಜಿಲ್ಲೆ.

**ಶ್ರೀ ಎಚ್. ಎಸ್. ಕೆಂಪಯ್ಯ**
ಬಿನ್ ದಿವಂಗತ ಶಂಭೂವಯ್ಯ
ಬಿ. ಹೊಸೂರು, ಕೆರೆಗೋಡು ಹೋಬಳಿ
ಮಂಡ್ಯ ತಾ. ಮತ್ತು ಜಿಲ್ಲೆ.
**ಫೋ : 08232–345294,**
**ಮೊ. : 9945158010**

**ಶ್ರೀ ಸಿ.ಎಸ್.ಆರಾಧ್ಯ**
ಬಿನ್ ಸಿದ್ಧಲಿಂಗಾರಾಧ್ಯ, ಗುಡಿಗೇನಹಳ್ಳಿ
ಮಂಡ್ಯ ತಾ, ಮಂಡ್ಯ ಜಿಲ್ಲೆ.
**ಮೊ : 9901732784**

**ಶ್ರೀ ಬೆಟ್ಟಯ್ಯ**
ಬಿನ್ ಸಿದ್ದವೀರಯ್ಯ, ಇಂಡುವಾಳು,
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ
**ಮೊ. : 99023433686.**

**ಶ್ರೀ ಪುಟ್ಟಸ್ವಾಮಿ** (ವೀರಗಾಸೆ ಕಲಾವಿದ)
ಶಿವಾರ ಗ್ರಾಮ, ಕೆರಗೋಡು ಹೋಬಳಿ
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಹೆಮ್ಮಿಗೆ ಬಸವರಾಜು**
ಬಿನ್ ಮಾರಯ್ಯ, ಹೆಮ್ಮಿಗೆ ಗ್ರಾಮ,
ಸೂನಗನಹಳ್ಳಿ ಅಂಚೆ, ಕೊತ್ತತ್ತಿ ಹೋಬಳಿ
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
**ಮೊ. : 9980655407**

**ಶ್ರೀಮತಿ ದೊಡ್ಡತಾಯಮ್ಮ**
(ಜನಪದ ಹಾಡುಗಾರ್ತಿ) ಕಾರಸವಾಡಿ
ಕೊತ್ತತ್ತಿ ಹೋಬಳಿ, ಮಂಡ್ಯ ತಾ, ಮಂಡ್ಯ ಜಿಲ್ಲೆ.

**ಶ್ರೀಮತಿ ಚಿಕ್ಕತಾಯಮ್ಮ**
ಜನಪದ ಗೀತೆ ಗಾಯಕಿ
ಮಲ್ಲನಾಯಕನ ಕಟ್ಟೆಗ್ರಾಮ, ಗಾಣಂಧಾಳು
ಅಂಚೆ
ದುದ್ದ ಹೋಬಳಿ, ಮಂಡ್ಯ ತಾಲ್ಲೂಕು,
ಮಂಡ್ಯಜಿಲ್ಲೆ.

**ಶ್ರೀಮತಿ ಲಕ್ಷ್ಮಮ್ಮ**
(ಜನಪದ ಗೀತೆ ಗಾಯಕರು) ದಿ. ದ್ಯಾವಯ್ಯ
ಮಡಿವಾಳ, ಭಜನೆಮಂಡಲಿ ಗುತ್ತಲು, ಮಂಡ್ಯ.

**ಶ್ರೀ ರುದ್ರಪ್ಪ**
ಜನಪದ ಗೀತ ಗಾಯಕರು
ಗೊರವಾಲೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
**ಮೊ. : 9972289312**

**ಶ್ರೀ ಜವರಯ್ಯ**
ಬಿನ್ ಜಾಂಬಾಡಿ ದಾಸಯ್ಯ
ತತ್ತ್ವಪದ ಗಾಯಕರು, ಬಸರಾಳು
ಮಂಡ್ಯ ತಾ॥, ಮಂಡ್ಯ ಜಿಲ್ಲೆ.
**ಮೊ. : 9902429694.**

**ಶ್ರೀಮತಿ ಬೋರಮ್ಮ**
ತಂಬೂರಿ ಜವರಯ್ಯ ಬಸರಾಳು, ಮಂಡ್ಯ
ತಾಲ್ಲೂಕು, ಮಂಡ್ಯ ಜಿಲ್ಲೆ.
**ಮೊ. : 9902429694**

**ಶ್ರೀ ಕೆ.ಎಂ. ಕೃಷ್ಣೇಗೌಡ**
ಬಿನ್ ಮಳ್ಳಿ ಚನ್ನೇಗೌಡ, ಕೀಲಾರ
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ಗೌರಮ್ಮ** W/o ನಿಂಗೇಗೌಡ
ಕೀಲಾರ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
**ಮೊ. : 9008645270.**

**ಸಿ.ಆರ್. ವೆಂಕಟರಾಮ್**
ಬಿನ್ ರಾಮದಾಸಯ್ಯ, ಚೀರನಹಳ್ಳಿ
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಲಿಂಗದ ವೀರಪ್ಪ**
ಬಿನ್ ಶ್ರೀ ಸಿದ್ದವೀರಪ್ಪ
(ವೀರಭದ್ರನ ಕುಣಿತದ ಕಲಾವಿದ)
ದೊಡ್ಡಬೋಗನಹಳ್ಳಿ, ಚಿನಕುರುಳಿ ಹೋಬಳಿ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀ ಕೃಷ್ಣೇಗೌಡ**
ಬಿನ್ ದಿ॥ ಚಿಕ್ಕಹೊನ್ನೇಗೌಡ, ಹೆಗ್ಗಡಹಳ್ಳಿ
ಸುಂಕಾ ತೊಣ್ಣೂರು ಅಂಚೆ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.
**ಮೊ. : 9980941379**

**ಶ್ರೀ ನರಸಿಂಹಶೆಟ್ಟಿ**
ಬಿನ್ ದಿ॥ ಶ್ರೀ ನರಸಶೆಟ್ಟಿ
ಕದಲಗೆರೆ ಗ್ರಾಮ, ಮೇಲುಕೋಟೆ ಹೋಬಳಿ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀ ಆರ್. ಶಿವಣ್ಣಗೌಡ**
ಬಿನ್ ದಿವಂಗತ ಪಿ. ರಾಜೇಗೌಡ,
ಕದಲಗೆರೆ ಗ್ರಾಮ, ಮೇಲುಕೋಟೆ ಹೋಬಳಿ,
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀಮತಿ ನಾಗಮ್ಮ**
W/O ಶ್ರೀ ಹನುಮಂತೇಗೌಡ, ಲಕ್ಷ್ಮೀಸಾಗರ
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.
**ಮೊ : 9845349297**

**ಶ್ರೀಮತಿ ಕೆಂಚಮ್ಮ**
W/o ಶ್ರೀ ಪಾಪೇಗೌಡ, ಲಕ್ಷ್ಮೀಸಾಗರ
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ಭದ್ರಮ್ಮ**
W/o ಶ್ರೀ ಕೃಷ್ಣೇಗೌಡ, ಲಕ್ಷ್ಮೀಸಾಗರ,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ಹನುಮಮ್ಮ**
C/o ಶ್ರೀಮತಿ ನಾಗಮ್ಮ, ಲಕ್ಷ್ಮೀಸಾಗರ,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.
ವಿ.ಸೂ : ಮೇಲೆ ಸೂಚಿತ ನಾಲ್ವರು
ಮಹಿಳೆಯರನ್ನು ಸಂಪರ್ಕಿಸಲು ಮೇಲಿನ
ಮೊಬೈಲ್ ನಂಬರ್‌ಗೆ ಸಂಪರ್ಕಿಸಿ.

**ಶ್ರೀ ಸ್ವಾಮಿಗೌಡ ಸೋಬಾನೆ**
ಕೆರೆತೊಣ್ಣೂರು, ಪಾಂಡವಪುರ ತಾಲ್ಲೂಕು
ಮಂಡ್ಯಜಿಲ್ಲೆ.
**ಮೊ : 9008139530**

**ಶ್ರೀಮತಿ ಸೋಬಾನೆ ತಿಮ್ಮಮ್ಮ**
ದಿ॥ ವೆಂಕಟಯ್ಯನವರ ಪತ್ನಿ
ಹಿರೋಡೆ ಬೀದಿ, ನಾಗಮಂಗಲ ರಸ್ತೆ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀಮತಿ ಹನುಮಮ್ಮ**
(ಸೋಬಾನೆ ಹಾಡುಗಾರ್ತಿ), ಲಕ್ಷ್ಮೀಸಾಗರ
ಮಹದೇಶ್ವರ ಅಂಚೆ, ಮೇಲುಕೋಟೆ ಹೋಬಳಿ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀಮತಿ ಹೊನ್ನಮ್ಮ**
(ಜನಪದ ಗೀತೆ ಗಾಯಕಿ), ಹರಿಜನರ ಬೀದಿ
ಚಿಕ್ಕಾಡೆ, ಪಾಂಡವಪುರ ತಾಲ್ಲೂಕು,
ಮಂಡ್ಯ ಜಿಲ್ಲೆ.

**ಶ್ರೀ ಅಂಕಯ್ಯ** ಬಿನ್ ದಿ. ಚನ್ನಯ್ಯ
ಜನಪದ ಕಲಾವಿದರು ಚಿಕ್ಕಾಡೆ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀ ಶಿವಣ್ಣ**
ಬಿನ್ ದಿವಂಗತ ಕಾಳಯ್ಯ, ಸುಂಕಾತೊಣ್ಣೂರು
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀಮತಿ ತಾಯಮ್ಮ**
ಬಿನ್ ದಿ. ಮುಕುಂದೇಗೌಡ
ಜನಪದ ಗೀತೆ ಗಾಯಕಿ, ಲಕ್ಷ್ಮೀ ಸಾಗರ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀಮತಿ ನರಸಮ್ಮ**
ಬಿನ್ ಕುಳ್ಳಯ್ಯ, ಸೋಬಾನೆ ಗಾಯಕಿ
ಮಾದೇಶ್ವರ ಗ್ರಾಮ,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ಬೋರಮ್ಮ**
ಬಿನ್ ದಿ. ಪಟಸ್ವಾಮಯ್ಯ
ಸೋಬಾನೆ ಪದ, ಮಾದೇಶ್ವರ ಗ್ರಾಮ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀಮತಿ ಸರೋಜಮ್ಮ**
ಬಿನ್ ನಂಜುಂಡೇಗೌಡ
ಜನಪದ ಗೀತೆ ಗಾಯಕಿ, ಕೆರೆ ತೊಣ್ಣುರು,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ಜಯಮ್ಮ**
ಬಿನ್ ದಿ। ಕೃಷ್ಣೇಗೌಡ
ಸೋಬಾನೆ ಹಾಡುಗಾರ್ತಿ, ಲಕ್ಷ್ಮೀಸಾಗರ
ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀ ಎಚ್. ಕೆ. ಸಿದ್ದರಾಜು**
ಅಗ್ರಹಾರ, ಬಸವನ ಗುಡಿ ಬೀದಿ
ಕೆ.ಆರ್. ಪೇಟೆ, ಮಂಡ್ಯಜಿಲ್ಲೆ.
**ಮೊ.: 9880358379, 9482380186.**

**ಶ್ರೀಮತಿ ಸಾಕಮ್ಮ**
ದಿ। ಶಂಭೂಗೌಡರ ಪತ್ನಿ ಚೋಳಮಾರನಹಳ್ಳಿ,
ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
**ಫೋನ್ : 261554. ಮೊ. : 9972831549**

**ಶ್ರೀ ಅಂಗಡಿ ಜಯರಾಮ್**
ಬಿನ್ ಚಿಕ್ಕಪುಟ್ಟೇಗೌಡ, ಗೌಡಯ್ಯನ ದೊಡ್ಡಿ
ಮದ್ದೂರು ತಾಲ್ಲೂಕು ಮಂಡ್ಯ ಜಿಲ್ಲೆ.
**ಮೊ. : 9611602939**

**ಶ್ರೀ ಡಿ. ಎಂ. ಮಹೇಶ್**
ಬಿನ್ ಚಕ್ಕಮಾಯಿಗೌಡ, ಚಕ್ಕಮರಿಗೌಡನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಚಿಕ್ಕೇಗೌಡ**
(ರಂಗದ ಕುಣಿತದ ಕಲಾವಿದ), ಮಣಿಗೆರೆ
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.
**ಫೋನ್–3440001**

**ಶ್ರೀನಿವಾಸಪ್ಪಸ್ವಾಮೀಜಿ**
ಅರೆತಿಪ್ಪೂರು, ಚಿಕ್ಕರಸಿನಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀ ಮಂಚಯ್ಯ ಕನ್ನಲಿ**
ಬಿನ್ ಕುಂಟಯ್ಯ, ಕನ್ನಲಿಗ್ರಾಮ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಸಿದ್ದಯ್ಯ**
ಬಿನ್ ಕುಂಡಸಿದ್ಧ ಬೋಯಿ,ತೈಲೂರು
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಬಸವೇಗೌಡ**
ಬಿನ್ ರಂಗೇಗೌಡ
ಎಲೆಕೊಪ್ಪ, ಬೆಳ್ಳೂರು ಹೋಬಳಿ
ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಬಿ.ಕೆ. ರಾಮಣ್ಣ**
ಬಿನ್ ಕರೀಗೌಡ ಬೈರಸಂದ್ರ, ನಾಗಮಂಗಲ
ತಾಲ್ಲೂಕು ಮಂಡ್ಯಜಿಲ್ಲೆ.

**ಶ್ರೀ ಚಿಕ್ಕೀರಯ್ಯ**
(ಪಾಳೆಗಾರ ವೇಷ), ಬ್ಯಾಲದ ಕೆರೆ ನಾಗಮಂಗಲ
ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಗಂಗಣ್ಣ**
ಕೋಲಾಟದ ಕಲಾವಿದ, ಮಾಯಗೋನಹಳ್ಳಿ
ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ಗಿರಿಯಮ್ಮ**
(ಜನಪದ ಗೀತೆ ಗಾಯಕಿ)
ಚಂಚನಹಳ್ಳಿ ಪಾಳ್ಯ
ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆ.
**ಮೊ: 9686013826**

**ಶ್ರೀಮತಿ ಮರಿಅರಸಮ್ಮ**
ಬಿನ್ ವೆಂಕಟೇಗೌಡ
ಜನಪದ ಗೀತೆ ಗಾಯಕಿ, ಕಾಡಂಕನ ಹಳ್ಳಿ
ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಸ್ವಾಮಿ** (ನೀಲಗಾರ)
ಬಿನ್ ಸಿದ್ಧಯ್ಯ, ಎಂ.ಶೆಟ್ಟಿಹಳ್ಳಿ
ಶ್ರೀ ರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
**ಮೊ : 9972446956**

**ಶ್ರೀಮತಿ ಪುಟ್ಟಲಿಂಗಮ್ಮ**
ಶ್ರೀ ದಾಸಯ್ಯ ಅವರ ಪತ್ನಿ,
ಸಬ್ಬನಕುಪ್ಪೆ, ಎಂ. ಶೆಟ್ಟಿಹಳ್ಳಿ ಅಂಚೆ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯಜಿಲ್ಲೆ.
**ಮೊ: 9164048521**

**ಶ್ರೀಮತಿ ದೊಡ್ಡತಾಯಮ್ಮ**
ಶ್ರೀ ತಿಮ್ಮರಾಜು ಅವರ ಪತ್ನಿ
ಸಬ್ಬನಕುಪ್ಪೆ, ಎಂ. ಶೆಟ್ಟಿಹಳ್ಳಿ ಅಂಚೆ,
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯಜಿಲ್ಲೆ.

**ಶ್ರೀ ಹಿಂದಲಹಟ್ಟಿ**
ಚನ್ನೇಗೌಡ ಬಿನ್ ತಮ್ಮೇಗೌಡ, ಅರಕೆರೆ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ
**ಮೊ : 9986560078 (ರವಿ)**

**ಶ್ರೀ ಮೂಗಣ್ಣ (ಕೃಷ್ಣ)**
ಬಿನ್ ಹೊಸಹಟ್ಟಿ ಜವರೇಗೌಡ, ಅರಕೆರೆ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ಪುಟ್ಟಸಿದ್ದಮ್ಮ**
ಬಿನ್ ನರಸಯ್ಯ
ಜನಪದ ಗೀತೆ ಗಾಯಕಿ
ಬಲ್ಲೇನಹಳ್ಳಿ, ಕೆ. ಶೆಟ್ಟಿಹಳ್ಳಿ ಹೋಬಳಿ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀಮತಿ ವೆಂಕಟಮ್ಮ**
ಬಿನ್ ವೆಂಕಟಯ್ಯ
ಜನಪದ ಗೀತೆ ಗಾಯಕಿ
ಬಲ್ಲೇನಹಳ್ಳಿ, ಕೆ. ಶೆಟ್ಟಿಹಳ್ಳಿ ಹೋಬಳಿ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

**ಕಂಸಾಳೆ ಮಹದೇವಯ್ಯ**
ಬಿನ್ ದಿ। ಮಾದೇಗೌಡ
ಕಲ್ಲಾರೆಪುರ ಗ್ರಾಮ, ಕಿರುಗಾವಲು ಹೋಬಳಿ
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಎಲ್. ಮಾದಯ್ಯ**
ಬಿನ್ ದಿ। ಚಿಕ್ಕಲಿಂಗೇಗೌಡ
ಕಲ್ಲಾರೆಪುರ ಗ್ರಾಮ, ಕಿರುಗಾವಲು ಹೋಬಳಿ
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಎಂ. ಮಹದೇವ ಸ್ವಾಮಿ**
(ನೀಲಗಾರ ಮೇಳ) ಕನಕಪುರ ರಸ್ತೆ
ಕೀರ್ತಿನಗರ, ಮಳವಳ್ಳಿ ತಾಲ್ಲೂಕು
ಮಂಡ್ಯ ಜಿಲ್ಲೆ, **ಮನೆ ಫೋ : 242559**
**ಮೊ : 9448740745**

**ಶ್ರೀ ಕಾಳೀರಯ್ಯ** (ಜನಪದ ಕಲಾವಿದ)
ಶ್ರೀ ಉಮಾಮಹೇಶ್ವರಿ ಜನಪದ ಕಲಾತಂಡ
ತಳಗವಾದಿ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಚೀರ್‍ಣಿ**
(ಪೂಜಾ ಕುಣಿತದ ಕಲಾವಿದ) ತಳಗವಾದಿ
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.
**ಫೋ : 08231-244116**

**ಶ್ರೀ ಭೂಮಿಗೌಡ**
(ಕೋಲಾಟದ ಕಲಾವಿದ), ದೇವೀಪುರ
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

**ಶ್ರೀ ಕರಿಯಪ್ಪ** (ನೀಲಗಾರ)
ಬಿನ್ ದಿವಂಗತ ಮಾದೇಗೌಡ, ಕಲ್ಲಾರೆಪುರ,
ಕಿರುಗಾವಲು ಹೋಬಳಿ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.
**ಮೊ : 9845849451 : 9902787456**

# ಪರಾಮರ್ಶನ ಗ್ರಂಥಗಳು

1. ಬದುಕು
(ಅಖಿಲ ಕರ್ನಾಟಕ ಜನಪದ ಮೇಳ ಮದ್ದೂರು, 1986)
ಪ್ರಕಟಣೆ : ಮಂಡ್ಯ ಜಿಲ್ಲಾ ಜನಪದ ಪರಿಷತ್ತು, ಮಂಡ್ಯ

2. ಒಕ್ಕಣೆ
(ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶ 1999 ಸ್ಮರಣ ಸಂಚಿಕೆ)
ಸಂ : ಪ್ರೊ.: ಎಸ್.ಬಿ. ಶಂಕರಗೌಡ
ಪ್ರಕಟಣೆ : ಸ್ವಾಗತ ಸಮಿತಿ ಮಂಡ್ಯ.



ಜಾನಪದದ ಸರ್ವಾಂಗೀಣವೂ, ತಲಸ್ಪರ್ಶಿಯೂ ಆದ ಅಧ್ಯಯನ ಇಂದಿನ ತುರ್ತು. ಬದಲಾದ ಕಾಲಮಾನ, ವಸಾಹತೋತ್ತರ ಜಿಜ್ಞಾಸೆ, ಆಧುನಿಕತೆಗಳ ಆಯಾಮಗಳನ್ನು ಮೀರಿದ ದೇಶಿ ಹುಡುಕಾಟ ಹಿಂದೆಂದಿಗಿಂತಲೂ ಇಂದು ಪ್ರಸ್ತುತ.

ಆ ನೆಲೆಯಲ್ಲಿ ಅಕಾಡೆಮಿ ಭಿನ್ನ ಆಲೋಚನೆಗಳಿಂದ ತನ್ನನ್ನು ಪುನಃ ರೂಪಿಸಿಕೊಳ್ಳುತ್ತಿದೆ. ಗ್ರಾಮೀಣ ಜಾನಪದದ ಬೆನ್ನೆಲುಬಾದ ಕಲಾವಿದರಿಗೆ ವೇದಿಕೆಗಳನ್ನು ಕಲ್ಪಿಸಿಕೊಡುವುದರ ಜೊತೆ ಜಾನಪದದ ಬೌದ್ಧಿಕ ಅಸ್ತಿತ್ವಕ್ಕೂ ಯತ್ನಿಸಲಾಗಿದೆ. ಆ ದಿಕ್ಕಿನಲ್ಲಿ ಅಕಾಡೆಮಿ ಹಮ್ಮಿಕೊಳ್ಳುವ ವಿಚಾರಸಂಕಿರಣಗಳು ಗಮನಾರ್ಹ. ಈ ದಿಸೆಯಲ್ಲಿ ಅಕಾಡೆಮಿ ಅವ್ಯಾಹತವಾಗಿ ಕ್ರಿಯಾಶೀಲವಾಗಿದೆ.



೩೦ ಜಿಲ್ಲೆಗಳ ಕಲಾವಿದರ ಪರಿಚಯದ ಮಾಲಿಕೆಗಳು ಅಕಾಡೆಮಿಯ ಸ್ತುತ್ಯ ಪ್ರಕಟಣೆಗಳಾಗಿವೆ. ದೇಶೀಯತೆಯ ವಕ್ತಾರರಾದ, ಸಾಂಸ್ಕೃತಿಕ ರಾಯಭಾರಿಗಳಾದ ಈ ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಉದ್ದೇಶದ ಈ ಮಾಲಿಕೆ ಜನಪದರಿಗೆ ಹಾಗೂ ಜನಪದಕ್ಕೆ ನಿಜವಾಗಿಯೂ ಸಲ್ಲಿಸಿದ ಗೌರವವಾಗಿದೆ.

ಡಾ. ಎಸ್. ಪ್ರಸಾದಸ್ವಾಮಿ
ರಿಜಿಸ್ಟ್ರಾರ್



ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು